ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



**ಏಪ್ರಿಲ್ ೧ನೇ ವಾರ**

30-03-2026 TO 04-04-2026

# ಆದಿತ್ಯ-ಎಲ್ 1: ದತ್ತಾಂಶ ಅಧ್ಯಯನಕ್ಕೆ ಅವಕಾಶ

'ಕಾಮ್-ಬ್ರೈನ್' ಡಿಜಿಟಲ್ ಮಾಹಿತಿ

ವಿತ್ತೀಯ ಕೊರತೆ ₹12.52 ಲಕ್ಷ ಕೋಟಿ

ಮಿಥೆನಾಲ್ ಮಿಶ್ರಿತ ಇಂಧನ

ರವಿವರ್ಮನ ಕಲಾಕೃತಿಗೆ ₹167 ಕೋಟಿ

## ❖ 3 ವರ್ಷದ ಹಿಂದೆ ಬಿಎಂಟಿಸಿ ಬಸ್‌ಗಳಲ್ಲಿ ಮಿಥೆನಾಲ್ ಮಿಶ್ರಿತ ಇಂಧನ ಪ್ರಯೋಗ


**ಸಂದರ್ಭ: ಪ್ರಯೋಗಕ್ಕೆ ಸೀಮಿತವಾದ ಮಿಥೆನಾಲ್: ಡೀಸೆಲ್ ಮೇಲಿನ ಅವಲಂಬನೆ ಕಡಿಮೆ ಮಾಡಲು, ವಾಯುಮಾಲಿನ್ಯ ತಡೆಯಲು ಮಿಥೆನಾಲ್ ಮಿಶ್ರಿತ ಇಂಧನ ಪ್ರಯೋಗವನ್ನು ಮೂರು ವರ್ಷಗಳ ಹಿಂದೆ ಬಿಎಂಟಿಸಿ ಬಸ್‌ಗಳಲ್ಲಿ ನಡೆಸಲಾಗಿತ್ತು. ಇದು ಪ್ರಯೋಗಕ್ಕೆ ಸೀಮಿತಗೊಂಡಿದ್ದು, ಬಿಎಂಟಿಸಿಯ ಯಾವುದೇ ಬಸ್‌ಗಳಲ್ಲಿ ಇದುವರೆಗೆ ಅಳವಡಿಕೆಯಾಗಿಲ್ಲ.**

- ಕೇಂದ್ರ ರಸ್ತೆ ಸಾರಿಗೆ ಸಚಿವಾಲಯದ ಸೂಚನೆಯಂತೆ 2016ರಲ್ಲಿ ನೀತಿ ಆಯೋಗವು ಮಿಥೆನಾಲ್ ಮಿಶ್ರಿತ ಇಂಧನ ಪ್ರಯೋಗ ಆರಂಭಿಸಿತ್ತು. ಸತತ 7 ವರ್ಷ ವಿವಿಧ ವಾಹನಗಳಲ್ಲಿ ಪ್ರಯೋಗ ನಡೆಸಿತ್ತು. ಸಕಾರಾತ್ಮಕ ಫಲಿತಾಂಶ ಬಂದ ಬಳಿಕ ಸಾರಿಗೆ ವಾಹನಗಳಲ್ಲಿ ಈ ಪ್ರಯೋಗ ನಡೆಸಲು ನಿರ್ಧರಿಸಿತ್ತು. 2023ರ ಮಾರ್ಚ್‌ನಲ್ಲಿ ದೇಶದಲ್ಲೇ ಪ್ರಥಮ ಬಾರಿಗೆ ಬಿಎಂಟಿಸಿಯ 20 ಬಸ್‌ಗಳಲ್ಲಿ ಪ್ರಯೋಗ ಆರಂಭಿಸಿತ್ತು. ನಾಲ್ಕು ತಿಂಗಳು ಈ ಬಸ್‌ಗಳು ಮಿಥೆನಾಲ್ ಮಿಶ್ರಿತ ಇಂಧನದಲ್ಲಿ ಸಂಚರಿಸಿದ್ದವು.
- 'ಅಶೋಕ ಲೈಲ್ಯಾಂಡ್ ಕಂಪನಿಯು ತಯಾರಿಸಿದ ಬಸ್‌ಗಳನ್ನು ಪ್ರಯೋಗಕ್ಕೆ ಬಳಸಲಾಗಿತ್ತು. 3.2 ಲಕ್ಷ ಕಿ.ಮೀ. ಓಡಾಟ ನಡೆಸಿದ ಬಳಿಕ ಎರಡು ಬಸ್‌ಗಳ ಎಂಜಿನ್‌ಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಪ್ರಯೋಗಾಲಯದ ವರದಿ, ಸಂಚಾರದ ಸಮಯದ ಸ್ಥಿತಿಗತಿ ಎಲ್ಲ ಸೇರಿಸಿ ಸಾರಿಗೆ ಸಚಿವಾಲಯಕ್ಕೆ ವರದಿ ನೀಡಲಾಗಿದೆ' ಎಂದು ಮಿಥನಾಲ್ ಕೋರ್ ಕಮಿಟಿ ಸದಸ್ಯ ಪ್ರಶಾಂತ್ ಶ್ರೀನಿವಾಸ್ ತಿಳಿಸಿದರು.
- 'ಮಿಥೆನಾಲ್ ಮಿಶ್ರಿತ ಇಂಧನ ಪ್ರಯೋಗದ ಸಂದರ್ಭದಲ್ಲಿ ಪ್ರತಿ ಕಿಲೋಮೀಟರ್‌ಗೆ ಸುಮಾರು 10 ಉಳಿತಾಯವಾಗಿದೆ. ಡೀಸೆಲ್ ಎಂಜಿನ್ ವಾಹನಗಳನ್ನೇ ಇದಕ್ಕೆ ಬಳಸಲಾಗಿತ್ತು. ಸಣ್ಣ ಅವಧಿಯ ಪ್ರಯೋಗದ ಸಮಯದಲ್ಲಿ ದೊಡ್ಡ ಮಟ್ಟದ ಸಮಸ್ಯೆ ಕಾಣಿಸಿಕೊಂಡಿಲ್ಲ, ದೀರ್ಘ ಕಾಲ ಬಳಸಿದಾಗ ಪರಿಣಾಮ ಹೇಗಿರುತ್ತದೆ ಎಂಬುದು ಗೊತ್ತಾಗಿಲ್ಲ. ಡೀಸೆಲ್ ಎಂಜಿನ್ ವಾಹನದಲ್ಲಿ ಮಿಥೆನಾಲ್ ಮಿಶ್ರಿತ ಡೀಸೆಲ್ ಬಳಸಿದಾಗ ಎಂಜಿನ್ ತುಕ್ಕು ಹಿಡಿಯುವ ಸಾಧ್ಯತೆ ಇರುತ್ತದೆ. ಇಂಧನದಲ್ಲಿ ಉಳಿತಾಯ ಆಗಿದ್ದಕ್ಕಿಂತ ಹೆಚ್ಚು ಎಂಜಿನ್‌ಗೆ ವೆಚ್ಚವಾದರೆ ಕಷ್ಟ' ಎಂದು ಬಿಎಂಟಿಸಿ ಎಂಜಿನಿಯರ್ ಒಬ್ಬರು ತಿಳಿಸಿದ್ದಾರೆ.
- ಪ್ರಯೋಗಕ್ಕಾಗಿ ನಮ್ಮ ಬಸ್‌ಗಳನ್ನು ಕೇಳಿದ್ದರು. ಬಸ್ ಒದಗಿಸಲಾಗಿತ್ತು. ಆನಂತರ ಎಲ್ಲಿ ಅನುಷ್ಠಾನ ಮಾಡುತ್ತಾರೆ ಎಂಬುದೆಲ್ಲ ನಮಗೆ ಸಂಬಂಧಿಸಿದ್ದಲ್ಲ. ಈ ವಿಚಾರದಲ್ಲಿ ನಾವು ಪ್ರತಿಕ್ರಿಯಿಸುವಂತೆಯೂ ಇಲ್ಲ' ಎಂದು ಬಿಎಂಟಿಸಿ ಅಧಿಕಾರಿಗಳು ಹೇಳಿದರು.
- 'ಯುದ್ಧದ ಕರಿನೆರಳು ಪೆಟ್ರೋಲ್ ಡೀಸೆಲ್ ಮೇಲೂ ಬೀಳುತ್ತಿರುವುದರಿಂದ ಮಿಥನಾಲ್ ಬಳಕೆ ಮಾಡಿದ್ದರೆ ಡೀಸೆಲ್ ಮೇಲಿನ ಅವಲಂಬನೆ ಕಡಿಮೆ ಮಾಡಬಹುದಿತ್ತು. ಮಿಥನಾಲ್ ಬೆಲೆ ₹25ರಿಂದ ₹27 ಇರುವುದರಿಂದ ವೆಚ್ಚ ಕಡಿಮೆಯಾಗುತ್ತಿತ್ತು' ಎಂದು ಚಾಲಕರೊಬ್ಬರು ತಿಳಿಸಿದರು.

### ಪ್ರಯೋಗವೇನು?

- ಈ 15ರಷ್ಟು ಮಿಥನಾಲ್ ಶೇ 12ರಷ್ಟು ಕಪ್ಪರ್ಸ್, ಶೇ 2ರಷ್ಟು ಸಿಟೇನ್ ಇಂಪವರ್ ಹಾಗೂ ಶೇ 71 ಭಾಗ ಡೀಸೆಲ್ ಮಿಶ್ರಣ ಮಾಡಿ ಬಳಸಲಾಗುತ್ತದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಮಿಥೆನಾಲ್ ಮಿಶ್ರಣ ಮಾಡಿ ಇಂಧನ ಒದಗಿಸಿತ್ತು. 80 ಸಾವಿರ ಲೀಟರ್ ಮಿಥನಾಲ್ ಮಿಶ್ರಣ ಇಂಧನ ಬಳಕೆ ಮಾಡಲಾಗಿತ್ತು.

Dr. Rajkumar IAS/KAS Academy



# ಪದವೀಧರರೂ ಹೆಚ್ಚು ನಿರುದ್ಯೋಗವೂ ಹೆಚ್ಚು

**ಅಜೀಂ ಪ್ರೇಮ್‌ಜಿ ವಿ.ವಿ. ಅಧ್ಯಯನ; ಯುವಜನರ ಶೈಕ್ಷಣಿಕ ಮತ್ತು ಉದ್ಯೋಗ ಸ್ಥಿತಿಗತಿಗಳ ವರದಿ**

ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ 'ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ– 2026' ಭಾರತದಲ್ಲಿನ ವಿದ್ಯಾಭ್ಯಾಸ ಮತ್ತು ಉದ್ಯೋಗ ಸ್ಥಿತಿಗತಿಯ ಬಗ್ಗೆ ಹಲವು ಒಳನೋಟಗಳನ್ನು ಬೀರಿದೆ. ದೇಶದಲ್ಲಿ ವಿದ್ಯಾವಂತರ ಪ್ರಮಾಣ ಹೆಚ್ಚುತ್ತಿದೆ. ಅದರಲ್ಲೂ ವಿವಿಧ ಜಾತಿ, ಲಿಂಗ, ಪ್ರದೇಶಗಳ ಜನ ವಿದ್ಯಾಭ್ಯಾಸ ಪಡೆಯುವ ವಿಚಾರದಲ್ಲಿ ದಶಕಗಳಿಂದ ಇದ್ದ ಹಲವು ರೀತಿಯ ಕೊರತೆ–ಅಂತರಗಳು ಕಡಿಮೆ ಆಗಿವೆ. ಆದರೆ, ಪದವೀಧರರ ಪ್ರಮಾಣಕ್ಕೆ ತಕ್ಕಂತೆ ಉದ್ಯೋಗ ಸೃಷ್ಟಿ ಆಗದೇ ದೇಶದಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಾಗಿದೆ. ಉದ್ಯೋಗಿಗಳ ಪ್ರಮಾಣ, ಕೌಶಲಕ್ಕೆ ತಕ್ಕಂತೆ ಎಂಥ ಉದ್ಯೋಗಗಳನ್ನು ಮುಂದಿನ ದಿನಗಳಲ್ಲಿ ಸೃಷ್ಟಿಸಲಾಗುತ್ತದೆ ಎನ್ನುವುದರ ಮೇಲೆ ದೇಶವು ಎಂಥ ಆರ್ಥಿಕತೆ ಆಗಲಿದೆ ಎನ್ನುವುದು ನಿರ್ಧಾರವಾಗುತ್ತದೆ ಎಂದು ವರದಿ ಹೇಳಿದೆ

**2011ರಿಂದ 29 ವರ್ಷದವರೆಗಿನ ಪದವೀಧರರು ಮತ್ತು ನಿರುದ್ಯೋಗಿ ಪದವೀಧರರು**

| ವರ್ಷ | ಪದವೀಧರರು | ನಿರುದ್ಯೋಗಿ ಪದವೀಧರರು |
|---|---|---|
| 1983 | 50 ಲಕ್ಷ (4%) | 70 ಸಾವಿರ (13%) |
| 1993 | 90 ಲಕ್ಷ (6%) | 20 ಲಕ್ಷ (22%) |
| 2004 | 1.9 ಕೋಟಿ (10%) | 30 ಲಕ್ಷ (32%) |
| 2011 | 3.2 ಕೋಟಿ (16%) | 40 ಲಕ್ಷ (44%) |
| 2017 | 4.9 ಕೋಟಿ (22%) | 1 ಕೋಟಿ (46%) |
| 2023 | 6.3 ಕೋಟಿ (28%) | 1.1 ಕೋಟಿ (67%) |

**ವರದಿಯ ಪ್ರಮುಖಾಂಶ**

**2030ರ ಬಳಿಕ ಯುವಜನರ ಸಂಖ್ಯೆ ಕುಸಿತ**

**ಐಟಿ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಮಹಿಳೆಯರು**

**ಯುವಕರು ಕೃಷಿಯಿಂದ ವಿಮುಖ**

**ಕೃಷಿ ಕಾರ್ಮಿಕಬಲ** (20-29 ವರ್ಷ / 30-64 ವರ್ಷ)


| ವರ್ಷ | ಪುರುಷರ ಪಾಲು (%) 20-29 | ಪುರುಷರ ಪಾಲು (%) 30-64 | ಮಹಿಳೆಯರ ಪಾಲು (%) 20-29 | ಮಹಿಳೆಯರ ಪಾಲು (%) 30-64 |
|---|---|---|---|---|
| 1983 | 56 | 58 | 75 | 75 |
| 1993 | 54 | 55 | 73 | 75 |
| 2004 | 45 | 49 | 67 | 73 |
| 2011 | 37 | 43 | 52 | 62 |
| 2017 | 31 | 41 | 44 | 56 |
| 2023 | 27 | 36 | 49 | 63 |

## ❖ 'ಭಾರತಕ್ಕೆ ಧನ್ಯವಾದ'

**ಸಂದರ್ಭ: ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾದ ತೈಲ ಬಿಕ್ಕಟ್ಟು ಬಗೆಹರಿಸಲು ನೆರವು ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸ್ಸನಾಯಕೆ ಅವರು ಧನ್ಯವಾದ ಸಲ್ಲಿಸಿದ್ದಾರೆ.**

- 20 ಸಾವಿರ ಟನ್‌ಷ್ಟು ಡೀಸೆಲ್, 18 ಸಾವಿರ ಟನ್ ಪೆಟ್ರೋಲ್ ಸೇರಿ ಒಟ್ಟು 38 ಸಾವಿರ ಟನ್‌ನಷ್ಟು ತೈಲ ತುಂಬಿದ್ದ ಭಾರತದ ಹಡಗು ಶನಿವಾರ ಕೊಲಂಬೊ ಬಂದರು ತಲುಪಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಮತ್ತು ಶ್ರೀಲಂಕಾದ ಐಒಸಿ ಸಹಯೋಗದಲ್ಲಿ ಈ ತುರ್ತು ಕಾರ್ಯಾಚರಣೆ ನಡೆದಿದೆ ಎಂದು ಅವರು ಹೇಳಿದ್ದಾರೆ.
- 'ಭಾರತದ ತುರ್ತು ನೆರವಿಗಾಗಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರಿಗೂ ಧನ್ಯವಾದ ಅರ್ಪಿಸುತ್ತೇನೆ' ಎಂದು ದಿಸ್ಸನಾಯಕೆ ಸಾಮಾಜಿಕ ಜಾಲತಾಣದಲ್ಲಿ ಹೇಳಿದ್ದಾರೆ.

**ಆರೋಗ್ಯ ವಿಮೆ, ಭೂ ಹಕ್ಕು, ಮಹಿಳೆಯರಿಗೆ ಆರ್ಥಿಕ ನೆರವು ಮತ್ತು ಗಾಯಕ ಜುಬಿನ್ ಗರ್ಗ್ ಸಾವಿಗೆ ಸಂಬಂಧಿಸಿ ನ್ಯಾಯದಾನ ಸೇರಿ ಕಾಂಗ್ರೆಸ್ ಪಕ್ಷವು ಒಟ್ಟು ಐದು ಗ್ಯಾರಂಟಿಗಳನ್ನು ಅಸ್ಸಾಂ ಜನತೆಗೆ ನೀಡಿದೆ. ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಗ್ಯಾರಂಟಿಗಳನ್ನು ಘೋಷಿಸಿದರು.**



**ಯಾವುದೆಲ್ಲಾ ಐದು ಗ್ಯಾರಂಟಿಗಳು?**

- ರಾಜ್ಯದ ಪ್ರತೀ ಮಹಿಳೆಗೆ ಮಾಸಿಕ ಆರ್ಥಿಕ ನೆರವು. ಮಹಿಳೆಯರು ಉದ್ಯಮವನ್ನು ಆರಂಭಿಸುತ್ತಾರೆ ಅಥವಾ ವಿಸ್ತರಿಸುತ್ತಾರೆ ಎಂದರೆ, ಹೆಚ್ಚುವರಿಯಾದ ₹50 ಸಾವಿರ ನೆರವು
- ಎಲ್ಲ ಕುಟುಂಬಗಳಿಗೂ ₹25 ಲಕ್ಷ ಆರೋಗ್ಯ ವಿಮೆ
- ಹಿರಿಯ ನಾಗರಿಕರಿಗೆ ಮಾಸಿಕ ₹1,250 ಪಿಂಚಣಿ. ಹಿರಿಯ ನಾಗರಿಕರಿಗಾಗಿಯೇ ಪ್ರತ್ಯೇಕ ಸಚಿವಾಲಯ
- ಬುಡಕಟ್ಟುಗಳ 100 ಕುಟುಂಬಗಳ ಭೋಗ್ಯ ಕರಾರು ಪಟ್ಟಾ ಜಮೀನನ್ನು ಮಾಲೀಕತ್ವ ಬದಲಾವಣೆ ಪಟ್ಟಾವಾಗಿ ಬದಲಾಯಿಸಿ ಕೊಡುವ ಭೂಮಿ ಹಕ್ಕು ಯೋಜನೆ
- ಅಧಿಕಾರಕ್ಕೆ ಬಂದ 100 ದಿನಗಳ ಒಳಗೆ ಗಾಯಕ ಜುಬಿನ್ ಗರ್ಗ್ ಸಾವಿನ ಪ್ರಕರಣದಲ್ಲಿ ನ್ಯಾಯದಾನ

- ಸಾರ್ವಜನಿಕ ರಾಲಿಯಲ್ಲಿ ಮಾತನಾಡಿದ ಖರ್ಗೆ, 'ದೆಹಲಿಯಲ್ಲಿನ ತಮ್ಮ ನಾಯಕರು ಮತ್ತು ಅವರ ಕುಟುಂಬದವರ ಬೊಕ್ಕಸವನ್ನು ತುಂಬಿಸಲು ಇಲ್ಲಿನ 'ಡಬಲ್ ಎಂಜಿನ್' ಬಿಜೆಪಿ ಸರ್ಕಾರವು ತೀವ್ರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಅಸ್ಸಾಂ ಅನ್ನು ಲೂಟಿ ಹೊಡೆಯುತ್ತಿದೆ. ಭ್ರಷ್ಟಾಚಾರದಲ್ಲಿ ಬಿಜೆಪಿ ನಾಯಕರ ಕುಟುಂಬದವರೂ ಸೇರಿಕೊಂಡಿದ್ದಾರೆ' ಎಂದು ಆರೋಪಿಸಿದರು.
- 'ಅಸ್ಸಾಂನ ಒಂದೇ ಕುಟುಂಬದ ಬಳಿ 12 ಸಾವಿರ ಎಕರೆ ಜಮೀನು ಇದೆ. ರಾಜ್ಯದ ನೆಲವನ್ನು ಅದಾನಿ ಮತ್ತು ರಾಮ್ ದೇವ್ ಅವರಿಗೆ ನೀಡಲಾಗಿದೆ. ಸರ್ಕಾರಿ ಭೂಮಿಯನ್ನು ಲೂಟಿ ಮಾಡಲಾಗುತ್ತಿದೆ. ಅಲಿ ಬಾಬಾ ಮತ್ತು 40 ಕಳ್ಳರು ಲೂಟಿ ಮಾಡುವುದನ್ನು ತಡೆಯಬೇಕು. ದೆಹಲಿಯಲ್ಲಿ ಅಲಿ ಬಾಬಾ ಕುಳಿತಿದ್ದಾರೆ. ರಾಜ್ಯದ ವಿವಿಧೆಡೆ 40 ಕಳ್ಳರು ವ್ಯಾಪಿಸಿಕೊಂಡಿದ್ದಾರೆ' ಎಂದರು.
- ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರನ್ನು ಟೀಕಿಸಿದ ಖರ್ಗೆ, 'ಶರ್ಮಾ ಅವರು ನಕಲಿ ಮುಖ್ಯಮಂತ್ರಿ ಸರ್ಬಾನಂದ ಸೋನೋವಾಲ್ ಅವರ ನೇತೃತ್ವದಲ್ಲಿ 2021ರ ಚುನಾವಣೆಯನ್ನು ಪಕ್ಷವು ನಡೆಸಿತ್ತು. ಆದರೆ, ಚುನಾವಣೆ ಆದ ಮೇಲೆ ಬುಡಕಟ್ಟು ನಾಯಕರಾದ ಸೋನೋವಾಲ್ ಅವರನ್ನು ಕಿತ್ತು ಹಾಕಿ ತಾವೇ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತುಕೊಂಡರು' ಎಂದು ಅವರು ಹೇಳಿದರು.
- 'ದಲಿತರು ಸೇವೆ ಮಾಡುವುದಕ್ಕಾಗಿಯೇ ಜನಿಸಿದವರು' ಎಂದು ಶರ್ಮಾ ಅವರು 'ಎ'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದರು. ಬಳಿಕ ಅದನ್ನು ಅಳಿಸಿ ಹಾಕಿದರಾದರೂ ಅವರ ಮನಃಸ್ಥಿತಿಯನ್ನು ಈ ಪೋಸ್ಟ್ ತೋರಿಸುತ್ತದೆ. ಇಂಥವರನ್ನು ಬಿಜೆಪಿ ಮುಖ್ಯಮಂತ್ರಿಯನ್ನಾಗಿ ಮಾಡಿದೆ. ದ್ವೇಷ ಭಾಷಣದಲ್ಲಿ ಶರ್ಮಾ ಅವರು ದೇಶದಲ್ಲೇ ಮುಂಚೂಣಿಯಲ್ಲಿದ್ದಾರೆ' ಎಂದು ಲೇವಡಿ ಮಾಡಿದರು.

## ❖ ವಿಶ್ವ ವುಶು ಚಾಂಪಿಯನ್‌ಷಿಪ್: ಭಾರತಕ್ಕೆ 2 ಕಂಚು

**ಸಂದರ್ಭ: ಭಾರತದ ಗೌತಮ್ ಮಂಕಾಸ್ ಹಾಗೂ ಅನು ಅವರು ಇಲ್ಲಿ ನಡೆಯುತ್ತಿರುವ 10ನೇ ವಿಶ್ವ ವುಶು ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಭಾನುವಾರ ಕಂಚಿನ ಪದಕ ಗೆದ್ದುಕೊಂಡರು. ಉಪೇಂದ್ರೋ ಚೌಗಮ್, ಪಮಾ ಹೀಬಾ ಸಿಂಗ್, ಯುವರಾಜ್ ಹಾಗೂ ವಿಕ್ಟರ್ ಅವರು ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಸುತ್ತು ಪ್ರವೇಶಿಸಿದರು.**

- ಗೌತಮ್ ಅವರು ಬಾಲಕರ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ ಪರಾಭವಗೊಂಡರು. ಅನು ಅವರು ನಾಲ್ಕರ ಘಟದಲ್ಲಿ ಚೀನಾದ ಝೂಂಗ್ ಲಿನಿಂಗ್ ವಿರುದ್ಧ ಸೋತರು.
- ಉಪೇಂದ್ರೋ ಅವರು ಸೆಮಿಫೈನಲ್ ಪಂದ್ಯದಲ್ಲಿ ಈಜಿಪ್ಟ್‌ನ ಅಹ್ಮದ್ ಮೊಹಮ್ಮದ್ ಅವರನ್ನು ಸೋಲಿಸಿದರು. ಪಮಾ ಅವರು ಸೆನೆಗಲ್‌ನ ಅಲಿಮೂ ಸಿ ಅವರನ್ನು ಮಣಿಸಿ, ಫೈನಲ್ ಪ್ರವೇಶಿಸಿದರು. ಯುವರಾಜ್ ಹಾಗೂ ವಿಕ್ಟರ್ ಅವರು ಸೆಮಿಫೈನಲ್ ಪಂದ್ಯಗಳಲ್ಲಿ ಕ್ರಮವಾಗಿ ಫಿಲಿಪ್ಪಿನ್ಸ್‌ನ ಷಿವೀಲ್ ಬಂಟಾಲಿ ಮತ್ತು ಈಜಿಪ್ಟ್‌ನ ಸಯೀದ್ ಕರೀಂ ಮೊಹಮ್ಮದ್ ವಿರುದ್ಧ ಗೆಲುವು ಸಾಧಿಸಿದರು.

## ❖ ಆದಿವಾಸಿ ಕೂಟ: ಕುಸ್ತಿಯಲ್ಲಿ ಜಾರ್ಖಂಡ್‌ಗೆ ಚಿನ್ನ 'ಡಬಲ್'

**ಸಂದರ್ಭ: ಜಾರ್ಖಂಡ್ ಮತ್ತು ಹಿಮಾಚಲ ಪ್ರದೇಶದ ಪೈಲ್ವಾನರು ಖೇಲೊ ಇಂಡಿಯಾ ಆದಿವಾಸಿ ಕ್ರೀಡಾಕೂಟದ ಐದನೇ ದಿನವಾದ ಭಾನುವಾರ ತಲಾ ಎರಡು ಚಿನ್ನದ ಪದಕಗಳನ್ನು ಗೆದ್ದರು. ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಮಿಜೋರಾಂನ ಸ್ಪರ್ಧಿಗಳು ಪಾರಮ್ಯ ಮೆರೆದರು.**

- ಕುಸ್ತಿ ಸ್ಪರ್ಧೆಯ ಮಹಿಳೆಯರ 50 ಕೆ.ಜಿ. ವಿಭಾಗದಲ್ಲಿ ಪೂನಮ್ ಒರಾನ್ ಪ್ರಶಸ್ತಿ ಗೆದ್ದು, ಜಾರ್ಖಂಡ್‌ನ ಚಿನ್ನದ ಪದಕದ ಖಾತೆ ತೆರೆದರು. ಅವರು ಫೈನಲ್ ನಲ್ಲಿ 6-3 ಅಂತರದಿಂದ ತೆಲಂಗಾಣದ ಗೀತಾ ಕೆ. ಅವರನ್ನು ಮಣಿಸಿದರು.
- ಪುರುಷರ 67 ಕೆ.ಜಿ. ಗ್ರೀಕೊ ರೋಮನ್ ಫೈನಲ್‌ನಲ್ಲಿ ಜಾರ್ಖಂಡ್ ಅಂಜಿತ್ ಕುಮಾರ್ ಮುಂಡಾ ಅವರು ಗುಜರಾತ್‌ನ ಮುಕೇಶ್ ವಾಸ್ಕಾ ಅವರನ್ನು ತಾಂತ್ರಿಕ ಶ್ರೇಷ್ಠತೆ ಆಧಾರದಲ್ಲಿ ಸೋಲಿಸಿ ಸ್ವರ್ಣಕ್ಕೆ ಕೊರಳೊಡ್ಡಿದರು.
- ನವೀಶ್ ಕುಮಾರ್ (97 ಕೆ ಜಿ ಗ್ರೀಕೊ ರೋಮನ್) ಮತ್ತು ಪ್ರಿಯಾಂಕಾ ಚೌಧರಿ (ಮಹಿಳೆಯರ 62 ಕೆ.ಜಿ.) ಅವರ ಮೂಲಕ ಹಿಮಾಚಲ ಪ್ರದೇಶಕ್ಕೆ ಎರಡು ಚಿನ್ನದ ಪದಕಗಳು ಲಭಿಸಿದವು ಮಿಜೋರಾಂನ ಜೊಸಾಂಗ್ ಜುವಾಲಿ (ಮಹಿಳೆಯರ 86+ ಕೆಜಿ) ಮತ್ತು ಡೇವಿಡ್ ಜೊಡ್ಡಿಂಗ್ಲಾವಿಯಾ (ಪುರುಷರ 110+ ಕೆಜಿ) ಅಮೋಘ ಸಾಧನೆಯೊಂದಿಗೆ ಚಿನ್ನ ಗೆದ್ದರು. ಇದರೊಂದಿಗೆ ಮಿಜೋರಾಂನ ಪದಕ ಪಟ್ಟಿಯಲ್ಲಿ ಐದನೇ ಸ್ಥಾನಕ್ಕೆ ಏರಿತು.
- 15 ಚಿನ್ನ 6 ಬೆಳ್ಳಿ ಮತ್ತು 4 ಕಂಚು ಗೆದ್ದ ಕರ್ನಾಟಕವು ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ದಲ್ಲಿ ಮುಂದುವರಿದಿದೆ ಒಡಿಶಾ (9 ಚಿನ್ನ, 4 ಬೆಳ್ಳಿ. 10 ಕಂಚು) ಎರಡನೇ ಸ್ಥಾನದಲ್ಲಿದೆ.
- ವೇಟ್‌ಲಿಫ್ಟರ್ ಸ್ಯಾಂಬೊ ಲಪುಂಗ್ ಅವರು ಅರುಣಾಚಲ ಪ್ರದೇಶವನ್ನು (5 ಚಿನ್ನ. 1 ಬೆಳ್ಳಿ. 2 ಕಂಚು) ಮೂರನೇ ಸ್ಥಾನಕ್ಕೆ ಏರಿಸಲು ನೆರವಾದರು. ಪುರುಷರ 100 ಕೆಜಿ ವಿಭಾಗದಲ್ಲಿ ಸ್ಯಾಂಬೊ ಒಟ್ಟು 299 ಭಾರ ಎತ್ತುವ ಮೂಲಕ ಚಿನ್ನದ ಸಾಧನೆ ಮೆರೆದರು ಅಸ್ಸಾಂ (4 ಚಿನ್ನ, 9 ಬೆಳ್ಳಿ, 9 ಕಂಚು) ನಾಲ್ಕನೇ ಸ್ಥಾನದಲ್ಲಿದೆ.

## ❖ ಮಾನುಷ್-ದಿಯಾ ಜೋಡಿ ರನ್ನರ್ಸ್

**ಸಂದರ್ಭ: ಭಾರತದ ಮಾನವ್ ಶಾ ಹಾಗೂ ದಿಯಾ ಚಿತಳೆ ಅವರು ಟ್ಯುನಿಸ್‌ನಲ್ಲಿ ನಡೆಯುತ್ತಿರುವ ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ ಮಿಶ್ರ ಡಬಲ್ಸ್ನಲ್ಲಿ ರನ್ನರ್ಸ್ ಅಪ್ ಆದರು.**



ಪ್ರಶಸ್ತಿಯೊಂದಿಗೆ ಭಾರತದ ಮಾನುಷ್ ಶಾ ಹಾಗೂ ದಿಯಾ ಚಿತಳೆ ಚಿತ್ರ: ಎಸ್‌ಎಐ 'ಎಕ್ಸ್' ಖಾತೆ

- ಅಗ್ರ ಶ್ರೇಯಾಂಕ ಪಡೆದಿದ್ದ ಭಾರತದ ಜೋಡಿಯು ಶನಿವಾರ ತಡರಾತ್ರಿ ನಡೆದ ಫೈನಲ್‌ನಲ್ಲಿ 1-3ರಿಂದ (9-11, 13-11, 10-12, 5-11) ಸ್ಪೇನ್‌ನ ಅಲ್ವರೊ ರಾಬೆಲ್ಸ್ ಹಾಗೂ ಮರಿಯಾ ಶಿಯಾವೊ ವಿರುದ್ಧ ಪರಾಭವಗೊಂಡಿತು.
- ಮಾನುಷ್-ಹರ್ಮಿತ್ ದೇಸಾಯಿ ಅವರು ಪುರುಷರ ಡಬಲ್ಸ್‌ನಲ್ಲಿ ಪ್ರಶಸ್ತಿ ಸುತ್ತು ಪ್ರವೇಶಿಸಿದರು. ಈ ಜೋಡಿಯು ನಾಲ್ಕರ ಘಟ್ಟದಲ್ಲಿ 3-2ರಿಂದ 19-11, 5-11, 11-7, 11-5, 11-8) ಸ್ವದೇಶದ ಸ್ನೇಹಿತ್ ಸುರವಜ್ಜುಲ ಹಾಗೂ ಆಕಾಶ್ ಪಾಲ್ ವಿರುದ್ಧ ರೋಚಕ ಜಯ ಸಾಧಿಸಿತು.
- ಮಾನುಷ್-ಹರ್ಮಿತ್ ಜೋಡಿಯು ಫೈನಲ್‌ನಲ್ಲಿ ಅಗ್ರ ಶ್ರೇಯಾಂಕ ಪಡೆದಿರುವ ಫ್ರಾನ್ಸ್‌ನ ಫಾರಿಯನ್ ಬುರಾಸಾದ್ ಹಾಗೂ ಈಸ್ಟಬನ್ ಡಾರ್ ಅವರನ್ನು ಎದುರಿಸಲಿದ್ದಾರೆ.
- ಆದರೆ, ಮಹಿಳೆಯರ ಡಬಲ್ಸ್ನಲ್ಲಿ ಕಣಕ್ಕಿಳಿದಿದ್ದ ದಿಯಾ- ಯಶಸ್ವಿನಿ ಘೋರ್ಪಡೆ ಹಾಗೂ ಸಿಂಡ್ರೆಲಾ ದಾಸ್- ಸುಕೃತಾ ಮುಖರ್ಜಿ ಜೋಡಿಯ ಹೋರಾಟ ಸೆಮಿಫೈನಲ್‌ನಲ್ಲಿ ಅಂತ್ಯಗೊಂಡಿತು.

Dr. Rajkumar IAS Academy

## ❖ ನಾಳೆಯಿಂದ ಜನಗಣತಿ

**ಸಂದರ್ಭ: ಕರ್ನಾಟಕದಲ್ಲಿ ಏಪ್ರಿಲ್ 1ರಿಂದ ಸ್ವಯಂ ಗಣತಿಯೊಂದಿಗೆ 'ಜನಗಣತಿ-2027' ಆರಂಭವಾಗಲಿದೆ. ಏಪ್ರಿಲ್ 16ರಿಂದ ಒಂದು ತಿಂಗಳು 'ಮನೆಗಳ ಪಟ್ಟಿ ತಯಾರಿಕೆ ಮತ್ತು ವಸತಿ ಗಣತಿ' ನಡೆಯಲಿದೆ.**

- 'ಮನೆಗಳ ಪಟ್ಟಿ ತಯಾರಿಕೆ ಮತ್ತು ವಸತಿ ಗಣತಿ'ಯು ಜನಗಣತಿಯ ಮೊದಲ ಹಂತವಾಗಿದ್ದು, ದೇಶದಾದ್ಯಂತ ಏಪ್ರಿಲ್ 1ರಿಂದ ಸೆಪ್ಟೆಂಬರ್ 30ರವರೆಗೆ ನಡೆಸಲಾಗುವುದು. ಈ ಸಮಯದಲ್ಲಿ ಮನೆಗಳ ಸ್ಥಿತಿಗತಿಗಳು, ಆಸ್ತಿಗಳು ಮತ್ತು ಮನೆಗಳ ಸೌಕರ್ಯಗಳಿಗೆ ಸಂಬಂಧಿಸಿದ ವಿವರಗಳನ್ನು ಕಲೆ ಹಾಕಲಾಗುತ್ತದೆ
- ಮುಂದಿನ ವರ್ಷದ ಫೆಬ್ರುವರಿಯಲ್ಲಿ ಎರಡನೇ ಹಂತದ ಗಣತಿ ನಡೆಯಲಿದೆ. ಆಗ ಜನಸಂಖ್ಯೆ ಎಣಿಕೆ ಮಾಡಲಾಗುತ್ತದೆ. ಆಗ ಪ್ರತಿಯೊಂದು ಮನೆಯ ಪ್ರತಿ ವ್ಯಕ್ತಿಯ ಜಾತಿ, ಸಾಮಾಜಿಕ-ಆರ್ಥಿಕ ಸಾಮಾಜಿಕ ಮತ್ತು ಇತರ ವಿವರ ಸಂಗ್ರಹಿಸಲಾಗುತ್ತದೆ.ಕರ್ನಾಟಕದೊಂದಿಗೆ ಇತರ ಏಳು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಪ್ರಕ್ರಿಯೆ ಆರಂಭವಾಗಲಿದೆ ಕರ್ನಾಟಕದಲ್ಲಿ ಏಪ್ರಿಲ್ 1ರಿಂದ 15ರ ವರೆಗೆ ಸ್ವಯಂ ಗಣತಿ ಜರುಗಲಿದೆ. ಮನೆ-ಮನೆಗೆ ತೆರಳಿ ಮಾಹಿತಿ ಕಲೆ ಹಾಕುವ ಪ್ರಕ್ರಿಯೆ ಏಪ್ರಿಲ್ 16ರಂದು ಪ್ರಾರಂಭವಾಗಿ ಮೇ 15ರಂದು ಕೊನೆಗೊಳ್ಳಲಿದೆ.
- ಸ್ವಯಂ ಎಣಿಕೆ ಪ್ರಕ್ರಿಯೆಯ ಸಂದರ್ಭದಲ್ಲಿ ವ್ಯಕ್ತಿಯು ಪೋರ್ಟಲ್‌ನಲ್ಲಿ ತಮ್ಮ ಮನೆಯ ವಿವರಗಳನ್ನು ಭರ್ತಿ ಮಾಡಬೇಕು. ಬಳಿಕ ಸ್ವಯಂ ಗಣತಿಯ ಸಂಖ್ಯೆ ಲಭ್ಯವಾಗುತ್ತದೆ. ಈ ಸಂಖ್ಯೆಯನ್ನು ಗಣತಿದಾರರಿಗೆ ಕ್ಷೇತ್ರ ಭೇಟಿಯ ಸಂದರ್ಭದಲ್ಲಿ ನೀಡಬೇಕು ಮತ್ತು ಸ್ವಯಂ ಎಣಿಕೆಯ ದತ್ತಾಂಶಗಳನ್ನು ದೃಢೀಕರಿಸಿದ ನಂತರ ಗಣತಿದಾರರು ಇದನ್ನು ಮೂಲ ದತ್ತಾಂಶದಲ್ಲಿ ಸೇರಿಸುತ್ತಾರೆ.
- **ಪಶ್ಚಿಮ ಬಂಗಾಳ ಹೊರತುಪಡಿಸಿ, ಚುನಾವಣೆ ನಡೆಯಲಿರುವ ರಾಜ್ಯಗಳ ಗಣತಿ ವೇಳಾಪಟ್ಟಿಯನ್ನು ಸಹ ಪ್ರಕಟಿಸಲಾಗಿದೆ. ಪುದುಚೇರಿಯಲ್ಲಿ ಮೇ 17ರಿಂದ ಸ್ವಯಂ ಎಣಿಕೆ ಮತ್ತು ಜೂನ್ 1ರಿಂದ ಮನೆ ಮನೆಗೆ ತೆರಳಿ ಎಣಿಕೆ ನಡೆಯಲಿದೆ. ಕೇರಳದಲ್ಲಿ ಕ್ರಮವಾಗಿ ಜೂನ್ 16 ಮತ್ತು ಜುಲೈ 1ರಂದು ಗಣತಿ ನಡೆಯಲಿದೆ ತಮಿಳುನಾಡಿನಲ್ಲಿ ಕ್ರಮವಾಗಿ ಜುಲೈ 17 ಮತ್ತು ಆಗಸ್ಟ್ 1 ರಂದು ಹಾಗೂ ಅಸ್ಸಾಂನಲ್ಲಿ ಆಗಸ್ಟ್ 2 ಮತ್ತು ಆಗಸ್ಟ್ 17 ರಂದು ಗಣತಿ ಜರುಗಲಿದೆ ಸ್ವಯಂ ಗಣತಿ ಆರಂಭವಾಗುವ (ಆಗಸ್ಟ್ 17ರಿಂದ) ಮತ್ತು ಮನೆ ಮನೆ ಎಣಿಕೆ ಪ್ರಕ್ರಿಯೆ (ಸೆಪ್ಟೆಂಬರ್ 1ರಿಂದ 30) ಪೂರ್ಣಗೊಳಿಸುವ ಕೊನೆಯ ರಾಜ್ಯ ಮಣಿಪುರವಾಗಲಿದೆ.**
- ಸೋಮವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಿಜಿಸ್ಟ್ರಾರ್ ಜನರಲ್ ಮತ್ತು ಭಾರತದ ಜನಗಣತಿ ಆಯುಕ್ತ ಮೃತ್ಯುಂಜಯ್ ಕುಮಾರ ನಾರಾಯಣ್, 'ಮೊದಲ ಹಂತದ ಜನಗಣತಿಗೆ 33 ಪ್ರಶ್ನೆಗಳನ್ನು ಸೇರಿಸಲಾಗಿದೆ ಎರಡನೇ ಹಂತದಲ್ಲಿ ಕೇಳಲಾಗುವ ಜಾತಿ ಸೇರಿದಂತೆ ಇತರ ಪ್ರಶ್ನೆಗಳನ್ನು ನಂತರ ಸೇರಿಸಲಾಗುವುದು' ಎಂದರು.
- ಜಾತಿ ಗಣತಿ ಹೇಗೆ ನಡೆಯುತ್ತದೆ ಎಂಬ ಪ್ರಶ್ನೆಗಳಿಗೆ ಉತ್ತರಿಸದ ಅವರು, 'ಅಂತಹ ವಿವರಗಳನ್ನು ಮುಂದಿನ ದಿನಗಳಲ್ಲಿ ಬಹಿರಂಗಗೊಳಿಸಲಾಗುವುದು' ಎಂದರು.

## ❖ ಸೀಮೆಎಣ್ಣೆ ವಿತರಣೆಗೆ ಮುಂದಾದ ಕೇಂದ್ರ

**ಸಂದರ್ಭ: ಇಂಧನ ಪೂರೈಕೆಯಲ್ಲಿ ಉಂಟಾಗಿರುವ ವ್ಯತ್ಯಯ ದಿಂದ ತೊಂದರೆ ಅನುಭವಿಸುತ್ತಿರುವ ಗ್ರಾಹಕರಿಗೆ ಅನುಕೂಲ ಕಲ್ಪಿಸಲು ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಗೃಹ ಬಳಕೆ ಉದ್ದೇಶಗಳಿಗಾಗಿ ತಾತ್ಕಾಲಿಕವಾಗಿ ಸೀಮೆಎಣ್ಣೆ ವಿತರಣೆಗೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಮುಂದಾಗಿದೆ.**

Dr. Rajkumar IAS Academy


- 'ಸೀಮೆಎಣ್ಣೆ ಮುಕ್ತ' ಎಂದು ಘೋಷಿಸಿರುವ ರಾಜ್ಯಗಳೂ ಸೇರಿದಂತೆ 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸಾರ್ವಜನಿಕ ವಿತರಣೆ ವ್ಯವಸ್ಥೆಯ (ಪಿಡಿಎಸ್) ಅಡಿಯಲ್ಲಿ ತಾತ್ಕಾಲಿಕವಾಗಿ ಸೀಮೆಎಣ್ಣೆ ಹಂಚಿಕೆ ಮಾಡಲಾಗುವುದು ಎಲ್‌ಪಿಜಿ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಮನೆಗಳಲ್ಲಿ ಅಡುಗೆ ಮಾಡಲು ಮತ್ತು ದೀಪದ ಅಗತ್ಯಗಳನ್ನು ಪೂರೈಸಿಕೊಳ್ಳಲು ಇದು ನೆರವಾಗಲಿದೆ ಎಂದು ಅಧಿಸೂಚನೆಯಲ್ಲಿ ಸಚಿವಾಲಯ ಹೇಳಿದೆ.
- ಅಧಿಸೂಚನೆ ಪ್ರಕಾರ, ಪ್ರತಿ ಜಿಲ್ಲೆಗೆ ಗೊತ್ತುಪಡಿಸಿದ ಎರಡು ಸರ್ಕಾರಿ ಸ್ವಾಮ್ಯದ ತೈಲ ಮಾರುಕಟ್ಟೆ ಕಂಪನಿಗಳ ಮಾಲೀಕತ್ವದ ಸೇವಾ ಕೇಂದ್ರಗಳು 5 ಸಾವಿರ ಲೀಟರ್‌ವರೆಗೆ ಸೀಮೆಎಣ್ಣೆ ದಾಸ್ತಾನು ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಇದಕ್ಕೆ ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದೆ.
- ಈ ಆದೇಶವು ತಕ್ಷಣದಿಂದಲೇ ಜಾರಿಗೆ ಬರಟ್ಟಿದ್ದು. ಮುಂದಿನ 60 ದಿನದವರೆಗೆ ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿ ಇರಲಿದೆ ಎಂದು ಸಚಿವಾಲಯ ಹೇಳಿದೆ.
- ಒಂದು ತಿಂಗಳಿನಿಂದ ನಡೆಯುತ್ತಿರುವ ಪಶ್ಚಿಮ ಏಷ್ಯಾದ ಸಂಘರ್ಷದಿಂದ ಅಡುಗೆ ಅನಿಲ ಸೇರಿದಂತೆ ಇಂಧನ ಪೂರೈಕೆ ಸರಪಳಿಯಲ್ಲಿ ಅಡಚಣೆ ಉಂಟಾಗಿದೆ
- **ಭಾರತವು ತನ್ನ ಆಡುಗೆ ಅನಿಲದ ಅಗತ್ಯದ ಪೈಕಿ ಶೇ 60ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ ಇದರಲ್ಲಿ ಶೇ 90ರಷ್ಟು ಕೊಲ್ಲಿ ರಾಷ್ಟ್ರಗಳಿಂದ ಬರುತ್ತದೆ ಸಂಘರ್ಷದಿಂದ ಪೂರೈಕೆಗೆ ಸಮಸ್ಯೆಯಾಗಿದ್ದು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಂತಹ ವಾಣಿಜ್ಯ ಬಳಕೆದಾರರಿಗೆ ಅನಿಲ ಪೂರೈಕೆಯಲ್ಲಿ ಕಡಿತ ಉಂಟಾಗಿದೆ.**
- ಲಭ್ಯವಿರುವ ಎಲ್‌ಪಿಜಿಯಲ್ಲಿ ಗೃಹ ಬಳಕೆಗೆ ಆದ್ಯತೆ ನೀಡಲಾಗಿದ್ದರೂ ಸೀಮಿತ ದಾಸ್ತಾನಿನ ಆತಂಕದಿಂದ ಜನರು ಭೀತಿಗೊಂಡು ಖರೀದಿಸಲು ಮುಂದಾಗಿದ್ದಾರೆ ಎಲ್‌ಪಿಜಿ ಮೇಲಿನ ಒತ್ತಡ ಕಡಿಮೆ ಮಾಡಲು ಇದೀಗ ಸೀಮೆ ಎಣ್ಣೆ ವಿತರಣೆಗೆ ಸರ್ಕಾರ ಮುಂದಾಗಿದೆ.

## ❖ ರಾಷ್ಟ್ರೀಯ ಜನಗಣತಿ: ಏಪ್ರಿಲ್ 16ರಿಂದ ಒಂದು ತಿಂಗಳು ಮನೆ-ಮನೆಗೆ ಭೇಟಿ: ಆನ್‌ಲೈನ್‌ನಲ್ಲಿ 'ಸ್ವಯಂ ಗಣತಿ' ಏ.1ರಿಂದ

**ಸಂದರ್ಭ: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಏಪ್ರಿಲ್ 1ರಿಂದ ರಾಷ್ಟ್ರೀಯ ಜನಗಣತಿ-2027 ಪ್ರಕ್ರಿಯೆ ಆರಂಭವಾಗಲಿದ್ದು, ಮೊದಲ 15 ದಿನ ನಾಗರಿಕರಿಗೆ ವೆಬ್ ಪೋರ್ಟಲ್‌ನಲ್ಲಿ 'ಸ್ವಯಂ-ಗಣತಿ'ಗೆ ಅವಕಾಶ ಕಲ್ಪಿಸಲಾಗಿದೆ.**

- 'ರಾಜ್ಯ ಸರ್ಕಾರದ ಆದೇಶದ ಮೇರೆಗೆ ಜನಗಣತಿ-2027ರ ಮೊದಲ ಹಂತದಲ್ಲಿ ಮನೆಪಟ್ಟಿ ಮತ್ತು ಮನೆ ಗಣತಿ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಪೂರ್ವ ಸಿದ್ಧತಾ ಕಾರ್ಯಗಳನ್ನು ತ್ವರಿತಗೊಳಿಸಲಾಗಿದೆ. ನಾಗರಿಕರು ತಮ್ಮ ಮನೆ ಹಾಗೂ ಕುಟುಂಬದ ಮಾಹಿತಿಯನ್ನು ನಿಖರವಾಗಿ ದಾಖಲಿಸುವುದು ಅತ್ಯಂತ ಮಹತ್ವದ್ದಾಗಿರುತ್ತದೆ' ಎಂದು ನಗರ ಪಾಲಿಕೆಗಳ ಆಯುಕ್ತರು ತಿಳಿಸಿದರು.
- ಕೇಂದ್ರ ಗೃಹ ಸಚಿವಾಲಯ 2027ರ ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲು ಉದ್ದೇಶಿಸಿದ್ದು. ಮೊದಲ ಹಂತದಲ್ಲಿ ಮನೆಪಟ್ಟಿ ಮತ್ತು ಮನೆ ಗಣತಿಯನ್ನು ಏಪ್ರಿಲ್ 1ರಿಂದ 15ರವರೆಗೆ ವೆಬ್ ಪೋರ್ಟಲ್ (https://se.census.gov.in) ಮೂಲಕ ಸ್ವಯಂ-ಗಣತಿಗೆ ಅವಕಾಶ ಕಲ್ಪಿಸಿರುತ್ತದೆ.ಮನೆಯ ಯಾವುದೇ ಒಬ್ಬ ಸದಸ್ಯ ಸುಮಾರು 15ರಿಂದ 20 ನಿಮಿಷಗಳಲ್ಲಿ ಸ್ವಯಂ-ಗಣತಿ ಮಾಡಿ, ಮನೆಯ ವಿವರಗಳನ್ನು ಒದಗಿಸಬಹುದು ಮತ್ತು ಮೊಬೈಲ್/ಇಮೇಲ್‌ನಲ್ಲಿ 'ಸ್ವಯಂ-ಗಣತಿ ಐಡಿ'ಯನ್ನು ಪಡೆಯ ಬಹುದಾಗಿರುತ್ತದೆ. ಸ್ವಯಂ ಗಣತಿ ಪ್ರಕ್ರಿಯೆಗಾಗಿ ನಿಗದಿಪಡಿಸಿರುವ ಅವಧಿಯಲ್ಲಿ ನಾಗರಿಕರು ತಮ್ಮ ಮಾಹಿತಿಯನ್ನು ದಾಖಲಿಸಲು ಅವಕಾಶವಿದ್ದು, ಇದರಿಂದ ಜನಗಣತಿ ಕಾರ್ಯದಲ್ಲಿ ಪಾರದರ್ಶಕತೆ, ವೇಗ ಮತ್ತು ನಿಖರತೆ ಹೆಚ್ಚಲಿದೆ.

- ಜನಗಣತಿಯ ಎರಡನೇ ಹಂತ ಏಪ್ರಿಲ್ 16ರಿಂದ ಮೇ 15ರವರೆಗೆ ನಡೆಯಲಿದ್ದು, ಗಣತಿದಾರರು ಮನೆ-ಮನೆಗೆ ಭೇಟಿ ನೀಡಿ ಮನೆಪಟ್ಟಿ ಮತ್ತು ಮನೆ ಗಣತಿ ಮಾಹಿತಿಯನ್ನು ಸಂಗ್ರಹಿಸಲಿದ್ದಾರೆ ಗಣತಿ ದಾರರು ಮನೆಗೆ ಭೇಟಿ ನೀಡಿದಾಗ, ದೃಢೀಕರಿಸಲು ಮತ್ತು ಸ್ವಯಂ-ಗಣತಿ ದತ್ತಾಂಶದ ಅಂತಿಮ ಸಲ್ಲಿಕೆಗಾಗಿ ಸ್ವಯಂ-ಗಣತಿ ಐಡಿಯನ್ನು ಗಣತಿದಾರರೊಂದಿಗೆ ಹಂಚಿಕೊಳ್ಳಬೇಕಾಗಿ ರುತ್ತದೆ ಎಂದು ಆಯುಕ್ತರು ತಿಳಿಸಿದರು.
- ಜನಗಣತಿ ಮಾಹಿತಿಯ ಆಧಾರದ ಮೇಲೆ ಭವಿಷ್ಯದ ನಗರ ಯೋಜನೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂಸಾರ್ವಜನಿಕ ಕಲ್ಯಾಣ ಕಾರ್ಯಕ್ರಮ ಗಳನ್ನು ರೂಪಿಸಲಾಗುತ್ತದೆ ಆದ್ದರಿಂದ, ಎಲ್ಲ ನಾಗರಿಕರು ಸ್ವಯಂ ಗಣತಿಯಲ್ಲಿ ತಮ್ಮ ಸರಿಯಾದ ಮಾಹಿತಿಯನ್ನು ಒದಗಿಸಬೇಕು ಎಂದರು.
- ತರಬೇತಿ ಗಣತಿ ಕಾರ್ಯದಲ್ಲಿ ಮುಖ್ಯ ಪಾತ್ರ ವಹಿಸುವವರಿಗೆ ಕ್ಷೇತ್ರ ತರಬೇತುದಾರರು, ಚಾರ್ಜ್ ಆಫೀಸರ್, ಕಂದಾಯ ವಿಭಾಗದ ಅಧಿಕಾರಿಗಳು, ತಾಂತ್ರಿಕ ಸಹಾಯಕರುಗಳಿಗೆ ಮಾಸ್ಟರ್ ತರಬೇತುದಾರರಿಂದ ಅಗತ್ಯ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು.



# ಪಶ್ಚಿಮ ಏಷ್ಯಾದಲ್ಲಿ ಬಿಕ್ಕಟ್ಟು; ಭಾರತದ ಆರ್ಥಿಕತೆಗೆ ಪೆಟ್ಟು?



ಯುದ್ಧದ ಪ್ರಭಾವ ಅಂಕಿ ಅಂಶಗಳಲ್ಲಿ

- ₹94.70 ಪ್ರತಿ ಡಾಲರ್‌ಗೆ ರೂಪಾಯಿ ಮೌಲ್ಯ (ವರ್ಷದಲ್ಲಿ ಶೇ 3.6ರಷ್ಟು ಕುಸಿತ)
- 10% (ಅಂದಾಜು) ನಿಫ್ಟಿ/ಸೆನ್ಸೆಕ್ಸ್‌ನಲ್ಲಿ ಆಗಿರುವ ಕುಸಿತ (₹40 ಲಕ್ಷ ಕೋಟಿ ನಷ್ಟ)
- ₹68.92 ಲಕ್ಷ ಕೋಟಿಯಿಂದ ₹66.07 ಲಕ್ಷ ಕೋಟಿಗೆ ಇಳಿದ ವಿದೇಶಿ ವಿನಿಮಯ ಮೀಸಲು ಮೊತ್ತ
- 117-120 ಡಾಲರ್ ಪ್ರತಿ ಬ್ಯಾರೆಲ್ ಬ್ರೆಂಟ್ ಕಚ್ಚಾ ತೈಲದ ದರ
- ₹60 ಅಡುಗೆ ಅನಿಲ ಸಿಲಿಂಡರ್ ಬೆಲೆಯಲ್ಲಿ ಆದ ಹೆಚ್ಚಳ
- 2.2 ಲಕ್ಷ ಪಶ್ಚಿಮ ಏಷ್ಯಾ ರಾಷ್ಟ್ರಗಳಿಂದ ಭಾರತಕ್ಕೆ ಹಿಂದಿರುಗಿದವರು

ಪ್ರಮುಖ ವಲಯಗಳ ಮೇಲೆ ಆರ್ಥಿಕ ಪರಿಣಾಮ

## ❖ ಸಂಹಿತೆಯಲ್ಲಿ 12 ತಿದ್ದುಪಡಿ: ಆಡಳಿತ ಸುಧಾರಣೆಗೆ ಸಹಕಾರಿ: ದಿವಾಳಿತನ ಮಸೂದೆಗೆ ಲೋಕಸಭೆ ಒಪ್ಪಿಗೆ

**ಸಂದರ್ಭ: ದಿವಾಳಿತನ ಮತ್ತು ದಿವಾಳಿತನ ಸಂಹಿತೆ ತಿದ್ದುಪಡಿ ಮಸೂದೆಗೆ ಲೋಕಸಭೆ ಸೋಮವಾರ ಒಪ್ಪಿಗೆ ನೀಡಿದೆ.**

- ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಈ ಮಸೂದೆಯನ್ನು ಮಂಡಿಸಿದರು.
- **2016ರಲ್ಲಿ ಜಾರಿಗೊಂಡಿದ್ದ ದಿವಾಳಿತನ ಮತ್ತು ದಿವಾಳಿತನ ಸಂಹಿತೆಗೆ (ಐಬಿಸಿ) 12 ತಿದ್ದುಪಡಿಗಳನ್ನು ಮಾಡಲಾಗುತ್ತಿದೆ. ಇದು ಪಾಲುದಾರರ ಮೌಲ್ಯವನ್ನು ಗರಿಷ್ಠಗೊಳಿಸಲು ಮತ್ತು ಆಡಳಿತ ಪ್ರಕ್ರಿಯೆಯನ್ನು ಸುಧಾರಿಸಲು ಸಹಾಯ ಮಾಡಲಿದೆ ಎಂದು ಅವರು ತಿಳಿಸಿದರು.**
- ತಿದ್ದುಪಡಿಗಳು ಅಸ್ತಿತ್ವ ದಲ್ಲಿರುವ ದಿವಾಳಿತನ ಚೌಕಟ್ಟನ್ನು ಬಲಪಡಿಸಲು, ಎದುರಾಗುವ ಸವಾಲುಗಳನ್ನು ಪರಿಹರಿಸಲು ಹಾಗೂ ವಿಕಸನಗೊಳ್ಳುತ್ತಿರುವ ಜಾಗತಿಕ ರೂಢಿಗಳನ್ನು ಅಳವಡಿಸಲು ಯತ್ನಿಸುತ್ತವೆ ಎಂದು ಹಣಕಾಸು ಸಚಿವರು ಹೇಳಿದರು.
- ದೇಶದ ಬ್ಯಾಂಕಿಂಗ್ ಕ್ಷೇತ್ರದ ಆರೋಗ್ಯ ಸುಧಾರಿಸುವಲ್ಲಿ ಈ ಕಾಯ್ದೆಯು ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ನಿರ್ಮಲಾ ಅವರು ತಿಳಿಸಿದರು.
- **ದಿವಾಳಿತನ ಮತ್ತು ದಿವಾಳಿತನ ಸಂಹಿತೆ (ತಿದ್ದುಪಡಿ) ಮಸೂದೆ-2025 ಅನ್ನು ಲೋಕಸಭೆಯು ಅಂಗೀಕರಿಸಿದೆ.**
- ಐಬಿಸಿ ತಿದ್ದುಪಡಿ ಮಾಡಲು ಸರ್ಕಾರವು 2025ರ ಆಗಸ್ಟ್ 12ರಂದು ಲೋಕಸಭೆಯಲ್ಲಿ ಮಸೂದೆಯನ್ನು ಮಂಡಿಸಿತ್ತು.
- ದಿವಾಳಿತನ ಪರಿಹಾರ ಅರ್ಜಿಗಳನ್ನು ವಿಲೇವಾರಿಗೊಳಿಸಲು ತೆಗೆದುಕೊಳ್ಳುವ ಸಮಯವನ್ನು ಕಡಿಮೆ ಮಾಡುವ ನಿಬಂಧನೆಗಳು ಒಳಗೊಂಡಂತೆ ಹಲವು ಬದಲಾವಣೆಗಳನ್ನು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿತ್ತು.
- ಈ ಮಸೂದೆಯನ್ನು ಲೋಕಸಭೆಯ ಪರಿಶೀಲನಾ ಸಮಿತಿಗೆ ಸ್ಥಳುಹಿಸಲಾಗಿತ್ತು ಸಮಿತಿಯು 2025ರ ಡಿಸೆಂಬರ್‌ನಲ್ಲಿ ತನ್ನ ವರದಿ ಸಲ್ಲಿಸಿತ್ತು.
- ಸಮಿತಿಯ ಎಲ್ಲ ಶಿಫಾರಸುಗಳನ್ನು ಅಂಗೀಕರಿಸಲಾಗಿದೆ ಎಂದು ನಿರ್ಮಲಾ ಸೀತಾರಾಮನ್ ಅವರು ತಿಳಿಸಿದ್ದಾರೆ.

## ❖ 95 ದಾಟಿದ್ದ ರೂಪಾಯಿ ಮೌಲ್ಯ

**ಸಂದರ್ಭ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ ಸೋಮವಾರದ ವಹಿವಾಟಿನ ವೇಳೆ 95 ದಾಟಿತ್ತು. ನಂತರ ಮೌಲ್ಯವು ಚೇತರಿಕೆ ಕಂಡು ವಹಿವಾಟಿನ ಅಂತ್ಯಕ್ಕೆ 94.70 ಆಗಿದೆ.**

- ಪಶ್ಚಿಮ ಏಷ್ಯಾ ಸಂಘರ್ಷ, ಡಾಲರ್ ಮೌಲ್ಯ ಮತ್ತು ಕಚ್ಚಾ ತೈಲದ ದರ ಹೆಚ್ಚಳವು ರೂಪಾಯಿ ಮೇಲೆ ಒತ್ತಡ ಹೇರಿದೆ ಎಂದು ವರ್ತಕರು ತಿಳಿಸಿದ್ದಾರೆ.
- ವಹಿವಾಟಿನ ಆರಂಭದಲ್ಲಿ ರೂಪಾಯಿ ಮೌಲ್ಯವು ಡಾಲರ್ ಎದುರು 93.57 ಇತ್ತು. ದಿನದ ನಡುವೆ ಅದು 95.22ಕ್ಕೆ ಇಳಿದು, ವಹಿವಾಟಿನ ಕೊನೆಯಲ್ಲಿ ಮೌಲ್ಯವು 94.70 ಆಗಿದೆ. ವಹಿವಾಟಿನ ವೇಳೆ 165 ಪೈಸೆ ಏರಿಕೆ ಕಂಡಿತ್ತು.
- ಶುಕ್ರವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ 89 ಪೈಸೆ ಇಳಿಕೆಯಾಗಿ, 94.85 ಆಗಿತ್ತು. ಇದಕ್ಕೆ ಹೋಲಿಸಿದರೆ ಸೋಮವಾರ 15 ಪೈಸೆ ಏರಿಕೆ ಆಗಿದೆ.

Dr Rajkumar IAS/KAS Academy

- ಶೇ 9.88ರಷ್ಟು ಇಳಿಕೆ: 2025-26ರ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಮಾರ್ಚ್ 27ರವರೆಗೆ ಡಾಲರ್ ಎದುರು ರೂಪಾಯಿ ಮೌಲ್ಯ ಶೇ 9.88ರಷ್ಟು ಕುಸಿದಿದೆ. ಇದು ಕಳೆದ 14 ವರ್ಷದಲ್ಲಿ ಅತಿದೊಡ್ಡ ವಾರ್ಷಿಕ ಇಳಿಕೆ ಆಗಿದೆ. 2011-12ರಲ್ಲಿ ಶೇ 12.4ರಷ್ಟು ಮೌಲ್ಯ ಇಳಿದಿತ್ತು.

## ❖ ಬ್ಯಾಂಕ್ ಲಾಕರ್‌ಗೆ 'ಪ್ರತ್ಯೇಕ' ವಿಮೆ ಅಸಾಧ್ಯ: ಕೇಂದ್ರ

**ಸಂದರ್ಭ: ಗ್ರಾಹಕನೊಬ್ಬ ತನ್ನ ಲಾಕರ್‌ನಲ್ಲಿ ಎಷ್ಟು ಬೆಲೆಬಾಳುವ ವಸ್ತುಗಳನ್ನು ಇಡುತ್ತಿದ್ದಾನೆ ಎಂಬುವುದನ್ನು ದಾಖಲಿಸುವುದು ಬ್ಯಾಂಕಿಂಗ್ ನಿಯಮಗಳ ಉಲ್ಲಂಘನೆಯಾಗಿದ್ದು, ಹೀಗಾಗಿ ಲಾಕರ್‌ನಲ್ಲಿರುವ ವಸ್ತುಗಳ ಮೌಲ್ಯದ ಆಧಾರದ ಮೇಲೆ ಪ್ರತ್ಯೇಕ ವಿಮಾ ಸೌಲಭ್ಯ ನೀಡಲು ಸಾಧ್ಯವಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ತಿಳಿಸಿದ್ದಾರೆ.**

- ಲೋಕಸಭೆಯ ಪ್ರಶೋತ್ತರ ಅವಧಿಯಲ್ಲಿ ಗಢಚಿರೋಲೀ ಚಿಮುರ್ ಲೋಕಸಭೆ ಕ್ಷೇತ್ರದ ಸಂಸದ (ಕಾಂಗ್ರೆಸ್) ನಾಮ್‌ದೇವ್ ದಸರಮ್ ಕಿರ್‌ಸಾನ್ ಅವರು ಕೇಳಿದ ಪೂರಕ ಪ್ರಶ್ನೆಗೆ ಉತ್ತರಿಸಿದ ಅವರು, ಬ್ಯಾಂಕ್ ಲಾಕರ್‌ಗಳ ವಿಷಯದಲ್ಲಿ ಯಾವುದೇ ನಷ್ಟ ಸಂಭವಿಸಿದರೆ, ವಾರ್ಷಿಕ ಲಾಕರ್ ಬಾಡಿಗೆಯ 100 ಪಟ್ಟು ಮೊತ್ತವನ್ನು ಪ್ರಮಾಣಿತ ವಿಮೆಯಾಗಿ ನಿಗದಿಪಡಿಸಲಾಗಿದೆ' ಎಂದು ಹೇಳಿದ್ದಾರೆ.

## ❖ ಬಡ್ಡಿ ಆದಾಯಕ್ಕೂ ಟಿಡಿಎಸ್ ಕಡಿತ

**ಸಂದರ್ಭ: 1949ರ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯಲ್ಲಿನ 'ಬ್ಯಾಂಕಿಂಗ್ ಕಂಪನಿ' ವ್ಯಾಖ್ಯಾನದ ವ್ಯಾಪ್ತಿಯಲ್ಲಿ ಬರುವ ಎಲ್ಲ ಹಣಕಾಸು ಸಂಸ್ಥೆಗಳು ( 50,000ಕ್ಕಿಂತ ಹೆಚ್ಚಿನ ಮೊತ್ತದ ಬಡ್ಡಿ ವರಮಾನದ ಮೇಲೆ ಇನ್ನು ಮೂಲದಲ್ಲೇ ತೆರಿಗೆ ಕಡಿತ (ಟಿಡಿಎಸ್) ಮಾಡಲಿವೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.**

- ಬ್ಯಾಂಕ್ ಅಥವಾ ಅಂಚೆ ಕಚೇರಿ ಠೇವಣಿಗಳಿಂದ ಬರುವ ಬಡ್ಡಿ ಆದಾಯವು ಆರ್ಥಿಕ ವರ್ಷವೊಂದರಲ್ಲಿ ಸಾಮಾನ್ಯ ನಾಗರಿಕರಿಗೆ ₹50,000 ಮತ್ತು ಹಿರಿಯ ನಾಗರಿಕರಿಗೆ ₹1 ಲಕ್ಷದ ಮಿತಿ ಮೀರಿದರೆ ಅದರಿಂದ ಟಿಡಿಎಸ್ ಕಡಿತಗೊಳಿಸಲಾಗುವುದು. 2025ರ ಆದಾಯ ತೆರಿಗೆ ಕಾಯ್ದೆಯ ಅಡಿಯಲ್ಲಿ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಇಲಾಖೆ 'ಎಕ್ಸ್'ಪೋಸ್ಟ್‌ನಲ್ಲಿ ಮಾಹಿತಿ ನೀಡಿದೆ.

## ❖ ವಿತ್ತೀಯ ಕೊರತೆ ₹12.52 ಲಕ್ಷ ಕೋಟಿ

**ಸಂದರ್ಭ: ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಫೆಬ್ರುವರಿ ವರೆಗೆ ಕೇಂದ್ರ ಸರ್ಕಾರದ ವರ ಮಾನ ಮತ್ತು ವೆಚ್ಚದ ನಡುವಿನ ಅಂತರ ವಾದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 80.4ರಷ್ಟಾಗಿದೆ. ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ಇದು ₹12.52 ಲಕ್ಷ ಕೋಟಿಯಾಗಿದೆ.**

- 2024-25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ವಿತ್ತೀಯ ಕೊರತೆಯು ಶೇ85.8ರಷ್ಟಿತ್ತು ಎಂದು ಸೋಮವಾರ ಬಿಡುಗಡೆ ಆಗಿರುವ ಲೆಕ್ಕಪತ್ರಗಳಮಹಾನಿಯಂತ್ರಕರ ವರದಿ ತಿಳಿಸಿದೆ.
- ಏಪ್ರಿಲ್‌ನಿಂದ ಫೆಬ್ರುವರಿ ವರೆಗೆ ಸರ್ಕಾರವು ₹27.91 ಲಕ್ಷ ಕೋಟಿ ವರಮಾನ ಸ್ವೀಕರಿಸಿದೆ. ಇದೇ ಅವಧಿಯಲ್ಲಿ ಸರ್ಕಾರದ ಒಟ್ಟು ವೆಚ್ಚವು ₹40.44 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

## ❖ ಕೈಗಾರಿಕಾ ಉತ್ಪಾದನೆ ಏರಿಕೆ

**ಸಂದರ್ಭ: ದೇಶದ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆಯು (ಐಐಪಿ) ಫೆಬ್ರುವರಿ ತಿಂಗಳಿನಲ್ಲಿ ಏರಿಕೆಯಾಗಿದ್ದು, ಶೇ 5.2ರಷ್ಟು ದಾಖಲಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಅಂಕಿ-ಅಂಶಗಳು ಸೋಮವಾರ ತಿಳಿಸಿವೆ.**

- ಕಳೆದ ವರ್ಷದ ಫೆಬ್ರುವರಿಯಲ್ಲಿ ಕೈಗಾರಿಕಾ ಉತ್ಪಾದನೆಯ ಪ್ರಗತಿ ಶೇ 2.7ರಷ್ಟಿತ್ತು ತಯಾರಿಕಾ ವಲಯದ ಉತ್ಪಾದನೆಯಲ್ಲಿನ ಹೆಚ್ಚಳವು ಬೆಳವಣಿಗೆಗೆ ಕಾರಣ ಎಂದು ತಿಳಿಸಿದೆ.
- ಕಳೆದ ವರ್ಷದ ಫೆಬ್ರುವರಿಯಲ್ಲಿ ತಯಾರಿಕಾ ವಲಯದ ಉತ್ಪಾದನೆ ಶೇ 2.8ರಷ್ಟಿತ್ತು. ಅದು ಈ ಫೆಬ್ರುವರಿಯಲ್ಲಿ ಶೇ 6ಕ್ಕೆ ಏರಿಕೆಯಾಗಿದೆ. ಗಣಿಗಾರಿಕೆ ವಲಯದ ಉತ್ಪಾದನೆ ಶೇ 1.6ರಿಂದ ಶೇ 3.1ಕ್ಕೆ ಹೆಚ್ಚಳವಾಗಿದೆ. 2025-26ರ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಫೆಬ್ರುವರಿವರೆಗೆ ದೇಶದ ಕೈಗಾರಿಕಾ ಉತ್ಪಾದನಾ ಬೆಳವಣಿಗೆ ಶೇ 4. 1ರಷ್ಟಾಗಿದೆ.

## ❖ ಲೋಕಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ ಘೋಷಣೆ L ಕಾಂಗ್ರೆಸ್ ವಿರುದ್ಧ ವಾಗ್ದಾಳಿ: 'ದೇಶ ಈಗ ಬಹುತೇಕ ನಕ್ಸಲ್ ಮುಕ್ತ'

**ಸಂದರ್ಭ: ನಕ್ಸಲರ ತಾಣವಾಗಿದ್ದ ಛತ್ತೀಸಗಢದ ಬಸ್ತರ್ ಪ್ರದೇಶವೂ ಸೇರಿದಂತೆ ಇಡೀ ಭಾರತ ಈಗ ಬಹುತೇಕ ನಕ್ಸಲ್ ಮುಕ್ತವಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ಲೋಕಸಭೆಯಲ್ಲಿ ಘೋಷಿಸಿದರು.**

- '2026ರ ಮಾರ್ಚ್ 31ಕ್ಕೆ ಭಾರತವನ್ನು ನಕ್ಸಲರಿಂದ ಮುಕ್ತಗೊಳಿಸುವ ಗುರಿ ಹಾಕಿಕೊಳ್ಳಲಾಗಿದೆ' ಎಂದು ಕೇಂದ್ರ ಸರ್ಕಾರ ಹೇಳಿತ್ತು ಈ ಗುರಿಯನ್ನು ಸಂಪೂರ್ಣವಾಗಿ ಸಾಧಿಸಿದ ಬಳಿಕ ದೇಶದೊಂದಿಗೆ ಮಾಹಿತಿ ಹಂಚಿಕೊಳ್ಳುವುದಾಗಿ ಅಮಿತ್ ಶಾ ಲೋಕಸಭೆಯಲ್ಲಿ ಪ್ರಕಟಿಸಿದರು.
- 'ಎಡಪಂಥೀಯ ತೀವ್ರವಾದದಿಂದ ಭಾರತವನ್ನು ಮುಕ್ತಗೊಳಿಸುವ ಯತ್ನಗಳು' ವಿಷಯದ ಕುರಿತು ಲೋಕಸಭೆಯಲ್ಲಿ ಇಡೀ ದಿನ ಚರ್ಚೆ ನಡೆಯಿತು. ಈ ವೇಳೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಆರೋಪ ಪ್ರತ್ಯಾರೋಪ ನಡೆಯಿತು. 'ನಕ್ಸಲ್‌ವಾದದ ಪರಿಣಾಮಗಳ ಗಾಂಭೀರ್ಯ ತಿಳಿದಿದ್ದರೂ ಅದನ್ನು ಅಂತ್ಯಗೊಳಿಸುವಲ್ಲಿ ಕಾಂಗ್ರೆಸ್ ಯಾವುದೇ ಕೆಲಸ ಮಾಡಿಲ್ಲ' ಎಂದು ಶಾ ಆರೋಪಿಸಿದರು.
- 'ಬಸ್ತರ್‌ನಿಂದ ನಕ್ಸಲ್‌ವಾದವು ಹೆಚ್ಚುಕಮ್ಮಿ ನಾಶವಾಗಿದೆ. ಇಲ್ಲಿನ ಪ್ರತಿಯೊಂದು ಹಳ್ಳಿಯಲ್ಲಿಯೂ ಶಾಲಾ ಕಟ್ಟಡವನ್ನು ನಿರ್ಮಿಸಲೂ, ಪಡಿತರ ಅಂಗಡಿಗಳನ್ನು ಆರಂಭಿಸಲೂ ಅಭಿಯಾನ ಕೈಗೊಳ್ಳಲಾಗಿದೆ. ಕೆಂಪು ಉಗ್ರವಾದದ ಕರಿನೆರಳಿನಿಂದ ಈ ಪ್ರದೇಶವು ಮುಕ್ತವಾಗಿ ಅಭಿವೃದ್ಧಿಯ ಬೆಳಕು ಕಾಣುತ್ತಿದೆ' ಎಂದರು.
- 'ಕೆಂಪು ಕಾರಿಡಾರ್‌ಗಳಾಗಿ 12 ರಾಜ್ಯಗಳು ಬದಲಾಗಿದ್ದವು ಹಲವು ವರ್ಷಗಳಿಂದ 12 ಕೋಟಿ ಜನರು ಬಡತನದಲ್ಲಿದ್ದಾರೆ. 5,000 ಭದ್ರತಾ ಸಿಬ್ಬಂದಿ ಸೇರಿ 20 ಸಾವಿರ ಮಂದಿ ನಕ್ಸಲರಿಂದ ಹತ್ಯೆಯಾಗಿದ್ದಾರೆ 75 ವರ್ಷಗಳಲ್ಲಿ 60 ವರ್ಷ ನೀವೇ (ಕಾಂಗ್ರೆಸ್) ಆಡಳಿತ ನಡೆಸಿದ್ದೀರಿ. ಬುಡಕಟ್ಟು ಜನರು ಯಾಕೆ ಅಭಿವೃದ್ಧಿ ಕಾಣಲಿಲ್ಲ? ಪ್ರಧಾನಿ ಮೋದಿ ಅವರು ಈಗ ಅವರ ಅಭಿವೃದ್ಧಿ ಮಾಡುತ್ತಿದ್ದಾರೆ' ಎಂದರು.
- "ಕಾಶ್ಮೀರ ಮತ್ತು ಈಶಾನ್ಯ ರಾಜ್ಯಗಳ ಸಮಸ್ಯೆಗಳಿಗಿಂತ ನಕ್ಸಲ್‌ವಾದವೇ ದೊಡ್ಡ ಸವಾಲು' ಎಂದು ದೇಶದೆದುರು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರೇ ಒಪ್ಪಿಕೊಂಡಿದ್ದರು. ಆದರೆ, ಕಾಂಗ್ರೆಸ್ ಮಾತ್ರ ಏನನು ಮಾಡಲಿಲ್ಲ. ಬುಡಕಟ್ಟು ಜನರಿಗೆ ಮನೆ ಕೊಡಲಿಲ್ಲ. ನೀರು ಕೊಡಲಿಲ್ಲ, ಶಾಲೆ ಕಟ್ಟಿಸಿಕೊಡಲಿಲ್ಲ, ಬ್ಯಾಂಕ್ ಸೌಲಭ್ಯ ನೀಡಲಿಲ್ಲ' ಎಂದು ಅಮಿತ್ ಶಾ ಕಾಂಗ್ರೆಸ್ ಅನ್ನು ದೂರಿದರು.
- 'ನಕ್ಸಲರ ವಿರುದ್ಧದ ಕಾರ್ಯಾಚರಣೆಯ ಯಶಸ್ಸು, ಕೋಬ್ರಾ ಪಡೆ ಮತ್ತು ಸಿಆರ್‌ಪಿಎಫ್ ಸೇರಿ ಎಲ್ಲ ಸಿಎಪಿಎಫ್ ಸಿಬ್ಬಂದಿ, ಭದ್ರತಾ ಸಂಸ್ಥೆಗಳು, ಛತ್ತೀಸಗಢ ಪೊಲೀಸರು, ಡಿಆರ್‌ಜಿ ಸಿಬ್ಬಂದಿ ಮತ್ತು ಬುಡಕಟ್ಟು ಸಮುದಾಯಗಳ ಜನರಿಗೆ ಸಲ್ಲಬೇಕು' ಎಂದರು.
- ಇಂದಿರಾ ಪ್ರಭಾವಿತರಾಗಿದ್ದರು. 'ಆಂಧ್ರ ಪ್ರದೇಶದಲ್ಲಿ 1970ರಲ್ಲಿ ನಡೆದಿದ್ದ ಚುನಾವಣೆವೊಂದರಲ್ಲಿ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ನಕ್ಸಲರ ಸಹಕಾರವನ್ನು ಸ್ವೀಕರಿಸಿದರು. ಅವರು ನಕ್ಸಲರ ಸಿದ್ಧಾಂತದಿಂದ ಪ್ರಭಾವಿತರಾಗಿದ್ದರು. ರಾಹುಲ್ ಗಾಂಧಿ ಅವರು ಸಾರ್ವಜನಿಕವಾಗಿಯೇ ನಕ್ಸಲರ ಕುರಿತು ಸಹಾನುಭೂತಿ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಹಲವು ವಿಡಿಯೊಗಳನ್ನು ಅವರು ಹಂಚಿಕೊಂಡಿದ್ದಾರೆ' ಎಂದು ಅಮಿತ್ ಶಾ ಆರೋಪಿಸಿದರು.

Dr. Rajkumar IAS/KAS Academy

# ಆದಿವಾಸಿ ಕ್ರೀಡೆ: ರೋಹನ್, ಮನೀಷಾಗೆ ಚಿನ್ನ

ರಾಯಪುರ (ಪಿಟಿಐ): ಕರ್ನಾಟಕ ರೋಹನ್ ದೊಡ್ಡಮನಿ ಮತ್ತು ಮನೀಷಾ ಸಿದ್ಧಿ ಅವರು ಇಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಆದಿವಾಸಿ ಕ್ರೀಡಾಕೂಟದ ಕುಸ್ತಿ ಸ್ಪರ್ಧೆಯಲ್ಲಿ ಚಿನ್ನದ ಸಾಧನೆ ಮೆರೆದರು. ಇದರೊಂದಿಗೆ ರಾಜ್ಯದ ಸ್ವರ್ಣ ಪದಕ 17ಕ್ಕೆ ಏರಿಕೆಯಾಗಿದೆ.

ಇಲ್ಲಿನ ಅಂಬಿಕಾಪುರದಲ್ಲಿ ಸೋಮವಾರ ನಡೆದ 60 ಕೆಜಿ ವಿಭಾಗದ ಗ್ರೀಕೊ ರೋಮನ್ ಕುಸ್ತಿ ಫೈನಲ್‌ನಲ್ಲಿ ರೋಹನ್ ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ರಾಜಸ್ಥಾನದ ದಿನೇಶ್ ಸೋಲಂಕಿ ಅವರನ್ನು ಸೋಲಿಸಿದರು. ಮಹಿಳೆಯರ ವಿಭಾಗದ ಸ್ಪರ್ಧೆಯಲ್ಲಿ ಮನೀಷಾ 12-8ರಿಂದ ಹಿಮಾಚಲ ಪ್ರದೇಶದ ಮುಸ್ಕಾನ್ ಅವರನ್ನು ಮಣಿಸಿದರು.

17 ಚಿನ್ನ, 6 ಬೆಳ್ಳಿ ಮತ್ತು 5 ಕಂಚು ಸೇರಿದಂತೆ ಒಟ್ಟು 28 ಪದಕಗಳನ್ನು ಗೆದ್ದಿರುವ ಕರ್ನಾಟಕ ಪದಕ ಪಟ್ಟಿಯಲ್ಲಿ



ಮನೀಷಾ ಸಿದ್ಧಿ

ಅಗ್ರಸ್ಥಾನದಲ್ಲಿ ಮುಂದುವರಿಸಿದೆ. ಒಡಿಶಾ (9 ಚಿನ್ನ, 4 ಬೆಳ್ಳಿ ಮತ್ತು 10 ಕಂಚು) ನಂತರದ ಸ್ಥಾನದಲ್ಲಿದೆ.

ಏತನ್ಮಧ್ಯೆ, ಪುರುಷರ 65 ಕೆಜಿ ಫ್ರೀಸ್ಟೈಲ್ ಫೈನಲ್‌ನಲ್ಲಿ ಮುಲಾಯಂ ಖಾರ್ವಾರ್ ಅವರು ರಾಜಸ್ಥಾನದ ರಾಕೇಶ್ ಮೀನಾ ವಿರುದ್ಧ ಗೆಲುವು ಸಾಧಿಸಿ ಬಿಹಾರಕ್ಕೆ ಚಿನ್ನದ ಪದಕ ಗೆದ್ದುಕೊಟ್ಟರು. ಕರ್ನಾಟಕದ



ರೋಹನ್ ದೊಡ್ಡಮನಿ

ಕೆ.ವಿ. ಕೆಂಪಣ್ಣವರ್ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ರಾಯ್‌ಪುರದ ಅಂತರರಾಷ್ಟ್ರೀಯ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪುರುಷರ ಹಾಕಿ ಸೆಮಿಫೈನಲ್‌ನಲ್ಲಿ ಒಡಿಶಾ ತಂಡವು 8-0 ಅಂತರದಿಂದ ಮಧ್ಯಪ್ರದೇಶವನ್ನು ಸೋಲಿಸಿದರೆ, ಮಿಜೋರಾಂ ತಂಡವು 3-2 ಅಂತರದಿಂದ ಜಾರ್ಖಂಡ್ ತಂಡವನ್ನು ಮಣಿಸಿತು.

## ❖ ವಿಶ್ವ ವುಶು: ಭಾರತಕ್ಕೆ 3 ಸ್ವರ್ಣ


**ಸಂದರ್ಭ: ಭಾರತದ ಅಥ್ಲೀಟ್‌ಗಳು ಇಲ್ಲಿ ನಡೆಯುತ್ತಿರುವ 10ನೇ ವಿಶ್ವ ಜೂನಿಯರ್ ವುಶು ಚಾಂಪಿಯನ್‌ಷಿಪ್‌ನಲ್ಲಿ ಮೂರು ಚಿನ್ನ ಸೇರಿ 10 ಪದಕಗಳನ್ನು ಗೆದ್ದು ಐತಿಹಾಸಿಕ ಸಾಧನೆ ಮಾಡಿದರು.**

- ಸ್ಯಾಂಡಾ (ಕುಸ್ತಿ) ಸ್ಪರ್ಧೆಯಲ್ಲಿ ಪಾರಮ್ಯ ಸಾಧಿಸಿದ ಭಾರತದ ಅಥ್ಲೀಟ್ ಗಳು ಮೂರು ಚಿನ್ನದ ಪದಕ ಬಾಚಿದರು. ಉಪೇಂದ್ರ ತೌಗಮ್ (ಬಾಲಕರ 45 ಕೆ.ಜಿ.), ನೊಂಗಮ್ಮೈಥಮ್ ಪಮ್‌ಹೀಬಾ (ಜೂನಿಯರ್ ಬಾಲಕರ 52 ಕೆ.ಜಿ.) ಹಾಗೂ ಲಾಯ್ಕ್ಕಂಗ್‌ಬಮ್ ವಿಕ್ಟರ್ (ಯುವ ಬಾಲಕರು 52 ಕೆ.ಜಿ.) ಸೋಮವಾರ ಸ್ವರ್ಣಕ್ಕೆ ಮುತ್ತಿಕ್ಕಿದರು.
- ಬಾಲಕರ 48 ಕೆ ಜಿ. ವಿಭಾಗದಲ್ಲಿ ಯುವರಾಜ್ ಬೆಳ್ಳಿ ಜಯಿಸಿದರು. ಗೌತಮ್ ಮಂಕಾಸ್ (ಜೂನಿಯರ್ ಬಾಲಕರ 48 ಕೆ.ಜಿ.) ಹಾಗೂ ಅನು (ಯುವ ಬಾಲಕಿಯರು 48 ಕೆ.ಜಿ.) ಅವರು ಭಾನುವಾರ ಕಂಚು ಜಯಿಸಿದ್ದರು.
- ಟೌಲೊ (ಕಲಾತ್ಮಕ) ಸ್ಪರ್ಧೆಗಳಲ್ಲಿ ಕೊಂಥ್ಜಮ್ ದೇವಿಕರಣಿ ದೇವಿ ಅವರು ತಲಾ ಒಂದು ಬೆಳ್ಳಿ ಹಾಗೂ ಕಂಚಿನ ಪದಕ ಗೆದ್ದರು. ರಾಜಕುಮಾರಿ ಲಾನ್‌ಚೆನ್ನಿ ಚಾನು ಕಂಚಿನ ಪದಕಕ್ಕೆ ಕೊರಳೊಡ್ಡಿದರು.

## ❖ 15ನೇ ಹಣಕಾಸು ಆಯೋಗದ ಶಿಫಾರಸಿನಲ್ಲಿ ರಾಜ್ಯಕ್ಕೆ ಬರಬೇಕಿದ್ದ ಅನುದಾನ ಖೋತಾ: ಬರಲೇ ಇಲ್ಲ ₹15,583 ಕೋಟಿ

**ಸಂದರ್ಭ: ಕೇಂದ್ರದ 15ನೇ ಹಣಕಾಸು ಆಯೋಗವು ಕರ್ನಾಟಕಕ್ಕೆ ಶಿಫಾರಸು ಮಾಡಿರುವ ಅನುದಾನದ ಪೈಕಿ ₹15,583 ಕೋಟಿ ಕೊನೆಗೂ ಬಿಡುಗಡೆಯಾಗಿಲ್ಲ.**

- 15ನೇ ಹಣಕಾಸು ಆಯೋಗದ ಶಿಫಾರಸಿನ ಅವಧಿ ಮಾರ್ಚ್ 31ಕ್ಕೆ ಕೊನೆಗೊಂಡಿದೆ. ಏಪ್ರಿಲ್ 1ರಿಂದ 16ನೇ ಹಣಕಾಸು ಆಯೋಗದ ಶಿಫಾರಸು ಜಾರಿಗೆ ಬರಲಿದೆ ಐದು ವಿಭಾಗಗಳಲ್ಲಿ ರಾಜ್ಯಕ್ಕೆ ಬರಬೇಕಿರುವ ಅನುದಾನ ಖೋತಾ ಆಗಿದೆ.
- ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ರಾಜ್ಯದ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ₹2,186 ಕೋಟಿ ಅನುದಾನ ಬರಬೇಕಿದೆ. ಕೇಂದ್ರ ಪಂಚಾಯತ್‌ರಾಜ್ ಸಚಿವಾಲಯವು 14 ರಾಜ್ಯಗಳಿಗೆ ಮಂಗಳವಾರ ₹3,946 ಕೋಟಿ ಬಿಡುಗಡೆ ಮಾಡಿದೆ. ಕಳೆದ 15 ದಿನಗಳಲ್ಲಿ ಸಚಿವಾಲಯವು ವಿವಿಧ ರಾಜ್ಯಗಳಿಗೆ ₹10,000 ಕೋಟಿಗೂ ಅಧಿಕ ಅನುದಾನ ನೀಡಿದೆ. ಆದರೆ, ಈ ಪಟ್ಟಿಯಲ್ಲಿ ರಾಜ್ಯದ ಹೆಸರು ಇರಲಿಲ್ಲ.




- 'ಕೇಂದ್ರ ಸಚಿವರನ್ನು ಎರಡು ಬಾರಿ ಭೇಟಿ ಮಾಡಿ ಅನುದಾನ ಬಿಡುಗಡೆಗೆ ಒತ್ತಾಯಿಸಿದ್ದೇನೆ. ಮೂರು ಬಾರಿ ಪತ್ರ ಬರೆದಿದ್ದೇನೆ. ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದೇವೆ. ಆದರೂ, ಅನುದಾನ ಬಿಡುಗಡೆಗೆ ಸತಾಯಿಸುತ್ತಿದೆ' ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಕಿಡಿಕಾರಿದರು.
- 'ಅನುದಾನ ಬಿಡುಗಡೆ ಮಾಡದಿರುವುದು ಗ್ರಾಮೀಣ ಕರ್ನಾಟಕಕ್ಕೆ ಎಸಗುತ್ತಿರುವ ಮಹಾದ್ರೋಹವೇ ಸರಿ' ಎಂದರು.
- 'ಅನುದಾನದ ಕೊರತೆಯಿಂದಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಕರ್ನಾಟಕವು ಗ್ರಾಮೀಣ ವಿಕೇಂದ್ರೀಕರಣದಲ್ಲಿ ನಿರಂತರವಾಗಿ ಮುಂಚೂಣಿಯಲ್ಲಿದೆ ಮತ್ತು ಪಂಚಾಯತಿ ಮಟ್ಟದ ಆಡಳಿತ ಉಳಿಸಿಕೊಳ್ಳಲು ಹಾಗೂ ಅವುಗಳ ಅವಧಿ ಮುಗಿಯುವ ಮೊದಲೇ ನಿರ್ಣಾಯಕ ಯೋಜನೆಗಳನ್ನು ಪೂರ್ಣಗೊಳಿಸಲು ಕೇಂದ್ರ ಸರ್ಕಾರ ಸಕಾಲಕ್ಕೆ ಅನುದಾನಗಳನ್ನು ಬಿಡುಗಡೆ ಮಾಡಬೇಕಿತ್ತು' ಎಂದು ಅವರು ಹೇಳಿದರು.
- 'ಚುನಾವಣೆ ನಡೆಸದ ಕಾರಣಕ್ಕೆ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ 15ನೇ ಹಣಕಾಸು ಆಯೋಗದ ಅನುದಾನ ಕೊಡುವುದಿಲ್ಲ ಎಂದು ಸಚಿವಾಲಯ ಈ ಹಿಂದೆಯೇ ಸ್ಪಷ್ಟಪಡಿಸಿತ್ತು. ನಗರ ಸ್ಥಳೀಯ ಸಂಸ್ಥೆಗಳಿಗೆ ಆದಷ್ಟು ಬೇಗ ಚುನಾವಣೆ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿತ್ತು ಆದರೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ), ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆ ನಡೆಸದ ಕಾರಣಕ್ಕೆ ₹1,028 ಕೋಟಿ ಅನುದಾನ ಕೈ ತಪ್ಪಿದೆ.

Dr. Rajkumar

- 15ನೇ ಹಣಕಾಸು ಆಯೋಗ ಶಿಫಾರಸು ಮಾಡಿರುವ ₹5,495 ಕೋಟಿ ವಿಶೇಷ ಅನುದಾನವೂ ರಾಜ್ಯಕ್ಕೆ ಬಂದಿಲ್ಲ. 'ಆಯೋಗದ ಮಧ್ಯಂತರ ವರದಿಯಲ್ಲಷ್ಟೇ ಈ ಅನುದಾನದ ಉಲ್ಲೇಖ ಇತ್ತು ಅಂತಿಮ ವರದಿಯಲ್ಲಿ ಈ ಬಗ್ಗೆ ಪ್ರಸ್ತಾಪ ಇರಲಿಲ್ಲ' ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಈ ಹಿಂದೆ ಸ್ಪಷ್ಟಪಡಿಸಿದ್ದರು 'ಹಣಕಾಸು ಆಯೋಗವು ಎರಡು ವರದಿಗಳನ್ನು ಸಲ್ಲಿಸಿತ್ತು ಈ ವಿಶೇಷ ಅನುದಾನವನ್ನು ಮೊದಲ ವರದಿಯಲ್ಲಿ ಶಿಫಾರಸು ಮಾಡಲಾಗಿತ್ತು ಕೇಂದ್ರ ಸರ್ಕಾರ ಈಗ ಸಬೂಬು ಹೇಳುತ್ತಿದೆ' ಎಂಬುದು ರಾಜ್ಯ ಸರ್ಕಾರದ ವಾದ.
- ಬೆಂಗಳೂರಿನ ಕೆರೆಗಳ ಅಭಿವೃದ್ಧಿಗೆ ಹಾಗೂ ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣಕ್ಕೆ ₹6,000 ಕೋಟಿ ಅನುದಾನವನ್ನು ಆಯೋಗ ಶಿಫಾರಸು ಮಾಡಿತ್ತು ಈ ಅನುದಾನ ಬಿಡುಗಡೆಗೆ ಒತ್ತಾಯಿಸಿ ರಾಜ್ಯ ಸರ್ಕಾರ ಹಲವು ಸಲ ಮನವಿ ಮಾಡಿತ್ತು ಅನುದಾನ ಬಿಡುಗಡೆ ಮಾಡುವುದಾಗಿಯೂ ಕೇಂದ್ರ ಭರವಸೆ ನೀಡಿತ್ತು ಆದರೆ, ನಯಾಪೈಸೆಯೂ ಬಿಡುಗಡೆ ಆಗಿಲ್ಲ.

## ❖ ಮಿದುಳಿನ ರಚನೆ, ಅದರ ಕಾರ್ಯಾಚರಣೆ ಬಗ್ಗೆ ರೋಗಿಗಳಿಂದ ವಿವರ ಸಂಗ್ರಹ: 'ಕಾಮ್-ಬ್ರೈನ್' ಡಿಜಿಟಲ್ ಮಾಹಿತಿ

**ಸಂದರ್ಭ: ಬೆಂಗಳೂರು ನಗರದ ಮಿದುಳು ತಜ್ಞರು, ಮನೋವೈದ್ಯರು ಮತ್ತು ನರವಿಜ್ಞಾನಿಗಳನ್ನು ಒಳಗೊಂಡ ತಂಡವೊಂದು ಮನೋವೈದ್ಯಕೀಯ ಅಸ್ಪಷ್ಟತೆಗಳನ್ನು ವಿಶ್ಲೇಷಿಸಲು 'ಕಾಮ್-ಬ್ರೇನ್' ಡಿಜಿಟಲ್ ಮಾಹಿತಿ ಭಂಡಾರವನ್ನು ಅಭಿವೃದ್ಧಿ ಪಡಿಸಿದ್ದಾರೆ.**

- ಮಾನಸಿಕ ಅಸ್ವಸ್ಥತೆಗಳಿಂದ ಬಳಲುತ್ತಿರುವ ರೋಗಿಗಳ ಮಿದುಳಿನ ರಚನೆ ಮತ್ತು ಅದರ ಕಾರ್ಯಾಚರಣೆ ಬಗ್ಗೆ ಎಲ್ಲ ಮಾಹಿತಿಯನ್ನು ಬೃಹತ್ ಪ್ರಮಾಣದಲ್ಲಿ ಸಂಗ್ರಹಿಸುವ ವ್ಯವಸ್ಥಿತವಾಗಿ ದಾಖಲಿಸುವ ಭಾರತದ ಮೊಟ್ಟಮೊದಲ ಪ್ರಯತ್ನ ಇದಾಗಿದೆ.
- ರೋಹಿಣಿ ನಿಲೇಕಣಿ ಸೆಂಟರ್ ಫಾರ್ ಬ್ರೈನ್ ಆ್ಯಂಡ್ ಮೈಂಡ್‌ನ (ಸಿಬಿಎಂ) ಸಂಶೋಧಕರು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಹಾಗೂ ರಾಷ್ಟ್ರೀಯ ಜೈವಿಕ ವಿಜ್ಞಾನ ಕೇಂದ್ರ (ಎನ್‌ಸಿಬಿಎಸ್)- ಟಿಐಎಫ್‌ಆರ್ ಸಹಯೋಗದಲ್ಲಿ ಹತ್ತು ವರ್ಷಗಳಿಂದ ಸಂಶೋಧನೆ ನಡೆಸಿ, 'ಕಾಮ್-ಬ್ರೈನ್ ಅಭಿವೃದ್ಧಿಪಡಿಸಿದ್ದಾರೆ. ನಗರದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಈ ಡಿಜಿಟಲ್ ಮಾಹಿತಿ ಭಂಡಾರ ಅನಾವರಣ ಮಾಡಿದ್ದಾರೆ
- ನರಮನೋವೈದ್ಯಕೀಯ ಅಸ್ವಸ್ಥತೆಗಳನ್ನು ಧ್ಯಯನ ಮಾಡುವ ಗುರಿ ಹೊಂದಿರುವ ಭಾರತದ ಯಾವುದೇ ವೈದ್ಯರು ಮತ್ತು ಸಂಶೋಧಕರು, ಈ ಬಹುಮಾದರಿ ಡಿಜಿಟಲ್ ಭಂಡಾರದ ನೆರವು ಪಡೆಯಬಹುದಾಗಿದೆ. ಇದರಿಂದಾಗಿ ರೋಗದ ಆಕ್ರಮಣ, ಪ್ರಗತಿ ಮತ್ತು ಅದಕ್ಕೆ ಸಂಬಂಧಿಸಿರುವ ಜೈವಿಕ ಬದಲಾವಣೆಗಳು ಹಾಗೂ ರೋಗದ ಲಕ್ಷಣಗಳ ನಡುವಿನ ಪರಸ್ಪರ ಸಂಬಂಧಗಳನ್ನು ನಿಖರವಾಗಿ ಅರ್ಥ ಮಾಡಿಕೊಳ್ಳಬಹುದು' ಎಂದು ಸಿಬಿಎಂ ಸಂಶೋಧಕರು ತಿಳಿಸಿದರು.
- 'ಕಾಮ್-ಬ್ರೈನ್ ಆಡಿ ನಡೆಸಿದ ಸಂಶೋಧನೆಗಳು ಮಾನಸಿಕ ಅಸ್ವಸ್ತತೆಗಳ ಕುರಿತಾದ ತಿಳಿವಳಿಕೆಯನ್ನು ಅರ್ಥೈಸುವಲ್ಲಿ ಅಪಾರ ಸಾಮರ್ಥ್ಯವನ್ನು ಹೊಂದಿವೆ ರೋಗ ನಿವಾರಣೆ ವಿಧಾನವನ್ನು ಗುರುತಿಸಲು ಮತ್ತು ವ್ಯಕ್ತಿಗತ ಚಿಕಿತ್ಸೆಗಳನ್ನು ಯೋಚಿಸುವಲ್ಲಿ ಸಹಾಯ ಮಾಡುತ್ತದೆ' ಎಂದರು.
- ಚಿಕಿತ್ಸೆಗೆ ಸಹಕಾರಿ 'ಕಾಮ್-ಬ್ರೈನ್ ಆಡಿ ಸಂಗ್ರಹಿಸಲಾದ ದತ್ತಾಂಶವು ಪರಿಣಾಮಕಾರಿ ಚಿಕಿತ್ಸೆಯ ಅಭಿವೃದ್ಧಿಗೆ ನಮಗೆ ಸಹಾಯ ಮಾಡುತ್ತದೆ' ಎಂದು ಎನ್‌ಸಿಬಿಎಸ್‌ನ ನಿರ್ದೇಶಕ ಪ್ರೊ.ಎಲ್.ಎಸ್ ಶಶಿಧರ್ ಹೇಳಿದರು.
- 'ಸಾಂಪ್ರದಾಯಿಕ ರೋಗನಿರ್ಣಯ ಚೌಕಟ್ಟುಗಳನ್ನು ಮೀರಿದ ತೀವ್ರ ಮನೋವೈದ್ಯಕೀಯ ಕಾಯಿಲೆಗಳ ಜೈವಿಕ ಗುರುತುಗಳನ್ನು ಗುರುತಿಸುವುದು ಈ ಯೋಜನೆಯ ಪ್ರಾಥಮಿಕ ಗುರಿಯಾಗಿದೆ ಇದರ ಜತೆಗೆ, ರೋಗದ ಮೂಲಭೂತ ಜೈವಿಕ ಕಾರ್ಯವಿಧಾನಗಳನ್ನು ಗುರುತಿಸಲು ನಾವು ಪ್ರಯತ್ನಿಸುತ್ತೇವೆ' ಎಂದು ಸಿಬಿಎಂ-ನಿಮ್ಹಾನ್ಸ್‌ನ ಸಂಯೋಜಕರಾದ ಪ್ರೊ.ವೈ.ಸಿ. ಜನಾರ್ದನ ರೆಡ್ಡಿ ಮಾಹಿತಿ ನೀಡಿದರು.

**2,700 ಮಂದಿ ದತ್ತಾಂಶ**

- ಈ ಮಾಹಿತಿ ಭಂಡಾರಕ್ಕೆ 2016ರಿಂದ ರೋಗಿಗಳ ದತ್ತಾಂಶ ಸಂಗ್ರಹಿಸಲಾಗುತ್ತಿದೆ ಸದ್ಯ ಈ ಭಂಡಾರವು 1,100 ಕುಟುಂಬಗಳಿಂದ, 2,700ಕ್ಕೂ ಹೆಚ್ಚು ಮಾನಸಿಕ ಆಸ್ವಸ್ಥರ ದತ್ತಾಂಶಗಳನ್ನು ಒಳಗೊಂಡಿದೆ.

## ❖ ಉಡುಪಿ ಜಿಲ್ಲೆಯ ಐದು ಸೇರಿ ಆರು ಗ್ರಾ.ಪಂಗಳಿಗೆ ಪ್ರಶಸ್ತಿ

**ಸಂದರ್ಭ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯವು ಉತ್ತಮ ಕಾರ್ಯನಿರ್ವಹಣೆಗೆ ನೀಡುವ ರಾಷ್ಟ್ರಮಟ್ಟದ ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸತತ್ ವಿಕಾಸ್ ಪುರಸ್ಕಾರಕ್ಕೆ ರಾಜ್ಯದ ಆರು ಗ್ರಾಮ ಪಂಚಾಯಿತಿಗಳು ಆಯ್ಕೆಯಾಗಿವೆ.**

- ಉಡುಪಿ ಜಿಲ್ಲೆಯ ಐದು ಪಂಚಾಯಿತಿಗಳು ಆಯ್ಕೆಯಾಗಿದ್ದು, ಬಡತನ ಮುಕ್ತ ಮತ್ತು ಸುಧಾರಿತ ಜೀವನೋಪಾಯ ವಿಭಾಗದಲ್ಲಿ ಹೆಬ್ರಿಯ ಮುದ್ರಾಡಿ ಗ್ರಾ.ಪಂ. ಪ್ರಥಮ ಸ್ಥಾನ ಪಡೆದಿದೆ (R 1ಕೋಟಿ ನಗದು ಬಹುಮಾನ), ಆರೋಗ್ಯಕರ ಪಂಚಾಯಿತಿ ವಿಭಾಗದಲ್ಲಿ ಕುಂದಾಪುರದ ವಂಡ್ಸೆ ಗ್ರಾ.ಪಂ. ಹಾಗೂ ಜಲ ಸಮೃದ್ಧ ವಿಭಾಗದಲ್ಲಿ ಹೆಬ್ರಿಯ ಮಡಾಮಕ್ಕಿ ಗ್ರಾ.ಪಂ. ದ್ವಿತೀಯ ಸ್ಥಾನ ಪಡೆದಿದೆ (₹75 ಲಕ್ಷ ಬಹುಮಾನ).
- ಸ್ವಾವಲಂಬಿ ಮೂಲಸೌಕರ್ಯ ವಿಭಾಗದಲ್ಲಿ ಕಾರ್ಕಳದ ಸಾಣೂರು ಗ್ರಾ.ಪಂ., ಸಾಮಾಜಿಕ ನ್ಯಾಯ ಮತ್ತು ಭದ್ರತೆ ವಿಭಾಗದಲ್ಲಿ ಕುಂದಾಪುರದ ಹಕ್ಲಾಡಿ ಪಂಚಾಯಿತಿ ತೃತೀಯ ಸ್ಥಾನಪಡೆದಿದೆ (₹50 ಲಕ್ಷ ನಗದು).
- ಮಕ್ಕಳ ಸ್ನೇಹಿ ಪಂಚಾಯಿತಿ ವಿಭಾಗದಲ್ಲಿ ಬೆಂಗಳೂರು ಪೂರ್ವದ ಹಾಲನಾಯಕನ ಹಳ್ಳಿ ಗ್ರಾ.ಪಂಗೆ ಪುರಸ್ಕಾರ ಲಭಿಸಿದೆ.

## ❖ ಕುಡಿಯುವ ನೀರು: ಗ್ರಾ.ಪಂ.ಗೆ ₹15.86 ಕೋಟಿ ಬಿಡುಗಡೆ

**ಸಂದರ್ಭ: ಗ್ರಾಮ ಪಂಚಾಯಿತಿಗಳಿಗೆ ಕೇಂದ್ರ ಸರ್ಕಾರದ 15ನೇ ಹಣಕಾಸು ಆಯೋಗದ ಅನುದಾನ ಬಿಡುಗಡೆ ಆಗಿಲ್ಲ. ಹೀಗಾಗಿ, ರಾಜ್ಯ ಹಣಕಾಸು ಆಯೋಗದಿಂದ ಗ್ರಾಮ ಪಂಚಾಯಿತಿಗಳಿಗೆ ಹಂಚಿಕೆಯಾಗಿದ್ದ ₹1,261.03 ಕೋಟಿಯಲ್ಲಿ ಈಗಾಗಲೇ ಬಿಡುಗಡೆ ಮಾಡಿ ಉಳಿದಿರುವ ₹15.86 ಕೋಟಿಯನ್ನು 5,941 ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.**

- ಈ ಅನುದಾನವನ್ನು ಗ್ರಾಮ ಪಂಚಾಯಿತಿಗಳು ಕುಡಿಯುವ ನೀರು ನಿರ್ವಹಣೆ ಚಟುವಟಿಕೆಗೆ ಮಾತ್ರ ವೆಚ್ಚ ಮಾಡಬೇಕು ಅಲ್ಲದೆ, ಅನುದಾನದಲ್ಲಿ ಶೇ 25ರಷ್ಟನ್ನು ಎಸ್‌ಸಿ, ಎಸ್‌ಟಿ ಜನರಿಗೆ ವಿನಿಯೋಗಿಸಬೇಕು ಎಂದೂ ಷರತ್ತು ವಿಧಿಸಲಾಗಿದೆ.
- ರಾಜ್ಯದಲ್ಲಿ ಒಟ್ಟು 5,946 ಗ್ರಾಮ ಪಂಚಾಯಿತಿಗಳಿವೆ. ಈ ಪೈಕಿ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಚಾಮನಹಳ್ಳಿ, ಸೋಮನಹಳ್ಳಿ, ಗೆಜ್ಜಲಗೆರೆ, ಗೊರವನಹಳ್ಳಿ ಹಾಗೂ ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ದೋರನಹಳ್ಳಿ, ಪಂಚಾಯಿತಿ ( ಒಟ್ಟು ಐದು ಗ್ರಾಮ ಪಂಚಾಯಿತಿಗಳು) ಪುರಸಭೆ, ನಗರಸಭೆಗೆ ಹಸ್ತಾಂತರವಾಗಿದೆ. ಹೀಗಾಗಿ ಈ ಪಂಚಾಯಿತಿಗಳನ್ನು ಹೊರತುಪಡಿಸಿ ಅನುದಾನ ಹಂಚಿಕೆ ಮಾಡಲಾಗಿದೆ ಎಂದು ವಿವರಿಸಲಾಗಿದೆ.
- ಮುಂಬರುವ ಬೇಸಿಗೆ ಅವಧಿ ಯಲ್ಲಿ ಕುಡಿಯುವ ನೀರಿನ ನಿರ್ವ ಹಣೆಗೆ ಅನುದಾನದ ಕೊರತೆ ಉಂಟಾಗ ಬಹುದು ಎಂಬ ಕಾರಣಕ್ಕೆ ರಾಜ್ಯ ಹಣ ಕಾಸು ಆಯೋಗದ ಅಡಿಯಲ್ಲಿ ಒದಗಿಸಿದ್ದ ಅನುದಾನದಲ್ಲಿ ಬಾಕಿ ಉಳಿದಿರುವ ಹಣ ವನ್ನು ಬಿಡುಗಡೆ ಮಾಡಲಾಗಿದೆ ಎಂದೂ ಆದೇಶದಲ್ಲಿದೆ.

## ❖ ಹುದ್ದೆ ಮುಂಬಡ್ತಿಗೆ ತರಬೇತಿ ಕಡ್ಡಾಯ


**ಸಂದರ್ಭ: ಇನ್ನು ಮುಂದೆ ಸರ್ಕಾರಿ ನೌಕರರು ಹುದ್ದೆಯಲ್ಲಿ ಮುಂಬಡ್ತಿ ಪಡೆಯಲು ಜೇಷ್ಠತೆ ಒಂದೇ ಮಾನದಂಡವಲ್ಲ. ಅಗತ್ಯ ತರಬೇತಿಯೂ ಕಡ್ಡಾಯ ಎಂದು ರಾಜ್ಯ ಸರ್ಕಾರ ತಿಳಿಸಿದೆ.**

- ಈ ಕಾರಣಕ್ಕೆ 'ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಮುಂಬಡ್ತಿಗಾಗಿ ತರಬೇತಿ ಕಡ್ಡಾಯ) ನಿಯಮಗಳು-2026' ಅನ್ನು ಪ್ರಕಟಿಸಲಾಗಿದೆ.
- ಪದೋನ್ನತಿ ಪಡೆಯಲು ಕಡ್ಡಾಯವಾಗಿ ತರಬೇತಿ ನೀಡಬೇಕು ಎಂದು ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 ಕೂಡ ತನ್ನ ಒಂದನೇ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸು ಮಾಡಿತ್ತು ಅದರ ಅನ್ವಯ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನಿರ್ಣಯ ತೆಗೆದುಕೊಂಡು ಕರಡು ನಿಯಮ ರೂಪಿಸಲಾಗಿತ್ತು ಇದೀಗ ಅಧಿಸೂಚನೆ ಹೊರಡಿಸಲಾಗಿದೆ.
- ವಿನಾಯಿತಿ'ಗ್ರೂಪ್ 'ಸಿ' ವೃಂದದಲ್ಲಿರುವ ವಾಹನ ಚಾಲಕರು ಮತ್ತು ಗ್ರೂಪ್ 'ಡಿ' ವೃಂದದ ನೌಕರರಿಗೆ ತರಬೇತಿಯಿಂದ ವಿನಾಯಿತಿ ನೀಡಲಾಗಿದೆ. ಅಲ್ಲದೆ, ಕರ್ತವ್ಯದಿಂದ ನಿವೃತ್ತಿ ಹೊಂದಲು ಕೇವಲ ಎರಡು ವರ್ಷ ಅಥವಾ ಅದಕ್ಕಿಂತ ಕಡಿಮೆ ಅವಧಿ ಬಾಕಿ ಇರುವ ನೌಕರರಿಗೆ ಈ ತರಬೇತಿಯಿಂದ ವಿನಾಯಿತಿ ಇರುತ್ತದೆ.

**ಯಾರಿಗೆಲ್ಲ ಕಡ್ಡಾಯ?:**

- ಗ್ರೂಪ್ 'ಎ' ನೌಕರರು: ಹಿರಿಯ ಮಟ್ಟದ ಅಧಿಕಾರಿಗಳು ತಮ್ಮ ಆಡಳಿತಾತ್ಮಕ ಕೌಶಲಗಳನ್ನು ನವೀಕರಿಸಿಕೊಳ್ಳಲು ತರಬೇತಿ ಪಡೆಯುವುದು ಕಡ್ಡಾಯ.
- ಗ್ರೂಪ್ 'ಬಿ' ನೌಕರರು: ಮಧ್ಯಮ ಹಂತದ ಅಧಿಕಾರಿಗಳಿಗೆ ಕ್ಷೇತ್ರ ಕಾರ್ಯ ಮತ್ತು ಕಚೇರಿ ನಿರ್ವಹಣೆಯ ಕುರಿತು ವಿಶೇಷ ತರಬೇತಿ ಇರಲಿದೆ.
- ಗ್ರೂಪ್ 'ಸಿ' ನೌಕರರು ಕಚೇರಿ ಸಹಾಯಕರು ಮತ್ತು ಇತರ ತಾಂತ್ರಿಕೇತರ ಸಿಬ್ಬಂದಿಗೆ ಈ ನಿಯಮ ಅನ್ವಯವಾಗುತ್ತದೆ.

IAS/KAS Academy





# ಭೂಮಿಗೆ ಒಬ್ಬನೇ ಚಂದ್ರ ಶನಿಗೆ ಇನ್ನೂರ ಎಪ್ಪತ್ನಾಲ್ಕು!

• ಎಸ್.ಎನ್. ಹೆಗಡೆ

ಚಂದ್ರನು ಭೂಮಿಯ ಏಕೈಕ ನೈಸರ್ಗಿಕ ಉಪಗ್ರಹ ಮತ್ತು ಭೂಮಿಗೆ ಬಹಳ ಹತ್ತಿರವಿರುವ ಒಂದು ಆಕಾಶಕಾಯ. ಆಗಸದಲ್ಲಿ ಇದೊಂದು ಆಕರ್ಷಕ ವಸ್ತು. ಪ್ರಾಚೀನ ಕಾಲದಿಂದಲೂ ಚಂದ್ರನು ಮಾನವರನ್ನು ಆಕರ್ಷಿಸಿದ್ದಾನೆ! ಖಗೋಳವಿಜ್ಞಾನದ ಅನ್ವೇಷಣೆಗಳು ಮಾನವದೃಷ್ಟಿಗೆ ನಿಲುಕಬಲ್ಲ ವಸ್ತುಗಳ ವೀಕ್ಷಣೆಗೆ ಮಾತ್ರ ಸೀಮಿತವಾಗಿದ್ದಾಗ ಚಂದ್ರನು ದೇವತೆಗಳಲ್ಲೊಬ್ಬ ಎಂದು ಪರಿಗಣಿಸಲಾಗುತ್ತಿತ್ತು, ದೂರದರ್ಶಕದಂತಹ ಉಪಕರಣಗಳ ಆವಿಷ್ಕಾರವಾದ ನಂತರ ವಿಜ್ಞಾನದ ಪರಿಶೋಧನೆಗಳು ಮುಂದುವರಿದು, ಚಂದ್ರನನ್ನು ಕುರಿತು ಹೆಚ್ಚು ಹೆಚ್ಚು ಮಾಹಿತಿಗಳು ಬರತೊಡಗಿದವು. ಚಂದ್ರನು ಭೂಮಿಯ ಸುತ್ತ ಸರಾಸರಿ 384,400 ಕಿಲೋಮೀಟರ್ ದೂರದಲ್ಲಿ ತನ್ನ ಕಕ್ಷೆಯಲ್ಲಿ ಸುತ್ತುತ್ತಿರುತ್ತಾನೆ, ಸುಮಾರು 29.5 ದಿನಗಳಲ್ಲಿ ಭೂಮಿಯ ಸುತ್ತ ಒಂದು ಸುತ್ತು ಹಾಕುತ್ತಾನೆ ಎಂದು ಕಂಡುಹಿಡಿಯಲಾಗಿದೆ.

ಒಮ್ಮೆ ಕೇವಲ ಕಲ್ಪನೆಯಾಗಿದ್ದ ಅಂತರಿಕ್ಷಯಾನಗಳು, ನಂತರದಲ್ಲಿ ವಾಸ್ತವವಾಗಿ ಪ್ರಾರಂಭವಾದಾಗ ಚಂದ್ರನ ಕುರಿತ ಅಧ್ಯಯನಗಳಿಗೆ ಹೊಸ ಆಯಾಮ ದೊರಕಿಸಿಕೊಟ್ಟವು. 1969ರಲ್ಲಿ, ಗಗನಯಾತ್ರಿಗಳಾದ ನೀಲ್ ಆರ್ಮ್‌ಸ್ಟ್ರಾಂಗ್ ಮತ್ತು ಎಡ್ವಿನ್ ಬಜ್ ಆಲ್ಡ್ರಿನ್ ಅಪೊಲೊ ಗಗನನೌಕೆಯ ಮೂಲಕ ಚಂದ್ರನನ್ನು ತಲುಪಿ ಅದರ ಮೇಲೆ ನಡೆದಾಡಿ ದಾಖಲೆ ನಿರ್ಮಿಸಿದರು. ಅನಂತರ ಅಭಿವೃದ್ಧಿಯಾದ ರೋಬೋಟಿಕ್ ಕಾರ್ಯಾಚರಣೆಗಳ ಮೂಲಕ ಖಗೋಳವಿಜ್ಞಾನಿಗಳು ಚಂದ್ರನ ಸಂಯೋಜನೆ, ಮೂಲ ಮತ್ತು ಇತಿಹಾಸದ ಬಗ್ಗೆ ಇನ್ನಷ್ಟು ಮಾಹಿತಿಯನ್ನು ಕಲೆಹಾಕಿದರು.

ಚಂದ್ರಗ್ರಹವು ಸುಮಾರು 4.5 ಶತಕೋಟಿ ವರ್ಷಗಳ ಹಿಂದೆ ರೂಪುಗೊಂಡಿತು ಎಂದು ವಿಜ್ಞಾನಿಗಳು ಲೆಕ್ಕ ಹಾಕಿದ್ದಾರೆ. ಅವರ ಪ್ರಕಾರ ಬಹುಶಃ ಆರಂಭಿಕ ಭೂಮಿ ಹಾಗೂ ಮಂಗಳನ ಗಾತ್ರದ ಒಂದು ಆಕಾಶಕಾಯಗಳ ನಡುವೆ ಸಂಭವಿಸಿದ ಬೃಹತ್ ಡಿಕ್ಕಿಯ ಪರಿಣಾಮವಾಗಿ ಉದ್ಭವಿಸಿದ ವಸ್ತುಗಳಿಂದ ಚಂದ್ರನ ಉಗಮವಾಗಿರಬೇಕು. ಚಂದ್ರನಿಗೆ ಭೂಮಿಯ ಗುರುತ್ವಾಕರ್ಷಣೆಯ ಕೇವಲ ಆರನೆಯ ಒಂದು ಭಾಗ ಮಾತ್ರ ಇದೆ. ಅದರಿಂದ ಗಗನಯಾತ್ರಿಗಳು ಚಂದ್ರನ ಮೇಲೆ ಸುಲಭವಾಗಿ ಬಹು ಎತ್ತರಕ್ಕೆ ಜಿಗಿಯಬಲ್ಲರು ಎಂದು ಕಂಡುಹಿಡಿಯಲಾಗಿದೆ.

ಈ ಸಂಶೋಧನೆಗಳು, ಚಂದ್ರನು ಆಕಾಶದಲ್ಲಿ ರಾತ್ರಿ ವಿವಿಧ ಆಕಾರದಲ್ಲಿ ತಿಂಗಳಿನಲ್ಲಿ ಹದಿನೈದು ದಿನ ಮಾತ್ರ ಗೋಚರಿಸುವ ಒಂದು ಸುಂದರವಾದ ವಸ್ತು ಮಾತ್ರವಲ್ಲ, ಅದು ಭೂಮಿಯ ಪ್ರಮುಖ ಒಡನಾಡಿ, ಭೂಮಿಯ ಸಂಗಾತಿ ಎಂದು ತಿಳಿಸಿವೆ. ಚಂದ್ರ ಅನೇಕ ಭೂವೈಜ್ಞಾನಿಕ ಸಂಗತಿಗಳನ್ನು ಕೂಡ ನಿಯಂತ್ರಿಸುತ್ತದೆ; ಸಮುದ್ರದ ಉಬ್ಬರವಿಳಿತಗಳೂ ಸೇರಿದಂತೆ ಭೂಮಿಯ ಮೇಲಣ ಹಲವು ನೈಸರ್ಗಿಕ ಪ್ರಕ್ರಿಯೆಗಳ ಮೇಲೆ ಪ್ರಭಾವ ಬೀರುತ್ತದೆ ಎಂದು ವಿಜ್ಞಾನಿಗಳು ಈಗಾಗಲೇ ಕಂಡುಹಿಡಿದಿದ್ದಾರೆ. ಅಗಾಧವಾದ ವಿಶ್ವವನ್ನು ಹಾಗೂ ಸೌರವ್ಯೂಹವನ್ನು ಅರ್ಥಮಾಡಿಕೊಳ್ಳಲು ಈ ಸಂಶೋಧನೆಗಳು ಸಹಾಯ ಮಾಡಿದವು. ಅಂತೆಯೇ ಚಂದ್ರನ ಬಗ್ಗೆ ಹಾಗೂ ಸೂರ್ಯನ ಬಗ್ಗೆ ಇನ್ನಷ್ಟು ಕುತೂಹಲ ಮತ್ತು ಪರಿಶೋಧನೆಯನ್ನು ಪ್ರೇರೇಪಿಸುತ್ತಲೇ ಇವೆ. ಇವೆಲ್ಲ ಸಂಶೋಧನೆಗಳನ್ನು ನಡೆಸಿದ ಖಗೋಳವಿಜ್ಞಾನಿಗಳ ಜ್ಞಾನತೃಷೆ ಇನ್ನೂ ನಿಂತಿಲ್ಲ.

ಬಹಳ ಹಿಂದಿನಿಂದ ಈ ವಿಶಾಲ ವಿಶ್ವದಲ್ಲಿ ನಾವು ಅಂತರಿಕ್ಷದಲ್ಲಿ ಕಾಣುವ ಒಂದೇ ಸೂರ್ಯ ಹಾಗೂ ಚಂದ್ರರಿದ್ದಾರೆ ಎಂಬ ನಂಬಿಕೆ ಇತ್ತು. ಆದರೆ ಈಗ ವಿಶ್ವ ಅನಂತವಾದುದು. ಅದರಲ್ಲಿ ಹಲವಾರು ಸೌರವ್ಯೂಹಗಳಿವೆ. ಪ್ರತಿಯೊಂದು ಸೌರವ್ಯೂಹದಲ್ಲಿಯೂ ಪ್ರತ್ಯೇಕ ಸೂರ್ಯ-ಚಂದ್ರಗ್ರಹಗಳಿವೆ ಎಂದು ತಿಳಿದುಬಂದಿದೆ. ಆದರೆ ಇಂದು ಲಭ್ಯವಿರುವ ಯಾವುದೇ ಉಪಕರಣಗಳಿಗೆ ಅವುಗಳನ್ನು ಗುರುತಿಸುವ ಸಾಮರ್ಥ್ಯವಿಲ್ಲ ಅಷ್ಟೆ. ಈ ಸೌರವ್ಯೂಹದಲ್ಲಿ ಭೂಮಿಗೆ ಆತನ ಸುತ್ತ ಸುತ್ತುತ್ತಿರುವ ಒಬ್ಬನೇ ಚಂದ್ರ ಇದ್ದಾನೆ. ಅಂದರೆ ಭೂಮಿಗೆ ಚಂದ್ರ ಒಂದೇ ನೈಸರ್ಗಿಕ ಉಪಗ್ರಹ.

ಈಗ ಖಗೋಳವಿಜ್ಞಾನಿಗಳು ವಿವಿಧ ಗಗನಯಾನ, ಆಕಾಶಯಾನಗಳ ಮೂಲಕ ಹಲವು ಹೊಸ ಮಾಹಿತಿಗಳನ್ನು ಕಂಡುಹಿಡಿಯುತ್ತಿದ್ದಾರೆ. ಇತ್ತೀಚೆಗೆ ಅಮೆರಿಕದ 'ನಾಸಾ' ಅಭಿವೃದ್ಧಿಪಡಿಸಿದ ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್ (ಜೆಡಬ್ಲ್ಯುಎಸ್‌ಟಿ) ಮೂಲಕ 2025ರಲ್ಲಿ ನಡೆಸಿದ ಶೋಧಗಳಿಂದ ಸೌರವ್ಯೂಹದಲ್ಲಿ ಭೂಮಿಗೆ ಚಂದ್ರ ಒಂದೇ ಉಪಗ್ರಹವಾದರೂ ಇನ್ನಿತರ ಗ್ರಹಗಳಿಗೆ ಹಲವಾರು ಚಂದ್ರಗಳಿವೆ ಎಂಬುದನ್ನು ದೃಢೀಕರಿಸಿದ್ದಾರೆ. ಹಲವು ಹೊಸ ಹೊಸ ಚಂದ್ರರನ್ನು ಕಂಡುಹಿಡಿದಿದ್ದಾರೆ. ಇದುವರೆಗಿನ ಸಂಶೋಧನೆಗಳ ಪ್ರಕಾರ ಶನಿ ಮತ್ತು ಗುರುಗ್ರಹಗಳು ಅತಿ ಹೆಚ್ಚು ಚಂದ್ರರನ್ನು ಒಳಗೊಂಡಿವೆ ಎಂದೂ ಈ ಸಂಶೋಧನೆಗಳು ಹೇಳುತ್ತಿವೆ.

ಇದುವರೆಗೆ ಶನಿಗ್ರಹಕ್ಕೆ 146 ಚಂದ್ರರಿದ್ದಾರೆ ಎಂದು ದಾಖಲಿಸಲಾಗಿತ್ತು. ಅವುಗಳಲ್ಲಿ 'ಟೈಟನ್' ಮತ್ತು 'ಎನ್ಸೆಲಾಡಸ್' ಎಂಬವು ದೊಡ್ಡ ಗಾತ್ರದವು; ಉಳಿದವು ಚಿಕ್ಕವು ಎಂದು ದಾಖಲಿಸಲಾಗಿದೆ. ಶನಿಗ್ರಹಕ್ಕೆ ಈ ಮೊದಲು ಕಂಡುಹಿಡಿದಿದ್ದ 146 ಚಂದ್ರರ ಜೊತೆ ಇನ್ನೂ 128 ಚಂದ್ರರನ್ನು ಕಂಡಿರುವುದಾಗಿ 2025ರ ಫೆಬ್ರುವರಿ ತಿಂಗಳಿನಲ್ಲಿ 'ನಾಸಾ' ಪ್ರಕಟಿಸಿದೆ. ಎಂದರೆ ಶನಿಗ್ರಹಕ್ಕೆ ಒಟ್ಟು 274 ಚಂದ್ರರಿದ್ದಾರೆ ಎಂದಂತಾಯಿತು! ಇದು ಸೌರವ್ಯೂಹದ ಯಾವುದೇ ಗ್ರಹಕ್ಕಿಂತ ಹೆಚ್ಚು ಚಂದ್ರರನ್ನು ಹೊಂದಿರುವ ವಿಶಿಷ್ಟವಾದ ಗ್ರಹ.

ಶನಿಗ್ರಹದ ಸುತ್ತ ಇರುವ ಚಂದ್ರರ ಮೂಲ, ಗಾತ್ರ ಮತ್ತು ಕಕ್ಷೆಯ ಲಕ್ಷಣಗಳನ್ನು ಆಧರಿಸಿ ಈ ಚಂದ್ರರನ್ನು ವರ್ಗೀಕರಿಸುವುದೂ ಸಾಧ್ಯವಾಗಿದೆ. ಅವುಗಳಲ್ಲಿ ನಿಶ್ಚಿತ ಗಾತ್ರವನ್ನು ಹೊಂದಿರುವ ಕೆಲವನ್ನು ನಿಯಮಿತ ಚಂದ್ರ ಎಂದೂ, ನಿಯಮಿತ ಗಾತ್ರವಿಲ್ಲದ ಇನ್ನುಳಿದವುಗಳನ್ನು ಅನಿಯಮಿತ ಚಂದ್ರರು ಎಂದು ವರ್ಗೀಕರಿಸಲಾಗಿದೆ. ಅವೆಲ್ಲವೂ ಶನಿಗ್ರಹದ ಸುತ್ತ ನಿರ್ದಿಷ್ಟ ಕಕ್ಷೆಯಲ್ಲಿ ನಿರ್ದಿಷ್ಟ ದಿಕ್ಕಿನಲ್ಲಿ ಸುತ್ತುತ್ತಿರುತ್ತವೆಂದೂ, ವಿವಿಧ ಬಗೆಯ ಅನಿಲ ಅಥವಾ ದೂಳಿನಿಂದ ಕೂಡಿರುವುವೆಂದೂ ವಿವರಿಸಲಾಗಿದೆ.

ಈಗ ಕಂಡುಹಿಡಿಯಲಾದ 128 ಚಂದ್ರರಲ್ಲಿ ಬಹುತೇಕವು ಚಿಕ್ಕದಾಗಿದ್ದು ಅನಿಯಮಿತ ಗಾತ್ರ ಹೊಂದಿವೆ. ಅವುಗಳ ಕಕ್ಷೆಗಳು ಕೂಡ ಅಸಾಮಾನ್ಯವಾಗಿವೆ. ಅವುಗಳಲ್ಲಿ ಕೆಲವು ಶನಿಗ್ರಹದ ತಿರುಗುವಿಕೆಗೆ ವಿರುದ್ಧವಾಗಿ ಹಿಮ್ಮುಖ ಚಲನೆಯನ್ನು ಕೂಡ ಹೊಂದಿವೆ. ಬಹುಶಃ ಈ ಸಣ್ಣ ಚಂದ್ರಗಳು ಶನಿಯ ಸುತ್ತ ಬಾಹ್ಯಾಕಾಶದಲ್ಲಿ ಉಂಟಾದ ಘರ್ಷಣೆಗಳ ಪರಿಣಾಮವಾಗಿ ಉದ್ಭವಿಸಿರಬೇಕು ಎಂದು ಊಹಿಸಲಾಗಿದೆ.

ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್ ಆಗಸದಲ್ಲಿ ಹೊಸ ಹೊಸ ಆಕಾಶಕಾಯಗಳನ್ನು, ನಕ್ಷತ್ರಗಳನ್ನು ಗುರುತಿಸುತ್ತಲೇ ಇದೆ. ಅವುಗಳಲ್ಲಿ ವಿವಿಧ ಗ್ರಹಗಳ ಸುತ್ತ ಸುತ್ತುತ್ತಿರುವ ಚಂದ್ರನಂತಹ ಉಪಗ್ರಹಗಳೂ ಸೇರಿವೆ. ಬುಧ ಮತ್ತು ಶುಕ್ರಗ್ರಹಗಳನ್ನು ಹೊರತುಪಡಿಸಿ ಇನ್ನಿತರ ಎಲ್ಲ ಗ್ರಹಗಳಿಗೂ ಚಂದ್ರರಿದ್ದಾರೆ ಎಂಬ ಅತ್ಯಂತ ವಿಸ್ಮಯಕರ ಸಂಗತಿಯನ್ನು ಕೂಡ ಕಂಡುಹಿಡಿಯಲಾಗಿದೆ. ಬಾಹ್ಯಾಕಾಶ ಸಂಶೋಧನೆಗಳು ಮುಂದುವರಿದಂತೆಲ್ಲ ಇನ್ನಷ್ಟು ಮಾಹಿತಿಗಳು ದೊರಕಬಹುದೇನೋ!

## ❖ ಪಶ್ಚಿಮ ಏಷ್ಯಾಗ್ಯ ಸಂಘರ್ಷದಿಂದ ದೇಶದ ಆರ್ಥಿಕತೆಯಮೇಲೆ ಪರಿಣಾಮ: ಇ.ವೈ ಎಕಾನಮಿ ವಾಚ್ ವರದಿ: ಜಿಡಿಪಿ: ಶೇ 1ರಷ್ಟು ಕುಸಿತ ಸಾಧ್ಯತೆ

**ಸಂದರ್ಭ: ಪಶ್ಚಿಮ ಏಷ್ಯಾದ ಸಂಘರ್ಷವು 2026-27ರ ಆರ್ಥಿಕ ವರ್ಷದುದ್ದಕ್ಕೂ ಮುಂದುವರಿದರೆ ದೇಶದ ಜಿಡಿಪಿ ಬೆಳವಣಿಗೆಯು ಶೇಕಡ 1ರಷ್ಟು ಇಳಿಕೆ ಆಗಬಹುದು. ಜೊತೆಗೆ ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರವು ಶೇ1.5ರಷ್ಟು ಹೆಚ್ಚಳವಾಗುವ ನಿರೀಕ್ಷೆ ಇದೆ ಎಂದು 'ಇ.ವೈ. ಎಕನಾಮಿ ವಾಚ್' ವರದಿ ಮಂಗಳವಾರ ತಿಳಿಸಿದೆ.**



ಶೇ 6.5ಕ್ಕೆ ಪ್ರಗತಿ ಇಳಿಕೆ: ಐಸಿಆರ್‌ಎ


**ನವದೆಹಲಿ (ಪಿಟಿಐ):** ಪಶ್ಚಿಮ ಏಷ್ಯಾದ ಸಂಘರ್ಷದಿಂದ 2026–27ರ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ನಿಧಾನವಾಗಲಿದ್ದು, ಶೇ 6.5ರಷ್ಟಾಗಬಹುದು ಎಂದು ಐಸಿಆರ್‌ಎ ಅಂದಾಜಿಸಿದೆ.

ಈ ಮೊದಲು ಐಸಿಆರ್‌ಎ ಶೇ 7.5ರಷ್ಟು ಜಿಡಿಪಿ ದರವನ್ನು ಅಂದಾಜಿಸಿತ್ತು.

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಇಂಧನ ಬೆಲೆಯಲ್ಲಿ ಏರಿಕೆಯಾಗಿದ್ದು, ಇಂಧನ ಲಭ್ಯತೆಯಲ್ಲಿ ಆತಂಕ ಹೆಚ್ಚಿಸಿದೆ. ಇದು ಜಿಡಿಪಿಯ ಬೆಳವಣಿಗೆಯ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದೆ.

ಬ್ರೆಂಟ್ ಕಚ್ಚಾ ತೈಲ ದರವು 2026–27ರಲ್ಲಿ ಪ್ರತಿ ಬ್ಯಾರಲ್‌ಗೆ ಸರಾಸರಿ 85 ಡಾಲರ್ ಆಗಬಹುದು. ಇದರಿಂದ ದೇಶದ ಚಾಲ್ತಿ ಖಾತೆ ಕೊರತೆ ಶೇ 1.7ರಷ್ಟಾಗಬಹುದು. ಸಂಘರ್ಷದಿಂದ ಹಣದುಬ್ಬರ ಹೆಚ್ಚಳವಾಗುವ ನಿರೀಕ್ಷೆಯಿದ್ದು, ಹೆಚ್ಚಿನ ಅನಿಶ್ಚಿತತೆಯು ಗ್ರಾಹಕರ ಮೇಲೆ ಪರಿಣಾಮ ಬೀರಬಹುದು ಎಂದು ಹೇಳಿದೆ.

- ಮುಂದಿನ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6.8ರಿಂದ ಶೇ 7.2ರ ನಡುವೆ ಇರಬಹುದು ಎಂದು ಫೆಬ್ರುವರಿಯಲ್ಲಿ ಪ್ರಕಟವಾದ ವರದಿಯಲ್ಲಿ ಹೇಳಿತ್ತು.
- ಜವಳಿ, ಪೇಂಟ್, ರಾಸಾಯನಿಕಗಳು, ರಸಗೊಬ್ಬರ, ಸಿಮೆಂಟ್ ಮತ್ತು ಟೈರ್ ಸೇರಿದಂತೆ ಕಾರ್ಮಿಕ ಆಧಾರಿತ ಉದ್ಯಮಗಳ ಮೇಲೆ ಸಂಘರ್ಷವು ನೇರ ಪರಿಣಾಮ ಬೀರಬಹುದು. ತೈಲ ಪೂರೈಕೆಯಲ್ಲಿನ ಅಡಚಣೆಯಿಂದ ಪೂರೈಕೆ ಮತ್ತು ಬೇಡಿಕೆಯ ಮೇಲೂ ಪರಿಣಾಮ ಬೀರಲಿದೆ ಎಂದು ಹೇಳಿದೆ.
- ಭಾರತವು ತನ್ನ ಕಚ್ಚಾ ತೈಲ ಅಗತ್ಯದ ಪೈಕಿ ಶೇ 90ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ. ನೈಸರ್ಗಿಕ ಅನಿಲ, ರಸಗೊಬ್ಬರಕ್ಕೂ ಹೆಚ್ಚಾಗಿ ಆಮದನ್ನೇ ಅವಲಂಬಿಸಿದೆ. ಪಶ್ಚಿಮ ಏಷ್ಯಾದ ಸಂಘರ್ಷದಿಂದ ಜಾಗತಿಕವಾಗಿ ಕಚ್ಚಾ ತೈಲ ಮತ್ತು ಇಂಧನ ಮಾರುಕಟ್ಟೆಯಲ್ಲಿ ಅಡಚಣೆ ಉಂಟಾಗಿದೆ. ಇದು ಪೂರೈಕೆ, ದಾಸ್ತಾನು, ಸಾರಿಗೆ ಮತ್ತು ಬೆಲೆಯ ಮೇಲೆ ಪರಿಣಾಮ ಬೀರಲಿದೆ. ಶೀಘ್ರದಲ್ಲಿ ಸಂಘರ್ಷ ಕೊನೆಗೊಂಡರೂ, ಸಾಮಾನ್ಯ ಸ್ಥಿತಿಗೆ ಮರಳಲು ದೀರ್ಘ ಸಮಯ ತೆಗೆದುಕೊಳ್ಳಬಹುದು ಎಂದು ಹೇಳಿದೆ.
- ಕೇಂದ್ರ ಸರ್ಕಾರವು ಈ ಪರಿಸ್ಥಿತಿ ನಿಭಾಯಿಸಲು ಅಗತ್ಯ ನಿಯಮಗಳನ್ನು ರೂಪಿಸಬೇಕಿದೆ. ಹೆಚ್ಚು ಕೈಗಾರಿಕೆಗಳನ್ನು ಹೊಂದಿರುವ ರಾಜ್ಯಗಳಿಗೆ ಸಹಕಾರ ನೀಡಬೇಕಿದೆ. ಆರ್ಥಿಕ ಸ್ಥಿರೀಕರಣ ನಿಧಿಯಂತಹ ಕ್ರಮಗಳ ಅಗತ್ಯವಿದೆ ಎಂದು ವರದಿಯಲ್ಲಿ ಸಲಹೆ ನೀಡಲಾಗಿದೆ.
- ಫೆಬ್ರುವರಿ 28ರಂದು ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾಗಿದ್ದು, ಅಂದಿನಿಂದ ಇಲ್ಲಿಯವರೆಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಶೇ 50ರವರೆಗೆ ಕಏರಿಕೆಯಾಗಿದೆ. ಪಶ್ಚಿಮ ಏಷ್ಯಾದ ಬಿಕ್ಕಟ್ಟನ್ನು ಎದುರಿಸಲು ಕೇಂದ್ರ ಸರ್ಕಾರವು ಈಗಾಗಲೇ ₹1 ಲಕ್ಷ ಕೋಟಿ ಮೊತ್ತದ ಆರ್ಥಿಕ ಸ್ಥಿರೀಕರಣ ನಿಧಿಯನ್ನು ಸ್ಥಾಪಿಸಿದೆ.




## ❖ 10 ಲಕ್ಷದ ಗರಿಷ್ಠ ಮೌಲ್ಯದ ಮಿತಿ ತೆಗೆದುಹಾಕಿದ ಸಿಬಿಐಸಿ: ಇ-ಕಾಮರ್ಸ್ ರಫ್ತು: ಸುಧಾರಣಾ ಕ್ರಮ ಜಾರಿಗೆ

**ಸಂದರ್ಭ: ಇ-ಕಾಮರ್ಸ್ ರಫ್ತು, ಮತ್ತು ಕೊರಿಯರ್ ಮೂಲಕ ನಡೆಯುವ ಆಮದು-ರಫ್ತು, ಪ್ರಕ್ರಿಯೆಗಳನ್ನು ಬಲಪಡಿಸಲು ಹಾಗೂ ಸರಳ ಗೊಳಿಸಲು ಪರೋಕ್ಷ ತೆರಿಗೆಗಳು ಮತ್ತು ಸುಂಕಗಳ ಕೇಂದ್ರೀಯ ಮಂಡಳಿಯು (ಸಿಬಿಐಸಿ) ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಸಮಗ್ರ ಸುಧಾರಣಾ ಕ್ರಮಗಳನ್ನು ಜಾರಿಗೆ ತಂದಿದೆ.**

- ರಫ್ತು, ಮಾಡುವ ಪ್ರತಿ ರವಾನೆಯ ಮೇಲೆ ಇದ್ದ ₹10 ಲಕ್ಷದ ಗರಿಷ್ಠ ಮೌಲ್ಯದ ಮಿತಿಯನ್ನು ಸಂಪೂರ್ಣವಾಗಿ ತೆಗೆದುಹಾಕುವುದು, ವಿದೇಶಕ್ಕೆ ಕಳುಹಿಸಿದ ನಂತರ ವಾಪಸ್ ಬರುವ ಅಥವಾ ತಿರಸ್ಕರಿಸಲ್ಪಟ್ಟ ಪಾರ್ಸೆಲ್ ಗಳನ್ನು ನಿರ್ವಹಿಸಲು ಸರಳವಾದ ಹೊಸ ಚೌಕಟ್ಟು ರೂಪಿಸುವುದು, ಕ್ಲಿಯರ್ ಆಗದ ಪಾರ್ಸೆಲ್‌ಗಳನ್ನು ಮರಳಿ ಮೂಲ ಸ್ಥಾನಕ್ಕೆ ಕಳುಹಿಸಲು ಕಾನೂನುಬದ್ಧ ಬೆಂಬಲವಿರುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ ಎಂದು ಹಣಕಾಸು ಸಚಿವಾಲಯ ಮಂಗಳವಾರ ತಿಳಿಸಿದೆ.
- ಇದು ಸರಕು ಸಾಗಣೆಯ ಅಡಚಣೆ ಗಳನ್ನು ಕಡಿಮೆ ಮಾಡುತ್ತದೆ. ಭಾರತದ ರಫ್ತು ಸಾಮರ್ಥ್ಯವನ್ನು ಜಾಗತಿಕ ಮಟ್ಟದಲ್ಲಿ ಬಲಪಡಿಸುತ್ತದೆ. ವಿಶೇಷವಾಗಿ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು, ಕುಶಲಕರ್ಮಿಗಳು ಮತ್ತು ನವೋದ್ಯಮ ಗಳಿಗೆ ಇದು ಸಹಕಾರಿಯಾಗಲಿದೆ. ಈ

ಸುಧಾರಣೆಗಳ ಭಾಗವಾಗಿ, ಕೊರಿಯರ್ ಮೂಲಕ ಕಳುಹಿಸುವ ರಫ್ತು, ಸರಕುಗಳ ಮೇಲಿದ್ದ ₹10 ಲಕ್ಷದ ಮಿತಿಯನ್ನು ಈಗ ತೆಗೆದುಹಾಕಲಾಗಿದೆ ಎಂದು ಹೇಳಿದೆ.

- ಈ ಕ್ರಮವು ರಫ್ತು ಪ್ರಮಾಣವನ್ನು ಗಮನಾರ್ಹವಾಗಿ ಹೆಚ್ಚಿಸುವ ನಿರೀಕ್ಷೆಯಿದೆ. ವಿಶೇಷವಾಗಿ ಇ-ಕಾಮರ್ಸ್ ರಫ್ತುದಾರರಿಗೆ ಇದು ಹೆಚ್ಚು ಸಹಕಾರಿಯಾಗಲಿದೆ ಸರಕುಗಳ ಸಾಗಣೆಯ ಮೌಲ್ಯದ ವಿಚಾರದಲ್ಲಿ ಹೆಚ್ಚಿನ ಹೊಂದಾಣಿಕೆಗೆ ಅವಕಾಶ ನೀಡುತ್ತದೆ. ಕೊರಿಯರ್ ಮೂಲಕವೇ ಸುಲಭವಾಗಿ ರಫ್ತು ಮಾಡಲು ಅನುವು ಮಾಡಿಕೊಡುತ್ತದೆ. ಇದರಿಂದ, ಮೌಲ್ಯದ ಮಿತಿಗಳ ಕಾರಣಕ್ಕಾಗಿ ಇಂತಹ ಸಾಗಣೆಗಳನ್ನು ಸಾಂಪ್ರದಾಯಿಕ ವಿಮಾನ ಅಥವಾ ಸಮುದ್ರದ ಮೂಲಕ ಸರಕು ಸಾಗಣೆಗೆ ಬದಲಾಯಿಸುವ ಅಗತ್ಯವಿ ರುವುದಿಲ್ಲ ಎಂದು ತಿಳಿಸಿದೆ.
- ಕಳೆದ ತಿಂಗಳು ಮಂಡಿಸಿದ್ದ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಈ ಸುಧಾರಣಾ ಕ್ರಮಗಳನ್ನು ಘೋಷಿಸಲಾಗಿತ್ತು.

## ❖ ಹಣಕಾಸು ಕಾಯ್ದೆ: ಅಧಿಸೂಚನೆ ಪ್ರಕಟ

**ಸಂದರ್ಭ: ಕೇಂದ್ರ ಸರ್ಕಾರ ಹಣಕಾಸು ಕಾಯ್ದೆ-2026ರ ಅಧಿಸೂಚನೆಯನ್ನು ಹೊರಡಿಸಿದೆ. ಈ ಕಾಯ್ದೆಯು ತೆರಿಗೆ ನಿಬಂಧನೆಗಳಲ್ಲಿ ಬದಲಾವಣೆಗಳನ್ನು ತರಲು ಅವಕಾಶ ಮಾಡಿಕೊಡುತ್ತದೆ.**

- ಈ ಕಾಯ್ದೆಯು ಮಾರ್ಚ್ 30ರಂದು ರಾಷ್ಟ್ರಪತಿ ಒಪ್ಪಿಗೆ ಪಡೆದುಕೊಂಡಿದ್ದು, 2026-27ನೇ ಸಾಲಿಗೆ ಕೇಂದ್ರ ಸರ್ಕಾರದ ಹಣಕಾಸು ಪ್ರಸ್ತಾವಗಳನ್ನು ಜಾರಿಗೆ ತರುತ್ತದೆ ಎಂದು ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯ ಅಧಿಸೂಚನೆಯಲ್ಲಿ ತಿಳಿಸಿದೆ.
- 2026-27ರ ಆರ್ಥಿಕ ವರ್ಷದಲ್ಲಿ ಕೇಂದ್ರದ ಬಜೆಟ್ ಗಾತ್ರ ₹53.47 ಲಕ್ಷ ಕೋಟಿಯಾಗಿದೆ. ಇದು 2025-26ರ ಬಜೆಟ್ ಗೆ ಹೋಲಿಸಿದರೆ ಶೇ 7.7ರಷ್ಟು ಅಧಿಕ ಬಂಡವಾಳ ವೆಚ್ಚ ₹12.2 ಲಕ್ಷ ಕೋಟಿಯಾಗಿದೆ. ತೆರಿಗೆ ಸಂಗ್ರಹದ ಮೂಲಕ ₹44.04 ಲಕ್ಷ ಕೋಟಿ ಮತ್ತು ಸಾಲದ ಮೂಲಕ ₹17.2 ಲಕ್ಷ ಕೋಟಿ ಪಡೆಯ ಲಿದೆ. ಶೇ 4.3ರ ವಿತ್ತೀಯ ಕೊರತೆಯ ಗುರಿ ಹೊಂದಿದೆ.



## ❖ ಡಿಜಿಟಲ್ ವ್ಯಸನಕ್ಕೆ ಕಡಿವಾಣ: ಅಭಿಪ್ರಾಯ ಆಹ್ವಾನ

**ಸಂದರ್ಭ: ವಿದ್ಯಾರ್ಥಿಗಳಲ್ಲಿ ಜವಾಬ್ದಾರಿಯುತ ಡಿಜಿಟಲ್ ಬಳಕೆ ಉತ್ತೇಜಿಸಲು ರೂಪಿಸಲಾದ ಕರಡು ನೀತಿ ಕುರಿತಂತೆ ಆರೋಗ್ಯ ಇಲಾಖೆಯು ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನಿಸಿದೆ. ಕರಡು ನೀತಿಯು ಇಲಾಖೆಯ ವೆಬ್‌ಸೈಟ್‌ನಲ್ಲಿದೆ.**

- 15 ದಿನಗಳ ಒಳಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಬಹುದು. ಶಾಲಾ-ಕಾಲೇಜು ವಿದ್ಯಾರ್ಥಿಗಳಲ್ಲಿ ಜವಾಬ್ದಾರಿಯುತ ಡಿಜಿಟಲ್ ಸಾಧನಗಳ ಬಳಕೆಗೆ ಸಂಬಂಧಿಸಿದಂತೆ ಆಸಕ್ತರು ತಮ್ಮ ಅಭಿಪ್ರಾಯ dd6mhkar@gmail.com 2 ddeho hfws@karnataka.gov.in 2- ಮಾಡಬಹುದಾಗಿದೆ.
- ಈ ಬಗ್ಗೆ ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ಡಿಜಿಟಲ್ ಸಾಧನಗಳು ಹಾಗೂ ಸಾಮಾಜಿಕ ಜಾಲತಾಣಗಳು ಯುವಜನರನ್ನು ಆವರಿಸಿಕೊಂಡಿವೆ. ಅದರಲ್ಲೂ ವಿದ್ಯಾರ್ಥಿಗಳು ಡಿಜಿಟಲ್ ವ್ಯಸನದಿಂದ ಕಲಿಕೆಯಲ್ಲಿ ತೊಡಕು ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.
- ಬಳಕೆಗೆ ಕಡಿವಾಣ ಹಾಕಲು ಮನೋವೈದ್ಯಕೀಯ, ಶಿಕ್ಷಣ ತಜ್ಞರನ್ನು ಒಳಗೊಂಡು ಕಳೆದ ವರ್ಷವೇ ಸಭೆ ನಡೆಸಿ, ಇದರ ದುಷ್ಪರಿಣಾಮದ ಬಗ್ಗೆ ಚರ್ಚಿಸಲಾಗಿತ್ತು ಈಗ ಕರಡು ನೀತಿ ಪ್ರಕಟಿಸಲಾಗಿದ್ದು, ಸಾರ್ವಜನಿಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಬ ಹುದು ಸಲಹೆಗಳ ಅನುಸಾರ ಈ ನೀತಿಯಲ್ಲಿ ಕೆಲ'ಮಾರ್ಪಾಡು ಮಾಡುತ್ತೇವೆ' ಎಂದರು.
- 'ಅತಿಯಾದ ಮತ್ತು ಅನಿಯಂತ್ರಿತ ತಂತ್ರಜ್ಞಾನ ಬಳಕೆಯಿಂದ, ಪ್ರತಿ ನಾಲ್ಕು ಮಕ್ಕಳಲ್ಲಿ ಒಂದು ಮಗು ಆತಂಕ, ಉದ್ವಿಗ್ನತೆ, ನಿದ್ರಾಹೀನತೆ, ಏಕಾಗ್ರತೆ ಕೊರತೆಯಂತಹ ಸಮಸ್ಯೆ ಎದುರಿಸುತ್ತಿದೆ ಡಿಜಿಟಲ್ ತಂತ್ರಜ್ಞಾನ ಮಕ್ಕಳ ಮೇಲೆ ವೇಗವಾಗಿ ಪರಿಣಾಮ ಬೀರಿದ ಕಾರಣ, ಈ ಬಗ್ಗೆ ಅಧ್ಯಯನ ನಡೆಸಲು ಕೂಡ ಸಾಕಷ್ಟು ಸಮಯ ಸಿಗಲಿಲ್ಲ ಎಂದು ಹೇಳಿದರು.
- 'ಡಿಜಿಟಲ್ ಸಾಧನ ಹಾಗೂ ಸಾಮಾಜಿಕ ಜಾಲತಾಣಗಳಿಗೆ ಕಡಿವಾಣ ಹಾಕಲು ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ಶಾಲೆಗಳು ಹಾಗೂ ಸರ್ಕಾರ ಒಟ್ಟಾಗಿ ಕ್ರಮ ಕೈಗೊಳ್ಳಬೇಕಿದೆ ಈ ನಿಟ್ಟಿನಲ್ಲಿ ಕರಡು ನೀತಿ ರೂಪಿಸಲಾಗಿದೆ. ಡಿಜಿಟಲ್ ಸಾಕ್ಷರತೆ, ಶಿಕ್ಷಕರಿಗೆ ತರಬೇತಿ, ಮಾನಸಿಕ ಅನಾರೋಗ್ಯ ಸಮಸ್ಯೆಗಳನ್ನು ಗುರುತಿಸುವಿಕೆ ಸೇರಿ ಹಲವು ಅಂಶಗಳನ್ನು ಈ ನೀತಿ ಒಳಗೊಂಡಿದೆ' ಎಂದರು.

**ಕರಡು ನೀತಿ ರಚನೆಯ ಉದ್ದೇಶ**

- ಡಿಜಿಟಲ್ ಸಾಕ್ಷರತೆ ಮತ್ತು ಜವಾಬ್ದಾರಿಯುತ ಬಳಕೆ
- ತಂತ್ರಜ್ಞಾನ ವ್ಯಸನ ಮತ್ತು ಸಂಬಂಧಿತ ಮಾನಸಿಕ ಸಮಸ್ಯೆಗಳ ಕಡಿತ
- ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿ ಗುರುತಿಸುವಿಕೆ ಮತ್ತು ಸಮಯೋಚಿತ ಮಧ್ಯಸ್ಥಿಕೆ
- ಶಾಲೆ–ಪೋಷಕರ ಸಹಕಾರ ಬಲಪಡಿಸುವಿಕೆ
- ಸುರಕ್ಷಿತ ಮತ್ತು ಆರೋಗ್ಯಕರ ತಂತ್ರಜ್ಞಾನ ಪರಿಸರ

## ❖ 'ನ್ಯಾಟೊದಿಂದ ಹೊರಬರುವ ಚಿಂತನೆ'

**ಸಂದರ್ಭ: ನ್ಯಾಟೊದಿಂದ ಅಮೆರಿಕವನ್ನು ಹೊರತರುವ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಲಾಗುತ್ತಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.**

- ಇರಾನ್ ವಿರುದ್ಧದ ಸೇನಾ ಕಾರ್ಯಾಚರಣೆಗೆ ನ್ಯಾಟೊ ಮಿತ್ರರಾಷ್ಟ್ರಗಳು ಅಮೆರಿಕಕ್ಕೆ ಬೆಂಬಲ ನೀಡದ ಕಾರಣ ಈ ಬಗ್ಗೆ ಚಿಂತನೆ ಮಾಡಲಾಗುತ್ತಿದೆ ಎಂದು ಟೆಲಿಗ್ರಾಫ್' ದಿನಪತ್ರಿಕೆಗೆ ನೀಡಿರುವ ಸಂದರ್ಶನದಲ್ಲಿ ಅವರು ತಿಳಿಸಿದ್ದಾರೆ. 'ನ್ಯಾಟೋವನ್ನು 'ಕಾಗದದ ಹುಲಿ' ಎಂದು ಟೀಕಿಸಿರುವ ಅವರು, 'ನ್ಯಾಟೋದಿಂದ

ಹೊರಬರುವ ಬಗ್ಗೆ, ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತಿದೆ' ಎಂಬುದಾಗಿ ಹೇಳಿದ್ದಾರೆ' ಎಂದು ದಿನಪತ್ರಿಕೆ ವರದಿ ಮಾಡಿದೆ.

- 'ನ್ಯಾಟೊ ವಿಶ್ವಾಸಾರ್ಹತೆ ಬಗ್ಗೆ, ಬಹಳ ದೀರ್ಘ ಕಾಲದಿಂದಲೂ ಅನುಮಾನವಿತ್ತು ಎಂದೂ ಅವರು ಹೇಳಿದ್ದಾರೆ' ಎಂದಿದೆ.
- ಪರಿಣಾಮಕಾರಿ ಸೇನಾ ಮೈತ್ರಿಕೂಟ- ಸ್ಟಾರ್ಮರ್: 'ಜಗತ್ತು ಕಂಡ ಅತ್ಯಂತ ಪರಿಣಾಮಕಾರಿ ಸೇನಾ ಮೈತ್ರಿಕೂಟ 'ನ್ಯಾಟೊ' ಎಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಹೇಳಿದ್ದಾರೆ.
- ಡೊನಾಲ್ಡ್ ಟ್ರಂಪ್ ಅವರ 'ಕಾಗದದ ಹುಲಿ' ಎಂಬ ಟೀಕೆಯ ಬೆನ್ನಲ್ಲೇ ಅವರು ಈ ಹೇಳಿಕೆ ನೀಡಿದ್ದಾರೆ.
- 'ಹಲವು ದಶಕಗಳಿಂದ ಅದು ನಮಗೆ ಭದ್ರತೆ ನೀಡಿದೆ. ನ್ಯಾಟೋಗೆ ನಾವು ಸಂಪೂರ್ಣವಾಗಿ ಬದ್ಧರಾಗಿದ್ದೇವೆ' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

## ❖ ಹೊರ್ಮುಜ್: ಬ್ರಿಟನ್‌ನಿಂದ ಅಂತರರಾಷ್ಟ್ರೀಯ ಸಮಾವೇಶ

**ಸಂದರ್ಭ: ಹೊರ್ಮುಜ್ ಜಲಸಂಧಿಯನ್ನು ತೆರೆಸುವ ಮಾರ್ಗೋಪಾಯಕ್ಕೆ ಸಂಬಂಧಿಸಿದ ಚರ್ಚೆಗಾಗಿ ಅಂತರರಾಷ್ಟ್ರೀಯ ರಾಜತಾಂತ್ರಿಕ ಸಮಾವೇಶವನ್ನು ಬ್ರಿಟನ್ ಈ ವಾರ ಆಯೋಜಿಸಲಿದೆ ಎಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಬುಧವಾರ ತಿಳಿಸಿದ್ದಾರೆ.**

- ತೈಲ ಸಾಗಣೆಯ ಪ್ರಮುಖ ಮಾರ್ಗವಾಗಿರುವ ಜಲಸಂಧಿಯ ಭದ್ರತೆಯನ್ನು ಪುನರ್ ಸ್ಥಾಪಿಸಲು ಮತ್ತು ಹೊರ್ಮುಜ್‌ನಲ್ಲಿ ಸಿಲುಕಿರುವ ಹಡಗುಗಳು ಹಾಗೂ ನಾವಿಕರ ಸುರಕ್ಷತೆಯನ್ನು ಖಾತರಿಪಡಿಸುವುದಕ್ಕಾಗಿ 35 ದೇಶಗಳು ಸಭೆಯಲ್ಲಿ ಭಾಗಿಯಾಗಲಿವೆ ಎಂದೂ ಹೇಳಿದ್ದಾರೆ.
- ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಯವಿಟ್ಟೆ ಕೂಪರ್ ಚರ್ಚೆಯನ್ನು ನಡೆಸಿಕೊಡಲಿದ್ದಾರೆ ಎಂದು ತಿಳಿಸಿದ್ದಾರೆ. ಆದರೆ, ಯಾವ ದಿನ ಸಭೆ ನಡೆಲಿದೆ ಎಂಬ ಬಗ್ಗೆ, ಅವರು ಸ್ಪಷ್ಟ ಮಾಹಿತಿಯನ್ನು ನೀಡಿಲ್ಲ.

## ❖ ವಿದೇಶಿ ದೇಣಿಗೆ ನಿಯಂತ್ರಣ ತಿದ್ದುಪಡಿ ಮಸೂದೆಗೆ 'ತಡೆ'

**ಸಂದರ್ಭ: ವಿಪಕ್ಷಗಳು ಹಾಗೂ ಕ್ರೈಸ್ತ ನಾಯಕರ ವಿರೋಧ ಮತ್ತು ಬಿಜೆಪಿ ಕೇರಳ ಘಟಕದ ಒತ್ತಡದಿಂದ, ವಿಧಾನಸಭಾ ಚುನಾವಣೆಯಲ್ಲಿ ಹೊಡೆತ ಬೀಳಬಹುದು ಎಂಬ ಆತಂಕದಿಂದ ಕೇಂದ್ರ ಸರ್ಕಾರವು ವಿವಾದಾತ್ಮಕ 'ವಿದೇಶಿ ದೇಣಿಗೆ (ನಿಯಂತ್ರಣ) ತಿದ್ದುಪಡಿ ಮಸೂದೆ'ಗೆ ಲೋಕಸಭೆಯಲ್ಲಿ ಅಂಗೀಕಾರ ಪಡೆಯುವುದನ್ನು ಮುಂದೂಡಿದೆ.**

- 'ಎಫ್‌ಸಿಆರ್‌ಎ ಮಸೂದೆ-2026' ಅನ್ನು ಲೋಕಸಭೆಯಲ್ಲಿ ಚರ್ಚೆ ಮತ್ತು ಅಂಗೀಕಾರಕ್ಕಾಗಿ ಬುಧವಾರಕ್ಕೆ ಪಟ್ಟಿ ಮಾಡಲಾಗಿತ್ತು. ಪ್ರಶೋತ್ತರ ಅವಧಿಯಲ್ಲಿ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, 'ಮಸೂದೆಯನ್ನು ಇಂದು ಚರ್ಚೆಗೆ ತೆಗೆದುಕೊಳ್ಳುತ್ತಿಲ್ಲ' ಎಂದು ಸದನಕ್ಕೆ ತಿಳಿಸಿದರು. 'ಈ ವಿಷಯದಲ್ಲಿ ಕಾಂಗ್ರೆಸ್ ಮತ್ತು ಸಿಪಿಎಂ ಜನರ ದಾರಿ ತಪ್ಪಿಸುತ್ತಿವೆ' ಎಂದು ಅವರು ಆರೋಪಿಸಿದರು.
- ಈ ಮಸೂದೆ ವಿರುದ್ಧ ಕಾಂಗ್ರೆಸ್, ಸಿಪಿಎಂ ಹಾಗೂ ಚರ್ಚ್‌ಗಳು ಆಕ್ಷೇಪ ವ್ಯಕ್ತಪಡಿಸಿವೆ. ಮಸೂದೆ ವಿರುದ್ಧ ಪ್ರತಿಭಟನೆಗಳು ನಡೆದಿವೆ. ಇದೊಂದು ನಿರಂಕುಶ ಮಸೂದೆಯಾಗಿದ್ದು ದುರುಪಯೋಗಕ್ಕೆ ಕಾರಣವಾಗಲಿದೆ ಎಂದು ವಿಪಕ್ಷಗಳು ಜರೆದಿವೆ.

- ಕೇರಳದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಕ್ರೈಸ್ತ ಮತದಾರರನ್ನು ಸೆಳೆಯಲು ಬಿಜೆಪಿ ವರ್ಷಗಳಿಂದ ಕಸರತ್ತು ನಡೆಸುತ್ತಿದೆ. 'ಒಂದು ವೇಳೆ, ಮಸೂದೆಯನ್ನು ಈಗ ಅಂಗೀಕರಿಸಿದರೆ ರಾಜ್ಯದಲ್ಲಿ ಪಕ್ಷದ ಭವಿಷ್ಯದ ಮೇಲೆ ಹೊಡೆತ ಬೀಳುತ್ತದೆ. ಅದನ್ನು ಸದ್ಯ ಅಂಗೀಕರಿಸಬಾರದು' ಎಂದು ರಾಜ್ಯದ ಬಿಜೆಪಿ ನಾಯಕರು ಕೇಂದ್ರ ನಾಯಕರನ್ನು ಸಂಪರ್ಕಿಸಿದ್ದರು, ಮಸೂದೆಯ ವಿಷಯದಲ್ಲಿ ನಿಧಾನಗತಿಯಲ್ಲಿ ಸಾಗುವಂತೆ ರಾಜ್ಯ ಘಟಕದ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ಅವರು ರಾಷ್ಟ್ರೀಯ ನಾಯಕತ್ವವನ್ನು ಒತ್ತಾಯಿಸಿದರು ಎಂದು ಮೂಲಗಳು ತಿಳಿಸಿವೆ.
- ಲೋಕಸಭೆ ಕಲಾಪ ಆರಂಭವಾಗುತ್ತಿದ್ದಂತೆ, ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳ ಸಂಸದರು ಮಸೂದೆಯ ವಿರುದ್ಧ ಘೋಷಣೆಗಳನ್ನು ಕೂಗಿ ಹಿಂಪಡೆಯುವಂತೆ ಒತ್ತಾಯಿಸಿದರು. ಕಲಾಪ ಪ್ರಾರಂಭವಾಗುವ ಮೊದಲು, ಸಂಸದರು ಸಂಸತ್ ಭವನದ ಮಕರ ದ್ವಾರದಲ್ಲಿ ಪ್ರತಿಭಟನೆ ನಡೆಸಿದರು.

## ಏನಿದು ಮಸೂದೆ?

ಈ ಮಸೂದೆಯು ಸರ್ಕಾರೇತರ ಸಂಸ್ಥೆಗಳ (ಎನ್‌ಜಿಒ) ಚಟುವಟಿಕೆಗಳ ಮೇಲೆ ನಿಯಂತ್ರಣ ಸಾಧಿಸಲು ಹಾಗೂ ಅವುಗಳ ಮೇಲಿನ ಹಿಡಿತವನ್ನು ಮತ್ತಷ್ಟು ಬಲಗೊಳಿಸಲು ಕೇಂದ್ರ ಸರ್ಕಾರಕ್ಕೆ ಅವಕಾಶ ಕಲ್ಪಿಸಲಿದೆ. ಕಾನೂನು ಪ್ರಕಾರ ನೋಂದಣಿ ರದ್ದುಗೊಂಡಿರುವ ಇಲ್ಲವೇ ನಿರ್ಬಂಧ ಕ್ಕೊಳಗಾಗಿರುವ ಎನ್‌ಜಿಒಗಳ ವಿದೇಶಿ ನಿಧಿಗಳು ಮತ್ತು ಸ್ವತ್ತುಗಳ ನಿರ್ವಹಣೆಗಾಗಿ 'ನಿರ್ದಿಷ್ಟ ಪ್ರಾಧಿಕಾರ'ವೊಂದನ್ನು ಸ್ಥಾಪಿಸಲು ಮಸೂದೆ ಉದ್ದೇಶಿಸಿದೆ. 2010ರ ಮೂಲಶಾಸನದಲ್ಲಿನ ಲೋಪಗಳನ್ನು ಸರಿಪಡಿಸುವುದು ಮಸೂದೆಯ ಉದ್ದೇಶವಾಗಿದೆ ಎಂದು ಸರ್ಕಾರ ಹೇಳಿದೆ. ವಿದೇಶಗಳಿಂದ ಪಡೆಯುವ ದೇಣಿಗೆಗಳ ಮೇಲ್ವಿಚಾರಣೆ ಹಾಗೂ ನಿರ್ವಹಣೆಗೆ 'ಉದ್ದೇಶಿತ ಪ್ರಾಧಿಕಾರ'ದ ಮೂಲಕ ಸಮಗ್ರ ಚೌಕಟ್ಟು ರೂಪಿಸುವ ಅವಕಾಶವನ್ನು ಈ ಮಸೂದೆ ಒಳಗೊಂಡಿದೆ.




ಈ ಮಸೂದೆ ಕುರಿತು ವಿರೋಧ ಪಕ್ಷಗಳು ನೀಡುತ್ತಿರುವ ಹೇಳಿಕೆಗಳು ಸಂಪೂರ್ಣ ಸುಳ್ಳು ಹಾಗೂ ದಾರಿ ತಪ್ಪಿಸುವಂಥವು. ವಿದೇಶಗಳಿಂದ ಪಡೆಯುವ ದೇಣಿಗೆಯನ್ನು ರಾಷ್ಟ್ರದ ಭದ್ರತೆ ಹಾಗೂ ಹಿತಾಸಕ್ತಿಗಳಿಗೆ ವಿರುದ್ಧದ ಕಾರ್ಯಕ್ಕೆ ಬಳಸುವುದನ್ನು ತಡೆಗಟ್ಟುವ ಸಲುವಾಗಿ ಮಸೂದೆ ತರಲಾಗಿದೆ. ಯುಪಿಎ ಸರ್ಕಾರವು 2010ರಲ್ಲಿ ಈ ಮಸೂದೆಗೆ ಪ್ರಮುಖ ತಿದ್ದುಪಡಿಗಳನ್ನು ತಂದಿತ್ತು ಹಾಗೂ ಆ ಬಳಿಕ ಅನೇಕ ತಿದ್ದುಪಡಿಗಳನ್ನು ಮಾಡಲಾಗಿತ್ತು. ಕೇರಳದ ಸಂಸದರು ದುರುದ್ದೇಶದಿಂದ ಪ್ರತಿಭಟಿಸುತ್ತಿದ್ದಾರೆ

**ಕಿರಣ್ ರಿಜಿಜು,** ಸಂಸದೀಯ ವ್ಯವಹಾರಗಳ ಸಚಿವ

- ಪ್ರತಿಭಟನೆ ನಡುವೆಯೇ ಸಚಿವ ರಿಜಿಜು, 'ನಾವು ಮಸೂದೆಯನ್ನು ಬುಧವಾರ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ ಹಾಗೂ ಅಂಗೀಕರಿಸುವುದಿಲ್ಲ. ಎಂದು ಕಾಂಗ್ರೆಸ್‌ನ ನಾಯಕರಿಗೆ ಈಗಾಗಲೇ ತಿಳಿಸಿದ್ದೇನೆ' ಎಂದು ಸ್ಪಷ್ಟಪಡಿಸಿದರು.
- 'ಈ ಮಸೂದೆಯು ಯಾವುದೇ ಧರ್ಮಕ್ಕೆ ವಿರುದ್ಧವಾಗಿಲ್ಲ. ಅಥವಾ ಯಾವುದೇ ಸಂಘಟನೆಯನ್ನು ಗುರಿಯಾಗಿಸುವ ಉದ್ದೇಶ ಹೊಂದಿಲ್ಲ ಕೇರಳ ವಿಧಾನಸಭಾ ಚುನಾವಣೆಯ ಕಾರಣದಿಂದಾಗಿ ವಿಪಕ್ಷಗಳು ಮಸೂದೆಯ ವಿರುದ್ಧ ಗುಲ್ಲೆಬ್ಬಿಸುತ್ತಿವೆ' ಎಂದು ಅವರು ಆರೋಪಿಸಿದರು.
- ಆದಾಗ್ಯೂ, ಅವರ ಈ ಘೋಷಣೆಯು ಪ್ರತಿಭಟನಾನಿರತ ಸಂಸದರನ್ನು ಸಮಾಧಾನಪಡಿಸಲಿಲ್ಲ ಲೋಕಸಭಾ ಅಧ್ಯಕ್ಷ ಓಂ ಬಿರ್ಲಾ ಅವರು ಕಲಾಪವನ್ನು ಮಧ್ಯಾಹ್ನ 12ಕ್ಕೆ ಮುಂದೂಡಿದರು.
- ಮಸೂದೆಯು ಧಾರ್ಮಿಕ ಅಲ್ಪಸಂಖ್ಯಾತರನ್ನು ವಿಶೇಷವಾಗಿ ಕೇರಳ ಮತ್ತು ದೇಶದಾದ್ಯಂತ ದತ್ತಿ ಚಟುವಟಿಕೆಗಳನ್ನು ನಡೆಸುತ್ತಿರುವ ಕ್ರೈಸ್ತ ಸಮುದಾಯವನ್ನು ಗುರಿಯಾಗಿಸಿಕೊಂಡಿದೆ.
- ಈ ಮಸೂದೆಯು ಕಠೋರವಾಗಿದ್ದು ಅಲ್ಪಸಂಖ್ಯಾತರಷ್ಟೇ ಅಲ್ಲ, ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನೇಕ ಎನ್‌ಜಿಒಗಳ ಹಿತಾಸಕ್ತಿಗಳಿಗೆ ಧಕ್ಕೆ ತರಲಿದೆ. ಅಲ್ಪಸಂಖ್ಯಾತರ ಹಕ್ಕುಗಳನ್ನು ಮೊಟಕುಗೊಳಿಸಲು ಮೋದಿ ಸರ್ಕಾರ ಮತ್ತೊಂದು ಪ್ರಹಾರ ನಡೆಸಿದೆ. ಹಿಬಿ ಈಡನ್, ಕಾಂಗ್ರೆಸ್ ಸಂಸದ.

## ❖ 2025-26ರ ಏಪ್ರಿಲ್‌ನಿಂದ ಮಾರ್ಚ್ ವರೆಗೆ ₹22.27 ಲಕ್ಷ ಕೋಟಿ ಸಂಗ್ರಹ: ಜಿಎಸ್‌ಟಿ: ₹2 ಲಕ್ಷ ಕೋಟಿ ಸಂಗ್ರಹ

**ಸಂದರ್ಭ: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಮಾರ್ಚ್ ತಿಂಗಳಿನಲ್ಲಿ ₹2 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. ಇದು ಈ ಆರ್ಥಿಕ ವರ್ಷದಲ್ಲಿ ಮೂರನೇ ಅತಿದೊಡ್ಡ ಮಾಸಿಕ ಸಂಗ್ರಹವಾಗಿದೆ.**




- ಕಳೆದ ವರ್ಷದ ಮಾರ್ಚ್‌ನಲ್ಲಿ ₹1.83 ಲಕ್ಷ ಕೋಟಿ ಸಂಗ್ರಹವಾಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ವರಮಾನ ಸಂಗ್ರಹವು ಶೇ 8.8ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಸರ್ಕಾರ ಬುಧವಾರ ತಿಳಿಸಿದೆ.
- ಆಮದು ಮಾಡಿಕೊಂಡ ಸರಕು ಗಳಿಂದ ಬಂದ ವರಮಾನದಲ್ಲಿ ಏರಿಕೆಯಾಗಿರುವುದು, ದೇಶದ ಮಾರುಕಟ್ಟೆಯಲ್ಲಿ ಮಾರಾಟ ಮತ್ತು ಖರೀದಿ ಹೆಚ್ಚಳ ಆಗಿರುವುದು ಜಿಎಸ್‌ಟಿ ಸಂಗ್ರಹ ಜಾಸ್ತಿ ಆಗಿರುವುದಕ್ಕೆ ಕಾರಣ ಎಂದು ತಿಳಿಸಿದೆ.
- ದೇಶದ ಆಂತರಿಕ ವಹಿವಾಟುಗಳಿಂದ ಬರುವ ಜಿಎಸ್‌ಟಿ ವರಮಾನ ದಲ್ಲಿ ಶೇ5.9ರಷ್ಟು ಹೆಚ್ಚಳವಾಗಿ, ₹1.46 ಲಕ್ಷ ಕೋಟಿ ಆಗಿದೆ. ಆಮದು ಸರಕುಗಳಿಂದ ಬಂದ ವರಮಾನದಲ್ಲಿ ಶೇ 17.8ರಷ್ಟು ಏರಿಕೆಯಾಗಿದ್ದು, ₹53,861 ಕೋಟಿ ಆಗಿದೆ. ಒಟ್ಟು ಮರುಪಾವತಿಯು ₹22,074 ಕೋಟಿಯಾಗಿದ್ದು, ಶೇ 13.8ರಷ್ಟು ಹೆಚ್ಚಳವಾಗಿದೆ.
- ಮರುಪಾವತಿ ಬಳಿಕ ನಿವ್ವಳ ಜಿಎಸ್‌ಟಿ ವರಮಾನ ₹1.78 ಲಕ್ಷ ಕೋಟಿಯಾಗಿದ್ದು ಹಿಂದಿನ ವರ್ಷದ ಮಾರ್ಚ್‌ಗೆ ಹೋಲಿಸಿದರೆ ಶೇ 8.2ರಷ್ಟು ಏರಿಕೆಯಾಗಿದೆ.
- 2025-26ರ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಮಾರ್ಚ್‌ವರೆಗೆ ಒಟ್ಟು ಜಿಎಸ್‌ಟಿ ಸಂಗ್ರಹ ₹22.27 ಲಕ್ಷ ಕೋಟಿಯಾಗಿದ್ದು, ಶೇ8.3ರಷ್ಟು ಏರಿಕೆ ಆಗಿದೆ. ಮರುಪಾವತಿ ಹಂಚಿಕೆ ಬಳಿಕ ವರಮಾನವು ₹19.34 ಲಕ್ಷ ಕೋಟಿಯಾಗಿದ್ದು ಶೇ7.1ರಷ್ಟು ಬೆಳವಣಿಗೆ ದಾಖಲಿಸಿದೆ.
- ಏಪ್ರಿಲ್‌ನಲ್ಲಿ ಅತ್ಯಧಿಕ ₹2.36 ಲಕ್ಷ ಕೋಟಿ ಮತ್ತು ಮೇ ತಿಂಗಳಿನಲ್ಲಿ ₹2.01 ಲಕ್ಷ ಕೋಟಿ ಸಂಗ್ರಹವಾಗಿತ್ತು. ಇದು ಈ ಆರ್ಥಿಕ ವರ್ಷದಲ್ಲಿ ಅತಿ ಹೆಚ್ಚು ವರಮಾನ ಸಂಗ್ರಹವಾದ ತಿಂಗಳಾಗಿವೆ. ಇದೀಗ ಮಾರ್ಚ್‌ನಲ್ಲಿ ₹2 ಲಕ್ಷ ಕೋಟಿ ಸಂಗ್ರಹವಾಗಿದೆ.
- ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಜಿಎಸ್‌ಟಿ ದರ ಪರಿಷ್ಕರಣೆ ಆಯಿತು. ಇದರಿಂದ ನವೆಂಬರ್ ತಿಂಗಳಿನಲ್ಲಿ ಜಿಎಸ್‌ಟಿ ಸಂಗ್ರಹ ಇಳಿಕೆಯಾಗಿ, ₹1.70 ಲಕ್ಷ ಕೋಟಿ ಸಂಗ್ರಹವಾಗಿತ್ತು ಡಿಸೆಂಬರ್‌ಗೆ ಸಂಗ್ರಹವು ಏರಿಕೆಯಾಗಿ, ₹1.74 ಲಕ್ಷ ಕೋಟಿಯಷ್ಟಾಯಿತು.
- ಮಹಾರಾಷ್ಟ್ರ, ಕರ್ನಾಟಕ ಮತ್ತು ತೆಲಂಗಾಣದಂತಹ ದೊಡ್ಡ ರಾಜ್ಯಗಳು ಸಂಗ್ರಹದಲ್ಲಿ ಸದೃಢ ಏರಿಕೆ ಕಂಡಿವೆ. ಹರಿಯಾಣ, ಆಂಧ್ರಪ್ರದೇಶ ಮತ್ತು ಮಧ್ಯಪ್ರದೇಶದಲ್ಲಿ ಸಂಗ್ರಹವು ನಿಧಾನವಾಗಿ ಪ್ರಗತಿ ಕಂಡಿದೆ ಎಂದು ತಿಳಿಸಿದೆ.

## ❖ ದಿನಗೂಲಿ ನೌಕರರಿಗೆ ಆರೋಗ್ಯ ವಿಮೆ

**ಸಂದರ್ಭ: ರಾಜ್ಯ ಸರ್ಕಾರದ ವ್ಯಾಪ್ತಿಯ ದಿನಗೂಲಿ ನೌಕರರು ಹಾಗೂ ಅವರ ಅವಲಂಬಿತರಿಗೆ 15 ಲಕ್ಷದವರೆಗೆ ಆರೋಗ್ಯ ವಿಮೆ ಸೌಲಭ್ಯವನ್ನು ವಿಸ್ತರಿಸಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.**

- ಗುತ್ತಿಗೆ, ಹೊರಗುತ್ತಿಗೆ ಹಾಗೂ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ನೌಕರರು ಮತ್ತು ಅವರ ಅವಲಂಬಿತ ಸದಸ್ಯರಿಗೆ ಕಳೆದ ವರ್ಷ ರಾಜ್ಯ ಸರ್ಕಾರವು ₹5 ಲಕ್ಷದವರೆಗೆ ಆರೋಗ್ಯ ವಿಮೆ ಸೌಲಭ್ಯ ಜಾರಿಗೊಳಿಸಿತ್ತು. 3 ಲಕ್ಷ ಸಿಬ್ಬಂದಿ ಈ ವಿಮೆ ವ್ಯಾಪ್ತಿಗೆ ಒಳಪಟ್ಟಿದ್ದರು.
- ನಗದುರಹಿತ ಚಿಕಿತ್ಸೆ ಒದಗಿಸುವ ಈ ಯೋಜನೆಯನ್ನು ಅರ್ಹ ದಿನಗೂಲಿ ನೌಕರರಿಗೂ ವಿಸ್ತರಿಸುವಂತೆ ಕರ್ನಾಟಕ ರಾಜ್ಯ ಸರ್ಕಾರಿ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಸಂಘ ಸರ್ಕಾರಕ್ಕೆ ಮನವಿ ಮಾಡಿತ್ತು ಅದರಂತೆ ಈಗ ಯೋಜನೆ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ.

## ❖ ರಾಷ್ಟ್ರಪತಿ ಅಂಕಿತ

**ಸಂದರ್ಭ: ಲಿಂಗತ್ವ ಅಲ್ಪ ಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಕಿತ ಹಾಕಿದ್ದಾರೆ.**

- ಕೇಂದ್ರ ಸರ್ಕಾರವು ಲಿಂಗತ್ವ ಅಲ್ಪ ಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆ- 2026 ಅನ್ನು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮಂಡಿಸಿ, ಅಂಗೀಕಾರ ಪಡೆದಿತ್ತು.

## ❖ ಗೆಲುವಿನೊಡನೆ ಅಗ್ರಸ್ಥಾನಕ್ಕೆ ಸಿಂದ8ರೋವ್

**ಸಂದರ್ಭ: ಪಾಪೋಸ್ ಪ್ರಶಸ್ತಿಗೆ ನೆಚ್ಚಿನ ಆಟಗಾರನಾದ ಅಮೆರಿಕದ ಫ್ಯಾಬಿಯಾನೊ ಕರುವಾನ ಅವರನ್ನು 35 ನಡೆಗಳಲ್ಲಿ ಸೋಲಿಸಿದ ವಿಶ್ವಕಪ್ ಚಾಂಪಿಯನ್ ಜಾವೊಖಿರ್ ಸಿಂದರೊವ್ ಅವರು ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನ ನಂತರ ಅಗ್ರಸ್ಥಾನಕ್ಕೇರಿದರು. 20 ವರ್ಷ ವಯಸ್ಸಿನ ಸಿಂದರೋವ್ 4 ಸುತ್ತುಗಳಿಂದ 3.5 ಪಾಯಿಂಟ್ಸ್ ಕಲೆಹಾಕಿದ್ದಾರೆ.**

- ಟೂರ್ನಿಗೆ ಮೊದಲ ವಿರಾಮದ ದಿನವಾಗಿದೆ. ಓಪನ್ ವಿಭಾಗದಲ್ಲಿ ಮೂರನೇ ಸುತ್ತಿನವರೆಗೆ ಅಗ್ರಸ್ಥಾನ ಹಂಚಿಕೊಂಡಿದ್ದ ಕರುವಾನ (2.5) ಈಗ ಎರಡನೇ ಸ್ಥಾನದಲ್ಲಿದ್ದಾರೆ ಎಂಟು ಮಂದಿ ಪಾಲ್ಗೊಂಡಿರುವ ಈ ಟೂರ್ನಿಯ ವಿಜೇತ ಆಟಗಾರ, ವರ್ಷದ ಕೊನೆಯಲ್ಲಿ ವಿಶ್ವ ಕಿರೀಟಕ್ಕೆ ನಡೆಯುವ ಸೆಣಸಾಟದಲ್ಲಿ ಹಾಲಿ ವಿಶ್ವ ಚಾಂಪಿಯನ್ ಗುಕೇಶ್ ಅವರನ್ನು ಎದುರಿಸಲಿದ್ದಾರೆ.
- ಆರಂಭದ ಸುತ್ತುಗಳ ಹಿನ್ನಡೆ ಬಳಿಕ ಚೇತರಿಸಿಕೊಂಡ ನೆದರ್ಲೆಂಡ್ಸ್‌ನ ಅನಿಶ್ ಗಿರಿ ಇನ್ನೊಂದು ಪಂದ್ಯದಲ್ಲಿ ರಷ್ಯದ ಆ್ಯಂಡ್ರಿ ಇಸಿಪೆಂಕೊ (1) ಅವರನ್ನು ಸೋಲಿಸಿದರು. ಇದು ಅನಿಶ್‌ಗೆ ಮೊದಲ ಜಯ ಅನಿಶ್, ಪ್ರಜ್ಞಾನಂದ ಮತ್ತು ಜರ್ಮನಿಯ ಮಥಾಯಸ್ ಬ್ಲೂಬಾಮ್ ತಲಾ 2 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.
- ಮಥಾಯಸ್ ಮತ್ತು ಪ್ರಜ್ಞಾನಂದ ತಮ್ಮ ನಡುವಣ ಪಂದ್ಯವನ್ನು 37 ನಡೆಗಳಲ್ಲಿ ಡ್ರಾ ಮಾಡಿಕೊಂಡರು ಚೀನಾದ ವೀ ಯಿ (15) ಮತ್ತು ಹಿಕಾರು ನಕಾಮುರಾ (15) ಅವರೂ ಪಾಯಿಂಟ್ ಹಂಚಿಕೊಂಡರು.
- ದಿವ್ಯಾಗೆ ಸೋಲು ಮಹಿಳೆಯರ ವಿಭಾಗದಲ್ಲಿ ವಿಶ್ವಕಪ್ ಚಾಂಪಿಯನ್, ಭಾರತದ ದಿವ್ಯಾ ದೇಶಮುಖ್ (1.5) ನಾಲ್ಕನೇ ಸುತ್ತಿನಲ್ಲಿ ಚೀನಾದ ಝು ಜಿನರ್ (2) ಅವರಿಗೆ ಮಣಿದರು ವೈಶಾಲಿ ರಮೇಶಬಾಬು ಮತ್ತು ರಷ್ಯಾದ ಅಲೆಕ್ಸಾಂಡಾ ಗೊರ್ಯಾನಾ (2) ನಡುವಣ ಪಂದ್ಯ ಡ್ರಾ ಆಯಿತು.
- ಉಕ್ರೇನ್‌ನ ಅನ್ನಾ ಮುಝಿಚುಕ್ ಮತ್ತು ಕಜಾಕಸ್ತಾನದ ಬಿಬಿಸಾರ ಅಸುನ್ನಯೇವಾ ತಲಾ 25 ಪಾಯಿಂಟ್ಸ್ ಸಂಗ್ರಹಿಸಿ ಮುನ್ನಡೆ ಹಂಚಿಕೊಂಡಿದ್ದಾರೆ.

## ❖ ಮಹಿಳಾ ಮೀಸಲಾತಿ ಮಸೂದೆ 16ರಿಂದ ಅಧಿವೇಶನ

**ಸಂದರ್ಭ: ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ 33ರಷ್ಟು ಮೀಸಲಾತಿಯನ್ನು ಶೀಘ್ರವಾಗಿ ಜಾರಿಗೆ ತರುವ ಮಸೂದೆಯನ್ನು ಅಂಗೀಕರಿಸಲು ಏಪ್ರಿಲ್ 16ರಿಂದ ಸಂಸತ್ ಅಧಿವೇಶನ ನಡೆಯಲಿದೆ.**

- ರಾಜ್ಯಸಭೆಯಲ್ಲಿ ಕಾಂಗ್ರೆಸ್ ಮುಖ್ಯ ಸಚೇತಕ ಜೈರಾಮ್ ರಮೇಶ್ ವಿಷಯ ಪ್ರಸ್ತಾಪಿಸಿ, 'ಬಜೆಟ್ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗುತ್ತದೆಯೇ ಅಥವಾಸ್ವಲ್ಪ ಸಮಯದ ನಂತರ ಮತ್ತೆ ಸಭೆ ಸೇರುವ ಬಗ್ಗೆ ಅಧಿಸೂಚನೆ ಹೊರಡಿಸಲಾಗುತ್ತದೆಯೇ ಎಂಬ ಬಗ್ಗೆ ಸ್ಪಷ್ಟನೆ ನೀಡಬೇಕು' ಎಂದು ಒತ್ತಾಯಿಸಿದರು. ಆಗ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಏಪ್ರಿಲ್ ಮೂರನೇ ವಾರದಲ್ಲಿ ಅಧಿವೇಶನ ನಡೆಸುವ ಸರ್ಕಾರದ ನಿರ್ಧಾರವನ್ನು ತಿಳಿಸಿದರು.
- ಲೋಕಸಭಾ ಕಲಾಪವನ್ನು ಮುಂದೂಡುವ ಮುನ್ನ ಲೋಕಸಭಾಧ್ಯಕ್ಷಓಂ ಬಿರ್ಲಾ, 'ಸಂಸದೀಯ ವ್ಯವಹಾರಗಳ ಸಚಿವರು ಒಂದು ಮನವಿ ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇದೇ 16ರಂದು ಬೆಳಿಗ್ಗೆ 11ರಿಂದ ಅಧಿವೇಶನ ನಡೆಯಲಿದೆ' ಎಂದು ಪ್ರಕಟಿಸಿದರು.
- ಚುನಾವಣೆಗೆ ಮುನ್ನ ರಾಜಕೀಯ ಲಾಭ ಪಡೆಯುವ ಉದ್ದೇಶದಿಂದ ಸರ್ಕಾರವು ತರಾತುರಿಯಿಂದ ಈ ಮಸೂದೆ ಮಂಡಿಸುತ್ತಿದೆ ಎಂದು ಕಾಂಗ್ರೆಸ್ ಸೇರಿದಂತೆ ವಿಪಕ್ಷಗಳು ಆಕ್ಷೇಪಿಸಿವೆ. ಈ ಆರೋಪವನ್ನು ರಿಜಿಜು ತಿರಸ್ಕರಿಸಿದರು.
- ಅಧಿವೇಶನದಲ್ಲಿ ಬಹಳ ಮುಖ್ಯವಾದ ಮಸೂದೆ ಮಂಡಿಸಲಾಗುವುದು ಮತ್ತು ಮಹಿಳಾ ಮೀಸಲಾತಿಯನ್ನು ಶೀಘ್ರವಾಗಿ ಜಾರಿಗೆ ತರಲು ಸಂವಿಧಾನ ತಿದ್ದುಪಡಿ ಮಾಡುವ ಮಸೂದೆಯನ್ನು ಅಂಗೀಕರಿಸಲು ಶೀಘ್ರದಲ್ಲೇ ಸಭೆ ಸೇರಲಾಗುವುದು' ಎಂದು ಅವರು ಹೇಳಿದರು.
- ಎಷ್ಟು ದಿನ ಅಧಿವೇಶನ ನಡೆಯಲಿದೆ ಎಂಬುದನ್ನು ಓಂ ಬಿರ್ಲಾ ತಿಳಿಸಲಿಲ್ಲ. ಆದರೆ, ಅಧಿವೇಶನ ಮೂರು ದಿನಗಳ ಕಾಲ ನಡೆಯುವ ಸಾಧ್ಯತೆ ಇದೆ.
- ಪಂಚ ರಾಜ್ಯಗಳ ಚುನಾವಣೆಯ ಮತದಾನ ಪ್ರಕ್ರಿಯೆ ಮುಗಿದ ಬಳಿಕ ಈ ವಿಷಯದ ಚರ್ಚೆಗೆ ಸರ್ವ ಪಕ್ಷ ಸಭೆ ಕರೆಯಬೇಕು ಎಂದು ವಿಪಕ್ಷಗಳು ಒತ್ತಾಯಿಸಿವೆ. ಮಸೂದೆ ಮಂಡನೆ ವಿಷಯದಲ್ಲಿ ಒಮ್ಮತಕ್ಕೆ ಬರಲು ವಿಪಕ್ಷಗಳ ಜತೆಗೆ ಸರ್ಕಾರ ಸಮಾಲೋಚನೆ ನಡೆಸುತ್ತಿದೆ.
- ಸರ್ಕಾರವು ಮಾದರಿ ನೀತಿ ಸಂಹಿತೆ ಉಲ್ಲಂಘಿಸಿ ರಾಜಕೀಯ ಲಾಭ ಪಡೆಯುವ ಏಕ ಮನಸ್ಸಿನ ಉದ್ದೇಶ ಹೊಂದಿದೆ ಎಂದು ಜೈರಾಮ್ ರಮೇಶ್ ಟೀಕಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ರಿಜಿಜು, 'ದೇಶದ ಮಹಿಳೆಯರಿಗೆ ನೀಡಿದ ಭರವಸೆಯನ್ನು ಈಡೇರಿಸಲು ಸರ್ಕಾರ ಬದ್ಧವಾಗಿದೆ. ನಿರ್ದಿಷ್ಟ ರಾಜ್ಯ ಚುನಾವಣೆಗೂ ಮಸೂದೆ ಮಂಡನೆಗೂ ಯಾವುದೇ ಸಂಬಂಧವಿಲ್ಲ' ಎಂದು ಸ್ಪಷ್ಟಪಡಿಸಿದರು.
- 'ವಿರೋಧ ಪಕ್ಷವು ಈ ಉಪಕ್ರಮವನ್ನು ಬೆಂಬಲಿಸುತ್ತದೆ' ಎಂದು ಹೇಳಿದ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, 'ಮಸೂದೆಯು ಮುಖ್ಯವಾಗಿದೆ ಮತ್ತು ದೀರ್ಘಕಾಲೀನ ಪರಿಣಾಮಗಳನ್ನು ಬೀರುತ್ತದೆ. ಆದರೆ, ಸರ್ಕಾರದ ಈ ಆತುರವು ಅನೇಕ ಪ್ರಶ್ನೆಗಳನ್ನು ಹುಟ್ಟು ಹಾಕಿದೆ' ಎಂದರು.
- 'ನಿಮಗೆ ಮಹಿಳೆಯರ ಬಗ್ಗೆ. ಅಷ್ಟೊಂದು ಬದ್ಧತೆ ಇದ್ದಿದ್ದರೆ, ಅದನ್ನು ಅಂಗೀಕರಿಸಿದ ನಂತರ ಮೂರು ವರ್ಷ ಏಕೆ ಕಾಯುತ್ತಿದ್ದೀರಿ? ಅಧಿವೇಶನದ ಆರಂಭದಲ್ಲೇ ಈ ಮಸೂದೆ ತರಬೇಕಿತ್ತು ಚುನಾವಣೆ ಸಮಯದಲ್ಲಿ ಮಸೂದೆ ತರುವ ಕೇಂದ್ರದ ಪ್ರಜಾಪ್ರಭುತ್ವ ವಿರೋಧಿ ನಡವಳಿಕೆಯನ್ನು ಸಹಿಸುವುದಿಲ್ಲ ಎಂದು ಖರ್ಗೆ ಅವರುಹೇಳಿದರು.
- ಕ್ಷೇತ್ರ ಮರುವಿಂಗಡಣೆಗೆ 2027ರ ಜನಗಣತಿ ಆಗುವವರೆಗೂ ಕಾಯದೆ. 2011ರ ಜನಗಣತಿಯ ಆಧಾರದಲ್ಲೇ ಕ್ಷೇತ್ರಗಳ ಮರು ವಿಂಗಡಣೆ ಮತ್ತು ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆ ತರಲು ಸರ್ಕಾರ ಸಿದ್ಧತೆ ನಡೆಸಿದೆ ಇದಕ್ಕಾಗಿ 2023ರ ನಾರಿ ಶಕ್ತಿ ವಂದನಾ ಕಾಯ್ದೆ'ಗೆ (ಮಹಿಳಾ ಮೀಸಲಾತಿ ಕಾಯ್ದೆ) ತಿದ್ದುಪಡಿ ತರಲು ಒಂದು ಮಸೂದೆ ಮತ್ತು ಕ್ಷೇತ್ರ ಮರುವಿಂಗಡಣೆ ಕಾಯ್ದೆಯ ತಿದ್ದುಪಡಿಗೆ ಮತ್ತೊಂದು ಮಸೂದೆ ತರಲು ಸರ್ಕಾರ ಮುಂದಾಗಿದೆ.

Dr. Rajkumar IAS/KAS Academy

## ❖ 'ಪರಿಭಾವಿತ ಅರಣ್ಯ: ಸ್ಪಷ್ಟತೆ ಇರಲಿ'

**ಸಂದರ್ಭ: ಪರಿಭಾವಿತ ಅರಣ್ಯಗಳನ್ನು (ಡೀಮ್ಸ್ ಫಾರೆಸ್ಟ್) ಈ ಹಿಂದೆ ಗುರುತಿಸುವಾಗ ತಪ್ಪುಗಳಾಗಿವೆ. ಆ ತಪ್ಪುಗಳನ್ನು ಈ ಬಾರಿಯಾದರೂ ಸರಿಯಾಗಿ ಪಟ್ಟಿ ಮಾಡಬೇಕು. ರಾಜ್ಯ, ಜಿಲ್ಲಾ ಮಟ್ಟದಲ್ಲಿ ಅರಣ್ಯ-ಪರಿಭಾವಿತ ಅರಣ್ಯ ಬಗ್ಗೆ ಸ್ಪಷ್ಟತೆ ಇರಬೇಕು' ಎಂದು ಕಂದಾಯ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸೂಚನೆ ನೀಡಿದ್ದಾರೆ.**

- ಪರಿಭಾವಿತ ಅರಣ್ಯ ಗುರುತಿಸುವ ಕುರಿತಂತೆ ಎರಡೂ ಇಲಾಖೆಗಳ ಅಧಿಕಾರಿಗಳ ಜೊತೆ ಗುರುವಾರ ಸಭೆ ನಡೆಸಿದ ಅವರು, 'ಪರಿಭಾವಿತ ಅರಣ್ಯಗಳನ್ನು ಗುರುತಿಸಲು ಜಿಲ್ಲಾವಾರು ತಂಡ ರಚಿಸಬೇಕು. ಕಂದಾಯ-ಅರಣ್ಯ ಗಡಿ ನಿಗದಿಗೆ ಜಂಟಿ ಸರ್ವೆ ನಡೆಸಬೇಕು. ಆ ಮೂಲಕ, ರೈತರಿಗೆ ಆಗುತ್ತಿರುವ ಸಮಸ್ಯೆಗಳನ್ನು ತಪ್ಪಿಸಬೇಕು' ಎಂದು ಅವರು ನಿರ್ದೇಶನ ನೀಡಿದ್ದಾರೆ.
- 'ಚಿಕ್ಕಮಗಳೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಜಂಟಿ ಸರ್ವೆ ಪ್ರಗತಿಯಲ್ಲಿದೆ. ಕೆಲವು ಕಡೆ ಅರಣ್ಯ ಇಲಾಖೆ ಅಧಿಕಾರಿಗಳು ಜಂಟಿ ಸರ್ವೆಗೆ ಸಹಿ ಹಾಕದೇ ಇರುವುದು ಸರಿಯಲ್ಲ' ಎಂದು ಅರಣ್ಯ ಇಲಾಖೆ ಅಧಿಕಾರಿಗಳ ನಡೆಗೆ ಸಚಿವರು ಕಿಡಿಕಾರಿದರು.
- 'ಕಾಡಿನಂತೆ ಕಾಣುವ ಪ್ರದೇಶವನ್ನು ಮಾತ್ರ ಪರಿಭಾವಿತ ಅರಣ್ಯ ಎಂದು ಪರಿಗಣಿಸಬೇಕು. ಆದರೆ, ಕೆಐಎಡಿಬಿ ಜಾಗ, ಕೆರೆ ಜಾಗ, ಶಾಲೆಯ ಜಾಗವನ್ನೂ ಪರಿಭಾವಿತ ಅರಣ್ಯ ಎಂದು ಪರಿಗಣಿಸುವುದು ಎಷ್ಟು ಸರಿ ಶೇಂದಿ ವನ ತೆಂಗಿನಂತೆಯೇ ವಾಣಿಜ್ಯ ಬೆಳೆ ಅದನ್ನೂ ಅರಣ್ಯ ಪ್ರದೇಶ ಎಂದು ಗುರುತಿಸಿರುವುದು ಸರಿಯಲ್ಲ' ಎಂದರು.
- 'ಪರಿಭಾವಿತ ಅರಣ್ಯ ಪರಿಕಲ್ಪನೆಯ ಅರ್ಥವನ್ನೇ ನಾವು ಮರೆತಿದ್ದೇವೆ. ಕುರುಚಲು ಗಿಡ ಕೂಡ ಇಲ್ಲದ ಪ್ರದೇಶವನ್ನು ಪರಿಭಾವಿತ ಅರಣ್ಯ ಎಂದು ಈ ಹಿಂದೆ ಪಟ್ಟಿ ಮಾಡಲಾಗಿದೆ. ಇಂತಹ ಕೆಲಸ ಮತ್ತೆ ಆಗಬಾರದು. ಈ ರೀತಿ ಮಾಡಿದರೆ ಭವಿಷ್ಯದಲ್ಲಿ ಸಮಸ್ಯೆ ಆಗಲಿದೆ' ಎಂದು ಎಚ್ಚರಿಕೆ ನೀಡಿದರು.

## ❖ ಕಿಶೋರ ಸ್ವಾಸ್ಥ್ಯ: ಸ್ನೇಹ ಕೇಂದ್ರಗಳ ವಿಸ್ತರಣೆ

**ಸಂದರ್ಭ: ಹದಿಹರೆಯದವರಆರೋಗ್ಯ ಸೇವೆಗಳನ್ನು ಬಲಪಡಿಸಲು 'ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮ'ದಡಿ (ಆರ್‌ಕೆಎಸ್‌ಕೆ) ರಾಜ್ಯದಾದ್ಯಂತ ಜಿಲ್ಲಾ ಆಸ್ಪತ್ರೆಯಿಂದ ಉಪಕೇಂದ್ರಗಳವರೆಗೆ, ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಸ್ನೇಹ ಕೇಂದ್ರಗಳ ವಿಸ್ತರಣೆ ಹಾಗೂ ಬಲವರ್ಧನೆಗೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.**

- ಈ ಕೇಂದ್ರಗಳಲ್ಲಿ ಸಮಾಲೋಚನ ಸೇವೆಗಳನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನ ಹಾಗೂ ಇತರೆ ಆರೋಗ್ಯ ಕಾರ್ಯಕ್ರಮಗಳಡಿ ಲಭ್ಯವಿರುವ ಸಮಾಲೋಚಕರಿಂದ ಕೇಂದ್ರಗಳಲ್ಲಿ ತರಬೇತಿ ಹೊಂದಿದ ವೈದ್ಯಾಧಿಕಾರಿಗಳು, ಶುಶೂಷಕರು ಮತ್ತು ಉಪಕೇಂದ್ರದ ಸಿಬ್ಬಂದಿ ಸೇವೆ ನೀಡಲು ತಿಳಿಸಲಾಗಿದೆ.
- ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ 'ಸಮಗ್ರ ಸಮಾಲೋಚನಾ ಕೇಂದ್ರ (ಎಸ್‌ಎಸ್‌ಕೆ) ಸ್ಥಾಪಿಸಬೇಕು. ಸಮಾಲೋಚಕರನ್ನು ಬಳಸಿಕೊಳ್ಳಬೇಕು. ಸಮಾಲೋಚನೆಗೆ ಅಗತ್ಯ ಪರಿಕರ ಕಲ್ಪಿಸಿ, ಗೋಪ್ಯತೆ ಕಾಯ್ದುಕೊಳ್ಳಬೇಕು ಎಂದು ಹೇಳಲಾಗಿದೆ.
- ಮಕ್ಕಳಿಗೆ ಹೆಚ್ಚಿನ ಸೇವೆ ಒದಗಿಸಲುಪ್ರತಿ ತಿಂಗಳ 13ರಂದು ಮಕ್ಕಳ ತಜ್ಞರು, ಮನೋವೈದ್ಯರು, ಮೂಳೆಚಿಕಿತ್ಸಕರ ಸಮಾಲೋಚನೆ ಆಯೋಜಿಸಬೇಕು. ಶಾಲೆಗಳು ಮತ್ತು ಕ್ಷೇತ್ರ ಭೇಟಿಯ ಸಮಾಲೋಚಕರಿಗೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ಪಾವತಿಗೆ ಶಿಕ್ಷಣ ಇಲಾಖೆ ಕ್ರಮವಹಿಸಲು ತಿಳಿಸಲಾಗಿದೆ.

Dr Rajkumar IAS/KAS Academy


## ❖ ಜಿಬಿಎ, ನಗರ ಪಾಲಿಕೆಗಳ ಲೋಗೊ ಅನಾವರಣ

**ಸಂದರ್ಭ: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಹಾಗೂ ಐದು ನಗರ ಪಾಲಿಕೆಗಳ ಲೋಗೊವನ್ನು ಆಯಾ ವೆಬ್‌ಸೈಟ್, ಸಾಮಾಜಿಕ ಜಾಲತಾಣಗಳಲ್ಲಿ ಅನಾವರಣಗೊಳಿಸಲಾಗಿದೆ.**




- ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿಮಾರ್ಚ್ 20ರಂದು ನಡೆದಿದ್ದ ಜಿಬಿಎ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಲೋಗೊವನ್ನು ಅಂತಿಮ ಗೊಳಿಸಲಾಗಿತ್ತು. ಇವುಗಳನ್ನು ಸದ್ಯದಲ್ಲಿ ಅನಾವರಣ ಮಾಡುವುದಾಗಿ ಶಿವಕುಮಾರ್ ಹೇಳಿದ್ದರು ಆದರೆ, ಯಾವುದೇ ಅಧಿಕೃತ ಕಾರ್ಯಕ್ರಮಇಲ್ಲದೆ, ಅಂತರ್ಜಾಲ, ಸಾಮಾಜಿಕ ತಾಣಗಳಲ್ಲಿ ಹೊಸ ಲೋಗೊ ಬಳಸಲಾಗುತ್ತಿದೆ. ಜಿಬಿಎ ಹಾಗೂ ಐದು ನಗರ ಪಾಲಿಕೆಗಳ ಲೋಗೊವನ್ನು ಚಿತ್ರಕಲಾ ಪರಿಷತ್‌ನವರು ಸಿದ್ಧಪಡಿಸಿದ್ದಾರೆ. ಇವುಗಳಿಗೆ ಜಿಬಿಎ ಕಾರ್ಯಕಾರಿ ಸಮಿತಿ ಸಭೆ ಯಲ್ಲಿ ಅನುಮೋದನೆ ನೀಡಲಾಗಿತ್ತು.
- ಹಿಂದಿನ ಬಿಬಿಎಂಪಿಯಲ್ಲಿ ಬಳಸಲಾಗುತ್ತಿದ್ದ ಕೆಂಪೇಗೌಡರ ಗೋಪುರದ ಜೊತೆಗೆ ಕೆಂಪೇಗೌಡರ ಚಿತ್ರವನ್ನು ಅಳವಡಿಸಿ ಜಿಬಿಎ ಲೋಗೊ ಸಿದ್ಧಪಡಿಸಲಾಗಿದೆ. ಇನ್ನು ಐದು ನಗರ ಪಾಲಿಕೆಗಳ ಲೋಗೊದಲ್ಲಿ ಕೆಂಪೇಗೌಡ ಗೋಪುರ ಮಾತ್ರವಿದ್ದು, ಪ್ರತ್ಯೇಕ ಬಣ್ಣವನ್ನು ಅಳವಡಿಸಲಾಗಿದೆ. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ನಗರ ಪಾಲಿಕೆಗಳ ಹೆಸರನ್ನು ವೃತ್ತಾಕಾರದಲ್ಲಿ ಬಳಸಲಾಗಿದೆ.

Dr. Rajkumar IAS/KAS Academy




# ಜನಗಣತಿ: ಸ್ವಯಂಗಣತಿ ಏನು, ಎತ್ತ?

## ಪೂರ್ವಭಾವಿಯಾಗಿ ಮನೆಪಟ್ಟಿ– ಮನೆಗಣತಿ ಪ್ರಕ್ರಿಯೆ

• ಜಯಸಿಂಹ ಆರ್.

ಬೆಂಗಳೂರು: 'ಜನಗಣತಿ–2027' ಮುಂದಿನ ವರ್ಷ ನಡೆಯುತ್ತದೆಯಾದರೂ, ಅದಕ್ಕೆ ಪೂರ್ವಭಾವಿಯಾಗಿ 'ಮನೆಪಟ್ಟಿ–ಮನೆಗಣತಿ' ಕಾರ್ಯಕ್ಕೆ ಕೇಂದ್ರ ಸರ್ಕಾರವು ಈಗಾಗಲೇ ಚಾಲನೆ ನೀಡಿದೆ. ಮನೆಗಣತಿ ಪ್ರಕ್ರಿಯೆಯನ್ನು ನಿಯೋಜಿತ ಸಿಬ್ಬಂದಿ ನಡೆಸುತ್ತಾರಾದರೂ ಈ ಬಾರಿ ಸ್ವಯಂಗಣತಿಗೆ ಅವಕಾಶ ನೀಡಲಾಗಿದೆ. ಜನಗಣತಿ ಕಾರ್ಯಾಲಯದ se.census.gov.in ಪೋರ್ಟಲ್‌ನಲ್ಲಿ ಜನರೇ ತಮ್ಮ ಮನೆ ಮತ್ತು ಮೂಲಸೌಕರ್ಯದ ವಿವರಗಳನ್ನು ದಾಖಲಿಸಬಹುದಾಗಿದೆ. ಈ ಸ್ವಯಂಗಣತಿಯಲ್ಲಿ ಪ್ರಕ್ರಿಯೆಯ ವಿವರ ಇಲ್ಲಿದೆ.

- ಇದು ಜನಗಣತಿ ಅಲ್ಲ. ಬದಲಿಗೆ ಜನಗಣತಿಗೆ ಪೂರ್ವಭಾವಿಯಾಗಿ ನಡೆಯಲಿರುವ ಮನೆಪಟ್ಟಿ–ಮನೆಗಣತಿ ಮಾತ್ರ
- ಸ್ವಯಂಗಣತಿ ಮಾಡುವಾಗ ಉತ್ತಮ ನೆಟ್‌ವರ್ಕ್ ಲಭ್ಯವಿರುವ ಸ್ಥಳದಲ್ಲಿ ಇರುವುದು ಸೂಕ್ತ
- ಇದರಲ್ಲಿ ಜನರು ಸ್ವಯಂಪ್ರೇರಿತರಾಗಿ ದಾಖಲಿಸುವ ವಿವರಗಳನ್ನು ಗಣತಿ ಸಿಬ್ಬಂದಿ ದೃಢೀಕರಿಸಲೇಬೇಕು
- ಸ್ವಯಂಗಣತಿ ಮಾಡುವವರು ತಮ್ಮ ಹೆಸರು, ಮೊಬೈಲ್ ಸಂಖ್ಯೆ, ಒಟಿಪಿ ಮತ್ತು ಮನೆಯ ವಿಳಾಸ ಹಾಗೂ ಭೌಗೋಳಿಕ ಗುರುತನ್ನು ಒದಗಿಸಬೇಕು. ಆಧಾರ್‌ನಂಥ ದಾಖಲೆ ಪತ್ರಗಳನ್ನು ನೀಡಬೇಕಾಗಿಲ್ಲ



ಜನಗಣತಿ ನಮ್ಮ ರಾಜ್ಯ ಮತ್ತು ದೇಶದ ಭವಿಷ್ಯ ರೂಪಿಸುವ ಮಹತ್ವದ ಕಾರ್ಯ. ಆರೋಗ್ಯ, ಶಿಕ್ಷಣ, ವಸತಿ ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ ಸಮರ್ಪಕ ಸಂಪನ್ಮೂಲ ಹಂಚಿಕೆಗೆ ದಾರಿ ತೋರುತ್ತದೆ. ನಿಮ್ಮ ಭಾಗವಹಿಸುವಿಕೆ ಅತ್ಯಂತ ಮುಖ್ಯ. ಇದು ಕೇವಲ ಕರ್ತವ್ಯವಲ್ಲ– ಕರ್ನಾಟಕದ ಅಭಿವೃದ್ಧಿಗೆ ನಿಮ್ಮ ಕೊಡುಗೆಯಾಗಿದೆ. ಇಂದು ನೀಡುವ ನಿಖರ ಮಾಹಿತಿ, ನಾಳೆಯ ಉತ್ತಮ ನೀತಿಗಳು ಮತ್ತು ಸೇವೆಗಳಿಗೆ ಆಧಾರವಾಗುತ್ತದೆ. ನಿಗದಿತ ಅವಧಿಯಲ್ಲಿ ಸ್ವಯಂಗಣತಿಯನ್ನು ಪೂರ್ಣಗೊಳಿಸೋಣ

**ಶಾಲಿನಿ ರಜನೀಶ್,** ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ

## ತೊಡಕುಗಳು

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವನ್ನು ಆಯ್ಕೆ ಮಾಡಿದರೆ, ತಮ್ಮ ಜಾತಿ ಯಾವುದು ಎಂಬುದನ್ನು ನಮೂದಿಸಬೇಕು. ಇದಕ್ಕಾಗಿ ಒಂದು ಪಟ್ಟಿ ತೆರೆದುಕೊಳ್ಳಲಿದೆ. ಆದರೆ ಈ ಪಟ್ಟಿಯಲ್ಲಿ ಜಾತಿಯ ಹೆಸರುಗಳನ್ನು ಇಂಗ್ಲಿಷ್‌ನಲ್ಲಿ ಮಾತ್ರವೇ ನೀಡಲಾಗಿದೆ. ಇಂಗ್ಲಿಷ್ ಗೊತ್ತಿಲ್ಲದವರಿಗೆ ಇದು ಸಮಸ್ಯೆಯಾಗಲಿದೆ
- ಮನೆಯ ವಿಳಾಸ ದೃಢೀಕರಣದ ವೇಳೆ ಭೌಗೋಳಿಕ ಗುರುತು ಲಗತ್ತಿಸಬೇಕು (ಜಿಯೋ ಲೊಕೇಷನ್ ಟ್ಯಾಗ್). ಈ ಪ್ರಕ್ರಿಯೆ ಕ್ಲಿಷ್ಟವಾಗಿದೆ
- ಆಹಾರ ಧಾನ್ಯ ಆಯ್ಕೆಯಲ್ಲಿ ಮೈಸೂರು ಕರ್ನಾಟಕ ಭಾಗದ ಪ್ರಮುಖ ಧಾನ್ಯವಾದ ರಾಗಿಯ ಆಯ್ಕೆ ಇಲ್ಲ. ರಾಗಿಯನ್ನು ಪ್ರಧಾನವಾಗಿ ಬಳಸುವವರು 'ಇನ್ನಿತರೆ' ಎಂಬ ಆಯ್ಕೆಯನ್ನು ಬಳಸಬೇಕಾಗುತ್ತದೆ

## ನೋಂದಣಿ

1. **se.census.gov.in** ಪೋರ್ಟಲ್‌ಗೆ ಭೇಟಿ ನೀಡಬೇಕು. ರಾಜ್ಯವನ್ನು ಆಯ್ಕೆ ಮಾಡಿಕೊಳ್ಳಬೇಕು. ಕರ್ನಾಟಕದವರು, 'ಕರ್ನಾಟಕ' ಆಯ್ಕೆಯನ್ನು ಕ್ಲಿಕ್ ಮಾಡಬೇಕು
2. **ಮನೆಪಟ್ಟಿ ನೋಂದಣಿ:** ಈ ಹಂತದಲ್ಲಿ ಮನೆಯ ಕುಟುಂಬದ ಒಡೆಯ/ಒಡತಿಯ ಹೆಸರು ನೋಂದಾಯಿಸಬೇಕು. ಅವರ ಮೊಬೈಲ್ ಸಂಖ್ಯೆ ನಮೂದಿಸಬೇಕು. ಸ್ವಯಂಗಣತಿಗೆ ಕುಟುಂಬದ ಒಬ್ಬರ ಮೊಬೈಲ್ ಸಂಖ್ಯೆಯೇ ಸಾಕು.

## ವಿಳಾಸ ದೃಢೀಕರಣ

3. **ಭಾಷೆ ಆಯ್ಕೆ ಮತ್ತು ಒಟಿಪಿ:** ಸ್ವಯಂಗಣತಿ ಪ್ರಕ್ರಿಯೆ ನಡೆಸಲು ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ಕನ್ನಡವೂ ಸೇರಿ ಒಟ್ಟು 16 ಭಾಷೆಗಳಲ್ಲಿ ಸ್ವಯಂಗಣತಿ ನಡೆಸಲು ಅವಕಾಶವಿದೆ. ಮನೆಪಟ್ಟಿ ನೋಂದಣಿ ವೇಳೆ ನಮೂದಿಸಿದ್ದ ಮೊಬೈಲ್ ಸಂಖ್ಯೆಗೆ ಈ ಹಂತದಲ್ಲಿ ಒಟಿಪಿ ಬರಲಿದೆ. ಅದನ್ನು ನಮೂದಿಸಿ, ಪ್ರಕ್ರಿಯೆ ಮುಂದುವರಿಸಬಹುದು
4. ಜಿಲ್ಲೆ ಮತ್ತು ಅಂಚೆ ಸೂಚ್ಯಂಕ ಸಂಖ್ಯೆ (ಪೋಸ್ಟಲ್ ಇಂಡೆಕ್ಸ್ ನಂಬರ್–ಪಿನ್) ನಮೂದಿಸಬೇಕು. ನಂತರ ವಿಳಾಸ ಪಟ್ಟಿಯಲ್ಲಿ ಮನೆಯ ಸಂಖ್ಯೆ/ಬೀದಿ/ಪ್ರದೇಶದ ವಿವರ ನಮೂದಿಸಬೇಕು
5. ಈ ಹಂತದಲ್ಲಿ ಪೋರ್ಟಲ್‌ನ ಪರದೆಯಲ್ಲಿ ಉಪಗ್ರಹ ನಕ್ಷೆ ತೆರೆದುಕೊಳ್ಳಲಿದೆ. ಅಲ್ಲಿ ಮನೆಯನ್ನು ಪತ್ತೆ ಮಾಡಿ, ಅದರ ಮೇಲೆ ಭೌಗೋಳಿಕ ಗುರುತನ್ನು ದೃಢೀಕರಿಸಬೇಕು. ಮನೆಯನ್ನು ಸರಿಯಾಗಿ ಗುರುತು ಮಾಡಲೇಬೇಕು. ಇದರಿಂದ ಗಣತಿ ಸಿಬ್ಬಂದಿಯು ಆ ಮನೆಯನ್ನು ಹುಡುಕಲು ಅನುಕೂಲವಾಗಲಿದೆ

## ವಿವರ ದಾಖಲಾತಿ

6. ಈ ಹಂತದಲ್ಲಿ ಮನೆಯ ಭೌತಿಕ ಸ್ಥಿತಿಯ ವಿವರಗಳನ್ನು ದಾಖಲಿಸಬೇಕು. ಕಚ್ಚಾ ಅಥವಾ ಪಕ್ಕಾ ಮನೆ, ಕಲ್ಲು/ಗಾರೆ/ಸಿಮೆಂಟ್/ಟೈಲ್ಸ್ ನೆಲವೇ, ಸೋಗೆ/ಹೆಂಚು/ಶೀಟ್/ಆರ್‌ಸಿಸಿ ಚಾವಣಿ, ಕೊಳಾಯಿ/ಕೊಳವೆ ಬಾವಿ/ಟ್ಯಾಂಕರ್/ಬಾವಿ/ನದಿ–ಕೆರೆ ಮೂಲದ ನೀರು, ಪ್ರತ್ಯೇಕ/ಸಾಮೂಹಿಕ/ಸಾರ್ವಜನಿಕ/ಬಯಲು ಶೌಚಾಲಯವೇ ಎಂಬ ವಿವರಗಳನ್ನು ನಮೂದಿಸಬೇಕು
7. ಪರಿಶಿಷ್ಟ ಜಾತಿ (101 ಜಾತಿಗಳ ಆಯ್ಕೆ), ಪರಿಶಿಷ್ಟ ಪಂಗಡ (50 ಪಂಗಡಗಳ ಆಯ್ಕೆ), ಇತರೆ ಎಂಬುದನ್ನು ಆಯ್ಕೆ ಮಾಡಿಕೊಳ್ಳಬೇಕು
8. ಮನೆಯಲ್ಲಿ ವಿದ್ಯುತ್ ಸಂಪರ್ಕ, ಎಲ್‌ಪಿಜಿ/ಪಿಎನ್‌ಜಿ/ಗೋಬರ್ ಅನಿಲ/ಸೀಮೆಎಣ್ಣೆ ಒಲೆ/ಸೌದೆ ಒಲೆ, ರೇಡಿಯೊ (ರೇಡಿಯೊ ಇಲ್ಲದಿದ್ದು, ಸ್ಮಾರ್ಟ್‌ಫೋನ್‌ನಲ್ಲಿ ಎಫ್‌ಎಂ ಇದ್ದರೆ, ಅದನ್ನು ಆಯ್ಕೆ ಮಾಡಬೇಕು), ಟಿ.ವಿ (ಡಿಟಿಎಚ್/ಇಂಟರ್‌ನೆಟ್/ಕೇಬಲ್), ಕಂಪ್ಯೂಟರ್/ಲ್ಯಾಪ್‌ಟಾಪ್, ದೂರವಾಣಿ/ಸ್ಮಾರ್ಟ್‌ಫೋನ್/ಮೊಬೈಲ್ ಫೋನ್ ಇದೆಯೇ ಎಂಬುದನ್ನು ನಮೂದಿಸಬೇಕು
9. ಬೈಸಿಕಲ್/ಮೊಪೆಡ್/ಮೋಟಾರ್ ಬೈಕ್, ಕಾರು/ವ್ಯಾನ್/ಜೀಪ್ ಇದೆಯೇ ಎಂಬ ವಿವರ ನಮೂದಿಸಬೇಕು. ಜತೆಗೆ ಮನೆಯಲ್ಲಿ ಪ್ರಧಾನವಾಗಿ ಬಳಸುವ ಆಹಾರಧಾನ್ಯ (ಅಕ್ಕಿ/ಗೋಧಿ/ಜೋಳ/ಸಜ್ಜೆ/ಮೆಕ್ಕೆಜೋಳ/ಇನ್ನಿತರೆ ಎಂಬ ಆಯ್ಕೆಗಳಿವೆ) ಯಾವುದು ಎಂಬುದನ್ನು ಸೂಚಿಸಬೇಕು. ಇಲ್ಲಿಗೆ ವಿವರ ದಾಖಲಾತಿ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ

## ಸಲ್ಲಿಕೆ ಮತ್ತು ದೃಢೀಕರಣ

10. ಮಾಹಿತಿಗಳನ್ನು ನಮೂದಿಸಿದ ನಂತರ ಅದನ್ನು ಮರುಪರಿಶೀಲಿಸಿಕೊಳ್ಳಬಹುದು. ತಪ್ಪಾಗಿದ್ದರೆ, ಸರಿಪಡಿಸಬಹುದು. ನಂತರ ಸ್ವಯಂಗಣತಿ ವಿವರಗಳನ್ನು ಸಲ್ಲಿಸಬಹುದು ಅಥವಾ ಕರಡನ್ನು ಉಳಿಸಬಹುದು (15 ದಿನಗಳವರೆಗೆ ಸರಿಪಡಿಸಲು ಅವಕಾಶವಿರುತ್ತದೆ)
11. ಸ್ವಯಂಗಣತಿ ವಿವರಗಳನ್ನು ಸಲ್ಲಿಸಿದ ತಕ್ಷಣ 'ಸ್ವಯಂಗಣತಿ ಗುರುತಿನ ಸಂಖ್ಯೆ' ಸೃಜನೆಗೊಳ್ಳುತ್ತದೆ. ಇದನ್ನು ಜತನವಾಗಿ ಇರಿಸಿಕೊಳ್ಳಬೇಕು. ಮನೆಗಣತಿ ಸಿಬ್ಬಂದಿ ಭೇಟಿ ನೀಡಿದಾಗ ಈ ಸಂಖ್ಯೆಯನ್ನು ಒದಗಿಸಬೇಕು. ಅದನ್ನು ಅವರು ದೃಢೀಕರಿಸುತ್ತಾರೆ. ಆಗ ಮಾತ್ರವೇ ಸ್ವಯಂಗಣತಿ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ

## ❖ ಆದಿತ್ಯ-ಎಲ್ 1: ದತ್ತಾಂಶ ಅಧ್ಯಯನಕ್ಕೆ ಅವಕಾಶ

**ಸಂದರ್ಭ: ಸೂರ್ಯನ ಚಟುವಟಿಕೆ ವೀಕ್ಷಿಸುತ್ತಿರುವ ಆದಿತ್ಯ-ಎಲ್ 1 ವೀಕ್ಷಣಾ ಉಪಗ್ರಹ ಈವರೆಗೆ ಕಳುಹಿಸಿರುವ ವೈಜ್ಞಾನಿಕ ದತ್ತಾಂಶದ ಮತ್ತು ಅಧ್ಯಯನ ಮತ್ತು ವಿಶ್ಲೇಷಣೆಗೆ ವಿವಿಧ ವೈಜ್ಞಾನಿಕ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಇಸ್ರೋ ಅವಕಾಶ ನೀಡಿದೆ.**

- ಸುಮಾರು 27 ಟೆರಾ ಬೈಟ್‌ನನ್ನು ದತ್ತಾಂಶ ಲಭ್ಯವಿದೆ. ಈ ಪೈಕಿ ಹಲವು ಮಹತ್ವದ ವೈಜ್ಞಾನಿಕ ಫಲಿತಾಂಶಗಳು ಈಗಾಗಲೇ ಅಂತರರಾಷ್ಟ್ರೀಯ ಪ್ರಮುಖ ಜರ್ನಲ್‌ಗಳಲ್ಲಿ ಪ್ರಕಟವಾಗಿವೆ.
- ಇದೀಗ ಎರಡನೇ ಬಾರಿ ಖಗೋಳ ಭೌತವಿಜ್ಞಾನ ಸಮುದಾಯ ಈ ದತ್ತಾಂಶ ಬಳಸಿಕೊಂಡು ಮತ್ತಷ್ಟು ಅಧ್ಯಯನ ನಡೆಸಲು ಇಸ್ರೋ ಅವಕಾಶ ನೀಡಿದೆ. ಆಸಕ್ತಿ ಇರುವ ವಿಜ್ಞಾನದ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಪ್ರಸ್ತಾವ ಸಲ್ಲಿಸಬಹುದಾಗಿದೆ. ಇದಕ್ಕೆ ಪೂರಕ ಮಾಹಿತಿ ಇಸ್ರೊ ವೈಬ್‌ಸೈಟ್‌ನಲ್ಲಿ ಮಾಹಿತಿ ಲಭ್ಯವಿದೆ.

## ❖ ತೆರಿಗೆ ಸಂಗ್ರಹದಲ್ಲಿ ರಾಯಚೂರು ಅತ್ಯಧಿಕ ದಾಖಲೆ: ಸಚಿವ ಪ್ರಿಯಾಂಕ್: ಗ್ರಾ.ಪಂ: ₹1,382.57 ಕೋಟಿ ಸಂಗ್ರಹ

**ಸಂದರ್ಭ: ರಾಜ್ಯದ 5,943 ಗ್ರಾಮ ಪಂಚಾಯಿತಿಗಳು 2025-26ರ ಸಾಲಿನಲ್ಲಿ ₹1,382.57 ಕೋಟಿ ತೆರಿಗೆ ಸಂಗ್ರಹಿಸುವ ಮೂಲಕ ದಾಖಲೆ ಸೃಷ್ಟಿಸಿವೆ ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.**

- 'ಕಳೆದ ಕೆಲವು ಸಾಲಿನಿಂದ ತೆರಿಗೆ ಸಂಗ್ರಹ ಏರುಮುಖವಾಗಿದೆ. ಹೆಚ್ಚಿನ ತೆರಿಗೆ ಸಂಗ್ರಹ ಮತ್ತು ಆದಾಯ ಕ್ರೋಡೀಕರಣದ ಮೂಲಕ ಅತ್ಯುತ್ತಮ ಸಾಧನೆ ಮಾಡಿದ ರಾಜ್ಯವಾಗಿ ಹೊರಹೊಮ್ಮಿದೆ' ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ವಿವರಿಸಿದ್ದಾರೆ.
- 2024-25ನೇ ಆರ್ಥಿಕ ವರ್ಷದಲ್ಲಿ ಇಲಾಖೆಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಗ್ರಾಮ ಪಂಚಾಯಿತಿಗಳು ₹1,272.54 ಕೋಟಿ ತೆರಿಗೆ ಸಂಗ್ರಹ ಮಾಡುವ ಮೂಲಕ ಚಾಲ್ತಿ ಬೇಡಿಕೆಯ ಶೇ 80ರಷ್ಟು ವಸೂಲಿ ಮಾಡಿ, ದಾಖಲೆ ಸೃಷ್ಟಿಸಿದ್ದವು ಹಿಂದಿನ ಸಾಲಿಗಿಂತ ₹110 04 ಕೋಟಿ ಅಧಿಕ ತೆರಿಗೆ ವಸೂಲಿಯಾಗಿದೆ. ನಿಗದಿತ ಗುರಿಯಲ್ಲಿ (₹1,560 76 ಕೋಟಿ) ಶೇ 89ರಷ್ಟು ತೆರಿಗೆ ಸಂಗ್ರಹಿಸಲಾಗಿದೆ ಎಂದು ಅವರು ಹೇಳಿದ್ದಾರೆ.
- ರಾಯಚೂರು ಜಿಲ್ಲೆ ಶೇ 129ರಷ್ಟು ತೆರಿಗೆ ಸಂಗ್ರಹಿಸುವ ಮೂಲಕ ವಿಕ್ರಮ ಸಾಧಿಸಿದೆ. ರಾಜ್ಯದ 11 ಜಿಲ್ಲೆಗಳು ಶೇ 900ಕ್ಕಿಂತಲೂ ಹೆಚ್ಚು, ಕರ ಸಂಗ್ರಹಿಸುವ ಮೂಲಕ ಮುನ್ನಡೆ ಸಾಧಿಸಿವೆ ಎಂದಿದ್ದಾರೆ.
- ತೆರಿಗೆ ಸಂಗ್ರಹದಲ್ಲಿ ಕರ್ನಾಟಕವು ಕಳೆದ ಸಾಲಿನಲ್ಲಿ ರಾಷ್ಟ್ರ ಮಟ್ಟದಲ್ಲಿ ಮೊದಲ ಸ್ಥಾನ ಪಡೆದ ಹೆಗ್ಗಳಿಕೆಗೆ ಪಾತ್ರವಾಗಿತ್ತು ವರ್ಷದಿಂದ ವರ್ಷಕ್ಕೆ ತೆರಿಗೆ ಸಂಗ್ರಹಣೆಯಲ್ಲಿ ಉಂಟಾಗಿರುವ ಪ್ರಗತಿಯು ದಕ್ಷ ಆಡಳಿತ, ನಿಯಮಗಳ ಕಟ್ಟುನಿಟ್ಟಿನ ಜಾರಿ ಮತ್ತು ಸುಧಾರಿತ ತೆರಿಗೆ ಸಂಗ್ರಹಣಾ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ ಎಂದು ಪ್ರಿಯಾಂಕ್ ತಿಳಿಸಿದ್ದಾರೆ
- ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆ ಸಂಗ್ರಹ ಕುರಿತು ವ್ಯಾಪಕ ಪ್ರಚಾರ ಕಾರ್ಯಕ್ರಮಗಳು, ತೆರಿಗೆ ವಸೂಲಾತಿ ಅಭಿಯಾನಗಳ ಮೂಲಕ ನಿರಂತರ ಶ್ರಮವಹಿಸುವ ಮೂಲಕ ಈ ದಾಖಲೆ ಸೃಷ್ಟಿಸಲಾಗಿದೆ ಇದಕ್ಕಾಗಿ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್‌ಗಳಿಂದ ಆರಂಭಿಸಿ, ಎಲ್ಲಾ ಅಧಿಕಾರಿಗಳ ಶ್ರಮದಿಂದ ಈ ಫಲಿತಾಂಶ ಸಾಧ್ಯವಾಗಿದೆ ಎಂದೂ ಅವರು ಹೇಳಿದ್ದಾರೆ

## ❖ ರಕ್ಷಣಾ ಉಪಕರಣಗಳ ರಫ್ತು ಭಾರಿ ಏರಿಕೆ

**ಸಂದರ್ಭ: ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ದೇಶದ ರಕ್ಷಣಾ ಉಪಕರಣಗಳ ರಫ್ತು, ಪ್ರಮಾಣವು ಶೇಕಡ 62ರಷ್ಟು ಹೆಚ್ಚಳ ಕಂಡಿದೆ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಹೇಳಿದ್ದಾರೆ.**

Dr. Rajkumar IAS/KAS Academy

- 2025-26ರಲ್ಲಿ ರಕ್ಷಣಾ ಉಪಕರಣಗಳ ರಫ್ತು, ಮೊತ್ತವು ₹38,424 ಕೋಟಿ ಆಗಿದೆ. ಇದು ಸಾರ್ವಕಾಲಿಕ ಗರಿಷ್ಠ ಮೊತ್ತ ರಕ್ಷಣಾ ಉಪಕರಣಗಳ ರಫ್ತನಲ್ಲಿ ಆಗಿರುವ ಭಾರಿ ಜಿಗಿತ'ವು ಭಾರತದ ಸಾಮರ್ಥ್ಯದ ಮೇಲೆ ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ವಿಶ್ವಾಸವನ್ನು ತೋರಿಸುತ್ತಿದೆ ಎಂದು ಸಿಂಗ್ ಅವರು ಎಕ್ಸ್ ಮೂಲಕ ತಿಳಿಸಿದ್ದಾರೆ.
- ಹಿಂದಿನ ಹಣಕಾಸು ವರ್ಷದಲ್ಲಿ ಆಗಿದ್ದ ರಫ್ತಿನ ಮೊತ್ತಕ್ಕೆ ಹೋಲಿಸಿದರೆ 2025-26ರಲ್ಲಿ ಮೊತ್ತವು ₹14,802 ಕೋಟಿಯಷ್ಟು ಜಾಸ್ತಿ ಆಗಿದೆ.
- ರಫ್ತು ವಹಿವಾಟಿನಲ್ಲಿ ಸರ್ಕಾರಿ ಸ್ವಾಮ್ಯದ ರಕ್ಷಣಾ ಕಂಪನಿಗಳ ಪಾಲು ಶೇ 54.84ರಷ್ಟು ಇದೆ. ಖಾಸಗಿ ಕಂಪನಿಗಳ ಪಾಲು ಶೇ 45.16ರಷ್ಟು ಇದೆ. 2024-25ರಲ್ಲಿ ರಫ್ತು, ಮೊತ್ತವು ₹23,622 ಕೋಟಿ ಆಗಿತ್ತು.
- 'ಭಾರತೀಯ ರಕ್ಷಣಾ ಉದ್ಯಮದ ಈ ಸಾಧನೆಯು ಭಾರತವು ರಕ್ಷಣಾ ಉಪಕರಣಗಳ ರಫ್ತನಲ್ಲಿ ಮುಂಚೂಣಿ ಸ್ಥಾನಕ್ಕೆ ಬರಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೊಂದಿರುವ ದೂರದೃಷ್ಟಿಗೆ ಅನುಗುಣವಾಗಿ ಇದೆ' ಎಂದು ರಕ್ಷಣಾ ಸಚಿವಾಲಯದ ಪ್ರಕಟಣೆ ತಿಳಿಸಿದ 2025-26ನೇ ಸಾಲಿನ ರಫ್ತು, ಮೊತ್ತವು ಮೈಲಿಗಲ್ಲು ಎಂದು ಅದು ಬಣ್ಣಿಸಿದೆ.
- ಭಾರತದಲ್ಲಿ ತಯಾರಾದ ರಕ್ಷಣಾ ಉತ್ಪನ್ನಗಳನ್ನು ಜಗತ್ತು ಒಪ್ಪಿಕೊಳ್ಳುವುದು ಹೆಚ್ಚುತ್ತಿದೆ ಎಂಬುದನ್ನು ಜಾಗತಿಕ ಮಟ್ಟದ ಪೂರೈಕೆ ವ್ಯವಸ್ಥೆಯಲ್ಲಿ ಭಾರತದ ಉತ್ಪನ್ನಗಳು ಒಂದಾಗುತ್ತಿರುವುದನ್ನು ಈ ಹೆಚ್ಚಳವು ತೋರಿಸುತ್ತಿದೆ ಎಂದು ಕೂಡ ಸಚಿವಾಲಯ ಹೇಳಿದೆ.
- ಭಾರತವು 2025-26ನೆಯ ಹಣಕಾಸು ವರ್ಷದಲ್ಲಿ 80ಕ್ಕೂ ಹೆಚ್ಚು ದೇಶಗಳಿಗೆ ರಕ್ಷಣಾ ಉಪಕರಣಗಳನ್ನು ರಫ್ತು ಮಾಡಿದೆ ರಫ್ತು ಮಾಡುವವರ ಸಂಖ್ಯೆಯು 128 ಇದ್ದಿದ್ದು 145ಕ್ಕೆ ತಲುಪಿದೆ.

## ❖ ಏರ್‌ಟೆಲ್: 2ನೇ ಅತಿದೊಡ್ಡ ದೂರಸಂಪರ್ಕ ಕಂಪನಿ

**ಸಂದರ್ಭ: ದೂರಸಂಪರ್ಕ ಸೇವಾ ಕಂಪನಿ ಭಾರ್ತಿ ಏರ್‌ಟೆಲ್, 65 ಕೋಟಿ ಚಂದಾದಾರರನ್ನು ಹೊಂದಿದ್ದು, ಜಗತ್ತಿನ ಎರಡನೇ ಅತಿದೊಡ್ಡ ದೂರಸಂಪರ್ಕ ಸೇವಾ ಕಂಪನಿಯಾಗಿ ಹೊರಹೊಮ್ಮಿದೆ.**

- ಜಾಗತಿಕ ದೂರ ಸಂವಹನದ ಉದ್ದಿಮೆಯನ್ನು ಪ್ರತಿನಿಧಿಸುವ ಜಿಎಸ್‌ಎಂಎನ ಮಾರ್ಚ್ 31ರವರೆಗಿನ ಅಂಕಿ-ಅಂಶಗಳ ಪ್ರಕಾರ, ಭಾರ್ತಿ ಏರ್‌ಟೆಲ್ ಜಾಗತಿಕವಾಗಿ ಎರಡನೇ ಅತಿ ಹೆಚ್ಚು ಮೊಬೈಲ್ ಬಳಕೆದಾರರನ್ನು ಹೊಂದಿದೆ. ಕಂಪನಿಯು ಭಾರತ ಮತ್ತು ಆಫ್ರಿಕಾದಲ್ಲಿ ಕಾರ್ಯಾಚರಣೆ ಹೊಂದಿದೆ.
- ಕಂಪನಿಯು ಭಾರತದಲ್ಲಿ 36.8 ಕೋಟಿ ಮತ್ತು ಆಫ್ರಿಕಾದ 14 ದೇಶಗಳಲ್ಲಿ 17.9 ಕೋಟಿಗೂ ಅಧಿಕ ಮೊಬೈಲ್ ಬಳಕೆದಾರರನ್ನು ಹೊಂದಿದೆ.

## ❖ ಗುರಿ ಮೀರಿದ ಪರೋಕ್ಷ ತೆರಿಗೆ ಸಂಗ್ರಹ

**ಸಂದರ್ಭ: ಪರೋಕ್ಷ ತೆರಿಗೆ ಸಂಗ್ರಹ ಪ್ರಮಾಣವು 2025-26ರಲ್ಲಿ ಕೇಂದ್ರ ಸರ್ಕಾರದ ಗುರಿಗಿಂತ ತುಸು ಹೆಚ್ಚಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.**

- ಸೀಮಾ ಸುಂಕ, ಎಕ್ಸೈಸ್ ಸುಂಕ ಮತ್ತು ಜಿಎಸ್‌ಟಿ ಒಳಗೊಂಡ ಪರೋಕ್ಷ ತೆರಿಗೆಗಳ ಸಂಗ್ರಹವು ಪರಿಷ್ಕೃತ ಅಂದಾಜಿನ ಪ್ರಕಾ 2025-26ರಲ್ಲಿ ₹15.52 ಲಕ್ಷ ಕೋಟಿ. ಇದರಲ್ಲಿ ಸೀಮಾಸುಂಕದ ಮೊತ್ತ ₹2.58 ಲಕ್ಷ ಕೋಟಿ, ಎಕ್ಸೈಸ್ ಸುಂಕದ ಮೊತ್ತ ₹3.38 ಲಕ್ಷ ಕೋಟಿ ಹಾಗೂ ಕೇಂದ್ರ ಜಿಎಸ್‌ಟಿ ಮೊತ್ತ ₹9.58 ಲಕ್ಷ ಕೋಟಿ.
- ಸೀಮಾ ಸುಂಕದ ಮೂಲಕ ಸಂಗ್ರಹ ಆಗಿರುವ ಮೊತ್ತವು ಪರಿಷ್ಕೃತ ಅಂದಾಜಿನ ಶೇ 102ರಷ್ಟು ಆಗಿದೆ. ಎಕ್ಸೈಸ್ ಸುಂಕದ ಮೊತ್ತವು ಪರಿಷ್ಕೃತ ಅಂದಾಜಿನ ಶೇ 101ರಷ್ಟು ಹಾಗೂ ಕೇಂದ್ರ ಜಿಎಸ್‌ಟಿ ಸಂಗ್ರಹವು ಪರಿಷ್ಕೃತ ಅಂದಾಜಿನ ಶೇ 100.8ರಷ್ಟು ಆಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

- ಆದರೆ, ಪಾನ್ ಮಸಾಲಾ ತಯಾರಿಕೆಯ ಮೇಲೆ ವಿಧಿಸುವ ಆರೋಗ್ಯ ಹಾಗೂ ರಾಷ್ಟ್ರೀಯ ಭದ್ರತಾ ಸೆಸ್ ಮೂಲಕ ಸಂಗ್ರಹ ಆಗಿರುವ ಮೊತ್ತವು ಗುರಿಯ ಶೇ 63ರಷ್ಟು ಮಾತ್ರ ಆಗಿದೆ.

## ❖ ಬುಕರ್: ಅಂತಿಮ ಪಟ್ಟಿಯಲ್ಲಿ ಭಾರತ ಮೂಲದ ಪದ್ಮಾ ವಿಶ್ವನಾಥನ್

**ಸಂದರ್ಭ: ಭಾರತ ಮೂಲದ ಕೆನಡಿಯನ್-ಅಮೆರಿಕನ್ ಬರಹಗಾರ್ತಿ ಪದ್ಮಾ ವಿಶ್ವನಾಥನ್ ಅವರು ಪೋರ್ಚುಗೀಸ್ ಭಾಷೆಯ ಕಾದಂಬರಿಯನ್ನು ಇಂಗ್ಲಿಷ್ ಗೆ ಅನುವಾದ ಮಾಡಿದ್ದಕ್ಕಾಗಿ 2026ರ ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿಯ ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದಾರೆ.**


ಪದ್ಮಾ ವಿಶ್ವನಾಥನ್

- ಬ್ರೆಜಿಲ್ ಲೇಖಕಿ ಅನಾ ಪೌಲಾ ಮೈಯಾ ಅವರು ಪೋರ್ಚುಗೀಸ್ ಭಾಷೆಯಲ್ಲಿ ರಚಿಸಿರುವ 'ಆನ್ ಅರ್ಥ್ ಆಸ್ ಇಟ್ ಈಸ್ ಬಿನೀತ್ ಕಾದಂಬರಿಯನ್ನು ಪದ್ಮಾ ಅವರು ಇಂಗ್ಲಿಷ್ ಗೆ ಅನುವಾದಿಸಿದ್ದಾರೆ.
- ಅಂತಿಮ ಪಟ್ಟಿಯಲ್ಲಿರುವ ಆರು ಪುಸ್ತಕಗಳನ್ನು ಮಂಗಳವಾರ ಘೋಷಿಸಲಾಯಿತು. ಇದರಲ್ಲಿ ಮಹಿಳೆಯರೇ ಪ್ರಾಬಲ್ಯ ಸಾಧಿಸಿದ್ದು, ಆರು ಸಾಹಿತಿಗಳಲ್ಲಿ ಐವರು ಹಾಗೂ ಅನುವಾದಕರಲ್ಲಿ 4 ಮಂದಿ ಮಹಿಳೆಯರೇ ಆಗಿದ್ದಾರೆ.
- ಅಂತಿಮ ಪಟ್ಟಿಯಲ್ಲಿರುವ ಎಲ್ಲಾ ಆರೂ ಪುಸ್ತಕಗಳ ಕೃತಿಕಾರರು ಹಾಗೂ ಇಂಗ್ಲಿಷ್ ಅನುವಾದಕರಿಗೆ ಲಾ ₹6.14 ಲಕ್ಷವನ್ನು ನೀಡಲಾಗುತ್ತದೆ. ಅಂತಿಮ ಸುತ್ತಿನಲ್ಲಿ ಗೆಲ್ಲುವ ಕೃತಿಗೆ 50 ಸಾವಿರ ಪೌಂಡ್ (₹61.50 ಲಕ್ಷಕ್ಕೂ ಹೆಚ್ಚು) ಬಹುಮಾನ ದೊರೆಯಲಿದೆ.
- ಲಂಡನ್ ಟೇಟ್ ಮಾಡರ್ನ್‌ನಲ್ಲಿ ಮೇ 9ರಂದು ನಡೆಯುವ ಸಮಾರಂಭದಲ್ಲಿ ವಿಜೇತರನ್ನು ಘೋಷಿಸಲಾಗುತ್ತದೆ.
- ಕನ್ನಡದ ಲೇಖಕಿ ಬಾನು ಮುಷ್ತಾಕ್ ಅವರ ಹಾರ್ಟ್ ಲ್ಯಾಂಪ್ ಕಥಾ ಸಂಕಲನದ ಇಂಗ್ಲಿಷ್ ಅನುವಾದಕ್ಕೆ ದೀಪಾ ಭಾಸ್ತಿ ಅವರಿಗೆ 2025ರ 'ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ' ಒಲಿದು ಬಂದಿತ್ತು.

## ❖ ಗೆಲುವಿನೊಡನೆ ಅಗ್ರಸ್ಥಾನಕ್ಕೆ ಸಿಂದರೋವ್: ಪ್ರಶಸ್ತಿಗೆ ನೆಚ್ಚಿನ ಆಟಗಾರ

- ಅಮೆರಿಕದ ಫ್ಯಾಬಿಯಾನೊ ಕರುವಾನ ಅವರನ್ನು ಬುಧವಾರ ಚಾಂಪಿಯನ್ ಜಾವೊಖಿರ್ ಸಿಂದರೋವ್ ಅವರು ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನ ನಂತರ ಅಗ್ರಸ್ಥಾನ ಕ್ಕೇರಿದರು. 20 ವರ್ಷ ವಯಸ್ಸಿನ ಸಿಂದರೋವ್ 4 ಸುತ್ತುಗಳಿಂದ 3.5 ಪಾಯಿಂಟ್ ಕಲೆಹಾಕಿದ್ದಾರೆ.
- ಓಪನ್ ವಿಭಾಗದಲ್ಲಿ ಮೂರನೇ ಸುತ್ತಿನವರೆಗೆ ಅಗ್ರಸ್ಥಾನ ಹಂಚಿಕೊಂಡಿದ್ದ ಕರುವಾನ (2.5) ಈಗ ಎರಡನೇ ಮಂದಿ ಸ್ಥಾನದಲ್ಲಿದ್ದಾರೆ.

## ❖ ರವಿವರ್ಮನ ಕಲಾಕೃತಿಗೆ ₹167 ಕೋಟಿ

**ಸಂದರ್ಭ: ಭಾರತದ ಶ್ರೇಷ್ಠ ಚಿತ್ರಕಾರ ರಾಜಾ ರವಿವರ್ಮ ರಚಿಸಿದ್ದ ಯಶೋದಾ ಮತ್ತು ಕೃಷ್ಣನ ತೈಲವರ್ಣ ಚಿತ್ರವು ದಾಖಲೆಯ ₹167.20 ಕೋಟಿಗೆ ಹರಾಜಾಗಿದೆ. ಈ ಮೂಲಕ ಅತಿ ಹೆಚ್ಚಿನ ಬೆಲೆಗೆ ಹರಾಜಿನಲ್ಲಿ ಮಾರಾಟವಾದ ಆಧುನಿಕ ಭಾರತದ ಚಿತ್ರ ಎಂಬ ದಾಖಲೆಯನ್ನೂ ಬರೆದಿದೆ.**

- ಮುಂಬೈಯಲ್ಲಿ ನಡೆದ 'ಸ್ಯಾಫ್ರನ್‌ಆರ್ಟ್ಸ್ ಸ್ಪ್ರಿಂಗ್ ಲೈವ್' ಹರಾಜಿನಲ್ಲಿ, ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಡಾ. ಸೈರಸ್ ಎಸ್. ಪೂನವಾಲಾ ಅವರು ಕಲಾಕೃತಿಯನ್ನು ಖರೀದಿಸಿದರು.

Dr. Rajkumar IAS/KAS Academy

- ಕಳೆದ ವರ್ಷ ನಡೆದ ಹರಾಜಿನಲ್ಲಿ ಎಂ.ಎಫ್ ಹುಸೇನ್ ಅವರ ಚಿತ್ರವು ₹118 ಕೋಟಿಗೆ ಹರಾಜಾಗಿತ್ತು. ಇದನ್ನು ಹಿಂದಿಕ್ಕಿ ರವಿವರ್ಮನ ಚಿತ್ರವು ಹೊಸ ದಾಖಲೆ ಸೃಷ್ಟಿಸಿದೆ. ₹80 ಕೋಟಿಯಿಂದ ₹120 ಕೋಟಿವರೆಗೆ ಈ ಚಿತ್ರ ಹರಾಜಾಗಬಹುದು ಎಂದು ಮೊದಲು ಅಂದಾಜಿಸಲಾಗಿತ್ತು.
- 'ರಾಜಾ ರವಿವರ್ಮ ರಚಿಸಿರುವ ಯಶೋದಾ ಮತ್ತು ಕೃಷ್ಣರ ಕಲಾಕೃತಿಯನ್ನು ಖರೀದಿಸಲು ಹಾಗೂ ಸಂರಕ್ಷಿಸಲು ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯ ಈ ಚಿತ್ರವು ನಮ್ಮ ರಾಷ್ಟ್ರದ ಸಂಪತ್ತು ಇದು ನಿರಂತರವಾಗಿ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಾಗುವಂತೆ ಮಾಡಲು ಪ್ರಯತ್ನಿಸುತ್ತೇನೆ' ಎಂದು ಸೈರನ್ ಹೇಳಿದರು.
- ಇದು 1890ರ ದಶಕದಲ್ಲಿ ರವಿವರ್ಮ ರಚಿಸಿರುವ ಸುಂದರ ಚಿತ್ರಕಲೆ. ಈ ಚಿತ್ರದಲ್ಲಿ ಯಶೋದಾ ಹಾಲು ಕರೆಯುತ್ತಿದ್ದಾಳೆ ಬಾಲ ಕೃಷ್ಣನು ತಾಯಿಯ ಬೆನ್ನಿಗೆ ಒರಗಿ ನಿಂತು, ಕೈಯಲ್ಲಿ ಲೋಟ ಹಿಡಿದು ಹಾಲು ಕೊಡುವಂತೆ ಕೇಳುತ್ತಿದ್ದಾನೆ. ಇದು ತಾಯಿ ಮಗುವಿನ ನಡುವಿನ ಬಾಂಧವ್ಯವನ್ನು ಸೂಕ್ಷ್ಮವಾಗಿ ಕಟ್ಟಿಕೊಟ್ಟಿದೆ ಚಿತ್ರವೂ ನೈಜತೆಯನ್ನು ಮೈದುಂಬಿಕೊಂಡಿದೆ.



₹167 ಕೋಟಿಗೆ ಹರಾಜಾಗಿರುವ, ರಾಜಾ ರವಿವರ್ಮ ರಚಿಸಿರುವ ಯಶೋದಾ– ಕೃಷ್ಣರ ಚಿತ್ರ

- ಇದು ಕೇವಲ ವ್ಯಾಪಾರವಲ್ಲ ಬದಲಾಗಿ ಭಾರತೀಯ ಕಲೆಯ ಸಾಂಸ್ಕೃತಿಕ ಮತ್ತು ಭಾವನಾತ್ಮಕ ಪ್ರತಿಧ್ವನಿ ಇದ್ದಂತೆ' ಎಂದು ಸ್ಯಾಫ್ರನ್‌ಆರ್ಟ್ಸ್ ಅಧ್ಯಕ್ಷ ಹಾಗೂ ಸಹ ಸಂಸ್ಥಾಪಕ ಮಿನಲ್ ವಾಜಿರಾಣಿ ತಿಳಿಸಿದರು.

## ❖ ಎರಡನೇ ಚಿನ್ನ ಗೆದ್ದ ರೀತುಶ್ರೀ, ನಾಗಿಣಿ

**ಸಂದರ್ಭ: ಕರ್ನಾಟಕದ ರೀತುಶ್ರೀ ಮತ್ತು ನಾಗಿಣಿ ಅವರು ಖೇಲೊ ಇಂಡಿಯಾ ಆದಿವಾಸಿ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ಗುರುವಾರ ತಮ್ಮ ಎರಡನೇ ಚಿನ್ನ ಗೆದ್ದುಕೊಂಡರು. ಆತಿಥೇಯ ಛತ್ತೀಸಗಢ ತಂಡವು ಫೈನಲ್‌ನಲ್ಲಿ 1-0 ಗೋಲಿನಿಂದ ಜಾರ್ಖಂಡ್ ತಂಡವನ್ನು ಸೋಲಿಸಿ ಮಹಿಳೆಯರ ವಿಭಾಗದ ಫುಟ್‌ಬಾಲ್ ಚಿನ್ನ ಗೆದ್ದುಕೊಂಡಿತು.**


- ಛತ್ತೀಸಗಢ ತಂಡದಲ್ಲಿದ್ದ ಏಕೈಕ ಅಂತರರಾಷ್ಟ್ರೀಯ ಆಟಗಾರ್ತಿ ಹಾಗೂ ನಾಯಕಿ ಕಿರಣ್ ಪಿಸ್ತಾ ಗಳಿಸಿದ ಗೋಲು ನಿರ್ಣಾಯಕವಾಯಿತು.
- ಜಗದಾಳಪುರದ ಕ್ರೀಡಾ ಪರಿಸರ್ ಸಂಕೀರ್ಣದಲ್ಲಿ ನಡೆಯುತ್ತಿರುವ ಅಥ್ಲೆಟಿಕ್ ಕೂಟದಲ್ಲಿ ಕರ್ನಾಟಕದ ರೀತುಶ್ರೀ 200 ಮೀ ಓಟವನ್ನು 25 87 ಸೆ.ಗಳಲ್ಲಿ ಕ್ರಮಿಸಿ ಚಿನ್ನ ಗೆದ್ದರು. ಈ ಮೊದಲು ಅವರು 400 ಮೀ. ಓಟದಲ್ಲಿ ವಿಜಯಿಯಾಗಿದ್ದರು.
- ಬುಧವಾರ 800 ಮೀ ಓಟದಲ್ಲಿ ಚಿನ್ನ ಗೆದ್ದಿದ್ದ ನಾಗಿಣಿ 1,500 ಮೀ. ಓಟದಲ್ಲೂ ಮೊದಲಿಗರಾದರು. ಅವರು 4ನಿ.43.87 ಸೆ.ಗಳಲ್ಲಿ ಗುರಿತಲುಪಿದರು. ಕರ್ನಾಟಕ ಒಟ್ಟು 23 ಚಿನ್ನ ಗೆದ್ದಂತಾಗಿದೆ. ಜೊತೆಗೆ 8 ಬೆಳ್ಳಿ, 7 ಕಂಚಿನ ಪದಕ ಸೇರಿದಂತೆ ಒಟ್ಟು 38 ಪದಕಗಳನ್ನು ಬಾಚಿ ಪದಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.
- ಅಥ್ಲೆಟಿಕ್ಸ್‌ನಲ್ಲಿ ಹೆಚ್ಚಿನ ಪದಕ ಬಾಚಿರುವ ಒಡಿಶಾ ತಂಡ ಎರಡನೇ ಸ್ಥಾನದಲ್ಲಿದ್ದು 20 ಚಿನ್ನ, 13 ಬೆಳ್ಳಿ. 21 ಕಂಚಿನ ಪದಕ ಗಳಿಸಿ ಕರ್ನಾಟಕಕ್ಕೆ ಪೈಪೋಟಿ ಒಡ್ಡಿದೆ.

## ❖ 'ಭಾಷೆಯ ಶೈಕ್ಷಣಿಕ ಮಹತ್ವಕ್ಕೆ ಪೆಟ್ಟು ನೀಡುವುದು ಬೇಡ'ನಿರ್ಧಾರ ಮರುಪರಿಶೀಲಿಸಲು ಸರ್ಕಾರಕ್ಕೆ ಸಲಹೆ: ಹಿಂದಿ 'ಗ್ರೇಡ್': ಲೋಕಭವನ ಆಕ್ಷೇಪ

**ಸಂದರ್ಭ: ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಅಂಕಗಳ ಬದಲು ಗ್ರೇಡ್ ನೀಡುವ ರಾಜ್ಯ ಸರ್ಕಾರದ ನಿರ್ಧಾರದ ನಂತರ ವಿವಿಧ ಸಂಘಟನೆಗಳ ನಡುವೆ ಆರಂಭವಾದ ಪರ-ವಿರೋಧ ವಾಗ್ವಾದ, ಹೋರಾಟ ಈಗ ಲೋಕಭವನನ್ನೂ ತಲುಪಿದೆ.**

- ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆ ಬರೆಯುವ ಮಕ್ಕಳ ಫಲಿತಾಂಶ ಪ್ರಕಟಿಸುವಾಗ ಅಂಕಗಳ ಬದಲು ಗ್ರೇಡ್ ನೀಡುವ ನಿರ್ಧಾರವನ್ನು ಪುನರ್ ಪರಿಶೀಲಿಸುವಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಅವರು ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದಾರೆ.
- ತೃತೀಯ ಭಾಷೆಯು ರಾಜ್ಯ ಪಠ್ಯಕ್ರಮ ಓದುವ ವಿದ್ಯಾರ್ಥಿಗಳ ಭಾಷಾ ವೈವಿಧ್ಯ, ಅರಿವು ಹಾಗೂ ಬೌದ್ಧಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಅಂಕಗಳ ಬದಲಿಗೆ ಗ್ರೇಡ್ ನೀಡುವ ಪದ್ಧತಿಯಿಂದ ಹಿಂದಿ ಭಾಷೆಯ ಶೈಕ್ಷಣಿಕ ಮಹತ್ವ ಕುಗ್ಗುವ ಸಾಧ್ಯತೆ ಇದೆ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದಿಯನ್ನು ಗಂಭೀರವಾಗಿ ತೆಗೆದುಕೊಳ್ಳದೇ ಇರುವ ಸಾಧ್ಯತೆಯೂ ಇದೆ. ಹಾಗಾಗಿ, ರಾಜ್ಯ ಸರ್ಕಾರ ಈ ಹಿಂದೆ ಇದ್ದಂತೆ ತೃತೀಯ ಭಾಷೆಗೆ ಅಂಕ ನೀಡುವ ಪದ್ಧತಿಯನ್ನೇ ಉಳಿಸಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ. ಈ ಕುರಿತು 'ಸ್ಥಳೀಯ ಭಾಷೆಗಳ ಸಂರಕ್ಷಣಾ ಸಂಘ' ಸಲ್ಲಿಸಿದ ಮನವಿಯ ಕುರಿತೂಪತ್ರದಲ್ಲಿ ಉಲ್ಲೇಖಿಸಿದ್ದಾರೆ.
- ಹಿಂದಿ ಭಾಷೆಯ ಪ್ರಾಮುಖ್ಯ ಕಡಿಮೆ ಮಾಡುವುದರಿಂದ ದೀರ್ಘಕಾಲೀನ ಪರಿಣಾಮ ಬೀರುತ್ತವೆ. ಶಿಕ್ಷಕರು, ಪೋಷಕರು ಮತ್ತು ಶಿಕ್ಷಣ ತಜ್ಞರಲ್ಲಿ ಆತಂಕ ಆರಂಭವಾಗಿದೆ. ಶಾಲಾ ಶಿಕ್ಷಣದ ಒಟ್ಟಾರೆ ಗುಣಮಟ್ಟ, ದೇಶದ ಇತರೆ ರಾಜ್ಯಗಳ ಜತೆಗಿನ ಭವಿಷ್ಯದ ಸಂವಹನ, ಉದ್ಯೋಗದ ಅವಕಾಶಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎಂಬ ಆತಂಕವೂ ವ್ಯಕ್ತವಾಗಿದೆ. ಶಿಕ್ಷಣ ಕ್ಷೇತ್ರದ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಅಂಶಗಳನ್ನು ಪರಿಗಣಿಸಿ ಸಮಗ್ರವಾಗಿ ಪರಿಶೀಲಿಸಬೇಕು. ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ಮುಖ್ಯಸ್ಥರ ಜತೆ ಚರ್ಚಿಸಿ, ವಿದ್ಯಾರ್ಥಿಗಳು ರಾಜ್ಯದ ಶೈಕ್ಷಣಿಕ ಭವಿಷ್ಯ ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪ್ರಭು ಶಂಕರ್ ಪತ್ರದಲ್ಲಿ ವಿವರಿಸಿದ್ದಾರೆ.

### ಸಿಬಿಎಸ್‌ಇ: ತ್ರಿಭಾಷಾ ಸೂತ್ರ ಕಡ್ಡಾಯ



ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 2026–27ನೇ ಶೈಕ್ಷಣಿಕ ವರ್ಷಕ್ಕೆ ಹೊಸ ಪಠ್ಯಕ್ರಮವನ್ನು ಜಾರಿಗೆ ತಂದಿದ್ದು, ಇದರ ಪ್ರಕಾರ 6ನೇ ತರಗತಿಯಿಂದ ಕಡ್ಡಾಯವಾಗಿ ತ್ರಿಭಾಷಾ ಸೂತ್ರವನ್ನು ಅಳವಡಿಸಲಾಗುತ್ತದೆ.

ಇದರೊಂದಿಗೆ 9ನೇ ತರಗತಿಯ ವಿದ್ಯಾರ್ಥಿಗಳು ಗಣಿತ ಮತ್ತು ವಿಜ್ಞಾನ ವಿಷಯವನ್ನು ಎರಡು ಹಂತಗಳಲ್ಲಿ ಅಧ್ಯಯನ ನಡೆಸಬಹುದಾದ ಹೊಸ ಅವಕಾಶವನ್ನು ಒದಗಿಸಲಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದರು. ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅಡಿಯಲ್ಲಿ ಕಡ್ಡಾಯಗೊಳಿಸಲಾಗಿರುವ ತ್ರಿಭಾಷಾ ಸೂತ್ರವನ್ನು 6ನೇ ತರಗತಿಯಿಂದ ಪ್ರಾರಂಭಿಸಲಾಗುವುದು (ಮೂರನೇ ಭಾಷೆ ಕಡ್ಡಾಯ). ಈ ವಿಷಯಗಳನ್ನು ಆರ್‌1, ಆರ್‌2 ಮತ್ತು ಆರ್‌3 ಎಂದು ಗುರುತಿಸಲಾಗಿದೆ. ಆದರೆ 9ನೇ ತರಗತಿಯ ವಿದ್ಯಾರ್ಥಿಗಳಿಗೆ ಮೂರನೇ ಭಾಷೆಯನ್ನು ಇನ್ನೂ ಕಡ್ಡಾಯಗೊಳಿಸಿಲ್ಲ. ರಾಷ್ಟ್ರೀಯ ಪಠ್ಯಕ್ರಮ ರೂಪುರೇಷೆ (ಎನ್‌ಸಿಎಫ್) ಶಿಫಾರಸು ಮಾಡಿರುವಂತೆ, ಮೂರರ ಪೈಕಿ ಎರಡು ಭಾರತದ ಸ್ಥಳೀಯ ಭಾಷೆಗಳಾಗಿರಬೇಕು.

9ನೇ ತರಗತಿಯ ವಿದ್ಯಾರ್ಥಿಗಳು ಕಡ್ಡಾಯವಾಗಿ ವಿಜ್ಞಾನ ಮತ್ತು ಗಣಿತ ವಿಷಯಗಳನ್ನು ಅಧ್ಯಯನ ಮಾಡುತ್ತಾರೆ. ಅಲ್ಲದೇ ಈ ಎರಡೂ ವಿಷಯಗಳಲ್ಲಿ ಐಚ್ಛಿಕವಾಗಿಯೂ, ಅಧ್ಯಯನ ಮಾಡಲೂ ಅವಕಾಶವಿದೆ.

ಎಲ್ಲಾ ವಿದ್ಯಾರ್ಥಿಗಳು ಗಣಿತ ಮತ್ತು ವಿಜ್ಞಾನದ ಮೂಲ ಪಠ್ಯಕ್ರಮವನ್ನು ಕಡ್ಡಾಯವಾಗಿ ಅಧ್ಯಯನ ಮಾಡಬೇಕು. ಈ ಪರೀಕ್ಷೆಗಳು ತಲಾ 80 ಅಂಕಗಳಿಗೆ ನಡೆಯಲಿದ್ದು, ಪರೀಕ್ಷಾ ಅವಧಿ 3 ಗಂಟೆಯಾಗಿರುತ್ತದೆ. ▸11

ಆದರೆ ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಬಯಸುವ ವಿದ್ಯಾರ್ಥಿಗಳು ಐಚ್ಛಿಕ ಹಂತವನ್ನು ಆಯ್ಕೆ ಮಾಡಿಕೊಳ್ಳಬಹುದು. ಇದು 25 ಅಂಕಗಳಿಗೆ ನಡೆಯುವ 1 ಗಂಟೆಯ ಪರೀಕ್ಷೆ ಆಗಿರುತ್ತದೆ.

ಐಚ್ಛಿಕ ಹಂತದಲ್ಲಿ ನಡೆಯುವ ಪರೀಕ್ಷೆಯ ಅಂಕಗಳನ್ನು ಒಟ್ಟಾರೆ ಫಲಿತಾಂಶಕ್ಕೆ ಪರಿಗಣಿಸಲಾಗುವುದಿಲ್ಲ. ಆದರೆ ಶೇ 50 ಅಥವಾ ಅದಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಅಂಕಪಟ್ಟಿಯಲ್ಲಿ ಈ ಅಂಕಗಳನ್ನು ತೋರಿಸಲಾಗುತ್ತದೆ.

9 ಮತ್ತು 10ನೇ ತರಗತಿಗೆ, ಸಮಸ್ಯೆ ಬಗೆಹರಿಸುವ ಕೌಶಲ (ಕಂಪ್ಯೂಟೇಷನಲ್ ಥಿಂಕಿಂಗ್), ಕೃತಕ ಬುದ್ಧಿಮತ್ತೆ (ಎ.ಐ) ವಿಷಯಗಳನ್ನೂ ಕಡ್ಡಾಯಗೊಳಿಸಲಾಗಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಈ ವಿಷಯಗಳನ್ನು ಆಂತರಿಕ ಮೌಲ್ಯಮಾಪನಕ್ಕಾಗಿ ಪ್ರಾಯೋಗಿಕವಾಗಿ ಅಳವಡಿಸಲಾಗುವುದು. 2029ರಿಂದ ಈ ವಿಷಯಗಳು 10ನೇ ತರಗತಿಯ ಬೋರ್ಡ್ ಪರೀಕ್ಷೆಗೆ ಕಡ್ಡಾಯ ವಿಷಯಗಳಾಗಿರುತ್ತವೆ.

ಹೊಸ ಪಠ್ಯಕ್ರಮದಲ್ಲಿ ಕಲಾ ಶಿಕ್ಷಣ, ವೃತ್ತಿಪರ ಶಿಕ್ಷಣ ಹಾಗೂ ದೈಹಿಕ ಶಿಕ್ಷಣವನ್ನು 9 ಮತ್ತು 10ನೇ ತರಗತಿಗೆ ಕಡ್ಡಾಯ ವಿಷಯಗಳನ್ನಾಗಿ ಪರಿಚಯಿಸಲಾಗುತ್ತಿದೆ. 2027–28ರ ಶೈಕ್ಷಣಿಕ ಅವಧಿಯಿಂದ 10ನೇ ತರಗತಿಯ ಬೋರ್ಡ್ ಪರೀಕ್ಷೆಗೆ ವೃತ್ತಿಪರ ಶಿಕ್ಷಣವನ್ನು ಕಡ್ಡಾಯಗೊಳಿಸಲಾಗುತ್ತದೆ ಎಂದು ಅಧಿಕಾರಿಗಳು ವಿವರಿಸಿದರು.

- ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ 2026ರ ಪರೀಕ್ಷೆಯಿಂದಲೇ ಅನ್ವಯವಾಗುವಂತೆ ಮೂರನೇ ಭಾಷಾ ವಿಷಯಗಳಿಗೆ ಅಂಕ ನೀಡುವ ಪದ್ಧತಿ ಕೈಬಿಟ್ಟು, ಗ್ರೇಡ್ ನಮೂದಿಸುವುದಾಗಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾರ್ಚ್ 27ರಂದು ಘೋಷಣೆ ಮಾಡಿದ್ದರು. ಸರ್ಕಾರದ ನಿರ್ಧಾರಕ್ಕೆ ಹಿಂದಿ ಶಿಕ್ಷಕರು, ಹಿಂದಿ ಪರ ಸಂಘಟನೆಗಳು, ಬಿಜೆಪಿಯ ಕೆಲವು ನಾಯಕರು ವಿರೋಧ ವ್ಯಕ್ತಪಡಿಸಿದ್ದರು.

## ❖ ಹೆಚ್ಚಿನ ಕಚ್ಚಾ ತೈಲ, ಅನಿಲ ಭಾರತಕ್ಕೆ ರಷ್ಯಾ ಭರವಸೆ

**ಸಂದರ್ಭ: ಭಾರತಕ್ಕೆ ಕಚ್ಚಾ ತೈಲ ಹಾಗೂ ನೈಸರ್ಗಿಕ ಅನಿಲದ ಪೂರೈಕೆಯನ್ನು ಹೆಚ್ಚು ಮಾಡಲು ಸಿದ್ಧ ಇರುವುದಾಗಿ ರಷ್ಯಾ ಹೇಳಿದೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಮರವು ಜಾಗತಿಕ ಕಚ್ಚಾ ತೈಲ ಮಾರುಕಟ್ಟೆಯಲ್ಲಿ ತೀವ್ರ ಅಸ್ಥಿರತೆ ಸೃಷ್ಟಿಸಿರುವ ಹೊತ್ತಿನಲ್ಲಿ ರಷ್ಯಾ ಈ ಭರವಸೆ ಇತ್ತಿದೆ.**

- ರಷ್ಯಾದ ಪ್ರಥಮ ಉಪ ಪ್ರಧಾನಿ ಡೆನಿಸ್ ಮಂಟುರೊವ್ ಅವರು ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೋಬಾಲ್ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರ ಜೊತೆ ಗುರುವಾರ ನಡೆಸಿದ ಸಭೆಯಲ್ಲಿ ಈ ವಿಚಾರವು ಪ್ರಮುಖವಾಗಿ ಪ್ರಸ್ತಾಪ ಆಗಿದೆ ಎಂದು ಮೂಲಗಳು ತಿಳಿಸಿವೆ.
- ಮಂಟುರೊವ್ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಜೊತೆಗೂ ಮಾತುಕತೆ ನಡೆಸಿದ್ದಾರೆ. ನಂತರ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೂಡ ಭೇಟಿ ಮಾಡಿದ್ದರು.
- ತೈಲ ಹಾಗೂ ಅನಿಲ ವಲಯದಲ್ಲಿ ದ್ವಿಪಕ್ಷೀಯ ಸಹಕಾರದ ಬಗ್ಗೆ ಮಾತುಕತೆ ಸಂದರ್ಭದಲ್ಲಿ ವಿಶೇಷ ಗಮನ ನೀಡಲಾಯಿತು ಎಂದು ರಷ್ಯಾದ ಪ್ರಕಟಣೆ ತಿಳಿಸಿದೆ. 'ಭಾರತದ ಮಾರುಕಟ್ಟೆಗೆ ಕಚ್ಚಾ ತೈಲ ಹಾಗೂ ದ್ರವೀಕೃತ ನೈಸರ್ಗಿಕ ಅನಿಲದ (ಎಲ್‌ಎನ್‌ಜಿ) ಪೂರೈಕೆಯನ್ನು ಸ್ಥಿರ ಪ್ರಮಾಣದಲ್ಲಿ ಹೆಚ್ಚಿಸುವ ಸಾಮರ್ಥ್ಯವು ರಷ್ಯಾದ ಕಂಪನಿಗಳಿಗೆ ಇದೆ ಎಂಬುದನ್ನು ಮಂಟುರೊವ್ ಅವರು ಖಚಿತಪಡಿಸಿದ್ದಾರೆ' ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ
- ಎರಡೂ ದೇಶಗಳಿಗೆ ಅನುಕೂಲ ಕಲ್ಪಿಸುವಂತಹ ವ್ಯಾಪಾರ, ಹೂಡಿಕೆ ಮತ್ತು ಕೈಗಾರಿಕಾ ಸಹಕಾರವನ್ನು ಹೆಚ್ಚು ಮಾಡುವುದು ಕೂಡ ಸಭೆಯಲ್ಲಿ ಚರ್ಚೆಯಾದ ಅಂಶವಾಗಿದೆ ಎಂದು ಅದು ಹೇಳಿದೆ.
- ಭಾರತಕ್ಕೆ ರಸಗೊಬ್ಬರ ಪೂರೈಕೆ ಮಾಡುವುದನ್ನು ರಷ್ಯಾ 2025ರ ಅಂತ್ಯದ ಹೊತ್ತಿಗೆ ಶೇ 40ರಷ್ಟು ಹೆಚ್ಚು ಮಾಡಿದೆ. ಭಾರತದ ಅಗತ್ಯವನ್ನು ಪೂರೈಸಲು ರಷ್ಯಾ ಸಿದ್ಧವಿದೆ ಎಂದು ಮಂಟುರೊವ್ ಹೇಳಿದ್ದಾರೆ ಎಂಬುದಾಗಿಯೂ ಪ್ರಕಟಣೆಯು ತಿಳಿಸಿದೆ.

## ❖ 'ಸಂಜೀವಿನಿ'ಗೆ ತೊಡಕಾದ ನಿರಾಸಕ್ತಿ

**ಸಂದರ್ಭ: ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ' ಒಪ್ಪಿಕೊಳ್ಳಲು ಬಹುತೇಕ ಖಾಸಗಿ ಆಸ್ಪತ್ರೆಗಳು ನಿರಾಸಕ್ತಿ ತೋರುತ್ತಿರುವುದು ರಾಜ್ಯ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರ ನಗದುರಹಿತ ಚಿಕಿತ್ಸೆಗೆ ತೊಡಕಾಗಿದೆ.**

- ರಾಜ್ಯ ಸರ್ಕಾರ ಹಲವು ವರ್ಷಗಳ ಹಿಂದೆಯೇ ಯೋಜನೆ ರೂಪಿಸಿತ್ತಾದರೂ 2025ರ ಅ.1ರಿಂದ ಯೋಜನೆಯನ್ನು ಅಧಿಕೃತವಾಗಿ ಜಾರಿಗೊಳಿಸಲಾಗಿದೆ. ಯೋಜನೆ ಜಾರಿಗೂ ಮೊದಲು ಒಂದುಸಾವಿರಕ್ಕೂ ಹೆಚ್ಚು ಆಸ್ಪತ್ರೆಗಳು ನಗದು ರಹಿತ ಚಿಕಿತ್ಸೆ ನೀಡಲು ಸರ್ಕಾರದ ಜತೆ ಒಪ್ಪಂದಮಾಡಿಕೊಳ್ಳುವ ಕುರಿತು ಭರವಸೆ ನೀಡಿದ್ದವು.
- ಆದರೆ, ಯೋಜನೆ ಆರಂಭವಾಗಿ ಆರು ತಿಂಗಳು ಕಳೆದರೂ ಯೋಜನೆ ಅಳವಡಿಸಿ ಕೊಂಡ ಆಸ್ಪತ್ರೆಗಳ ಸಂಖ್ಯೆ 243 ಮಾತ್ರ. ಆರಂಭದಲ್ಲಿ ಸಹಿ ಹಾಕಿದ್ದ ಸುಮಾರು 25 ಆಸ್ಪತ್ರೆಗಳು ಒಪ್ಪಂದದಿಂದ ಹಿಂದೆ ಸರಿದಿವೆ. 700ಕ್ಕೂ ಹೆಚ್ಚು ಆಸ್ಪತ್ರೆಗಳು ಯೋಜನೆಗೆ ಒಳಪಡಲು ಮೀನಮೇಷ ಎಣಿಸುತ್ತಿವೆ.
- ದರ ಪರಿಷ್ಕರಣೆ ಸಮಸ್ಯೆ 'ರಾಜ್ಯ ಸರ್ಕಾರಿ ನೌಕರರು, ನಿಗಮ, ಮಂಡಳಿ, ಅನುದಾನಿತ ಸಂಸ್ಥೆಗಳ ಸಿಬ್ಬಂದಿ ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರು ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದ್ದಾರೆ. ಜ್ಯೋತಿ ಸಂಜೀವಿನಿ ಯೋಜನೆಯಲ್ಲಿ ಪುರುಷ ನೌಕರರ ತಂದೆ-ತಾಯಿಗೆ ಮಾತ್ರ ಸಿಗುತ್ತಿದ್ದ ಆರೋಗ್ಯ ಸೌಲಭ್ಯವನ್ನು ಹೊಸ ಯೋಜನೆಯಲ್ಲಿ ಮಹಿಳಾ ನೌಕರರ ತಂದೆ-ತಾಯಿಗೂ ವಿಸ್ತರಿಸಲಾಗಿತ್ತು.

- ಆದರೆ, ಆಸ್ಪತ್ರೆಗಳಿಗೆ ನೀಡುತ್ತಿರುವ ಚಿಕಿತ್ಸಾ ವೆಚ್ಚವನ್ನು ರಾಷ್ಟ್ರೀಯ ಆರೋಗ್ಯ ಯೋಜನೆಯ ದರಗಳಿಗೆ ಅನುಗುಣವಾಗಿ ಪರಿಷ್ಕರಿಸಿಲ್ಲ. ಹೆರಿಗೆ, ಕ್ಯಾನ್ಸರ್, ಶ್ವಾಸಕೋಶ ಸಮಸ್ಯೆ ಕಣ್ಣಿನ ಚಿಕಿತ್ಸೆ ಸೇರಿದಂತೆ ಬಹತೇಕ ಕಾಯಿಲೆಗಳ ಚಿಕಿತ್ಸಾ ವೆಚ್ಚ ಅತ್ಯಂತ ಕಡಿಮೆ ಇದೆ. ಅಷ್ಟು ಮೊತ್ತದಲ್ಲಿ ಸೌಲಭ್ಯ ನೀಡಲು ಸಾಧ್ಯವಿಲ್ಲ' ಎನ್ನುವುದು ಯೋಜನೆ ವ್ಯಾಪ್ತಿಯಿಂದ ಹೊರ ಹೋಗುತ್ತಿರುವ, ಯೋಜನೆ ಅಳವಡಿಸಿಕೊಳ್ಳಲು ಹಿಂದೇಟು ಹಾಕುತ್ತಿರುವ ಖಾಸಗಿ ಆಸ್ಪತ್ರೆಗಳ ವಾದ.
- ಸುವರ್ಣ ಕರ್ನಾಟಕ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್‌ಎಎಸ್‌ಟಿ) ಯೋಜನೆಯ ಅನುಷ್ಠಾನದ ಸಂಸ್ಥೆಯಾಗಿ ಹೊಣೆ ನಿರ್ವಹಿಸುತ್ತಿದ್ದು. ಎಲ್ಲ ವರ್ಗದ ನೌಕರರು ಪ್ರತಿ ತಿಂಗಳು ತಮ್ಮ ಪಾಲಿನ ಕಂತು ಪಾವತಿಸುತ್ತಿದ್ದಾರೆ. ಕಳೆದ ಆರು ತಿಂಗಳಲ್ಲಿ ನೌಕರರು ಪಾವತಿಸಿದ ಕಂತು ₹120 ಕೋಟಿಗೂ ಅಧಿಕ. ಟ್ರಸ್ಟ್ ಪಾವತಿಸಿರುವ ಚಿಕಿತ್ಸಾ ವೆಚ್ಚ ₹35 ಕೋಟಿ
- 'ಯೋಜನೆ ವ್ಯಾಪ್ತಿಗೆ ಒಳಪಡುವ ಎಲ್ಲ ನೌಕರರ ಕಂತನ್ನು ಅಕ್ಟೋಬರ್ ತಿಂಗಳ ವೇತನದಿಂದಲೇ ಕಟಾವು ಮಾಡಿ, ಖಜಾನೆ-2 ಮೂಲಕ ಟ್ರಸ್ಟ್ ಖಾತೆಗೆ ಜಮೆ ಮಾಡಲಾಗುತ್ತಿದೆ ಟ್ರಸ್ಟ್‌ನಲ್ಲಿ ಸಾಕಷ್ಟು ಹಣ ಸಂಗ್ರಹವಾದರೂ ರಾಜ್ಯದ ಪ್ರಮುಖ ಆಸ್ಪತ್ರೆಗಳು ಸೇರಿದಂತೆ ಬಹುತೇಕ ಖಾಸಗಿ ಆಸ್ಪತ್ರೆಗಳು ಯೋಜನೆ ಅಡಿ ಚಿಕಿತ್ಸೆ ನೀಡಲು ಒಲವು ತೋರಿಲ್ಲ. ಹಾಗಾಗಿ, ನೌಕರರಿಗೆ ಸ್ಥಳೀಯ ಆಸ್ಪತ್ರೆಗಳಲ್ಲಿ ಸೌಲಭ್ಯ ಸಿಗುತ್ತಿಲ್ಲ. ಯೋಜನೆ ನಿರೀಕ್ಷಿತ ಫಲ ನೀಡುತ್ತಿಲ್ಲ' ಎನ್ನುತ್ತಾರೆ ಶಿಕ್ಷಕ ಸದಾನಂದ.

**ಪಶ್ಚಿಮ ಏಷ್ಯಾ ಸಂಘರ್ಷದಿಂದ ಕಚ್ಚಾವಸ್ತು ಪೂರೈಕೆಯಲ್ಲಿ ವ್ಯತ್ಯಯ ಆತಂಕ**

## ರಸಗೊಬ್ಬರ ಸಾಗಣೆ, ಸಂಗ್ರಹದ ಮೇಲೆ ನಿಗಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದ ರಸಗೊಬ್ಬರ ಉತ್ಪಾದನೆಗೆ ಅಗತ್ಯವಿರುವ ಕಚ್ಚಾವಸ್ತುಗಳ ಪೂರೈಕೆಯಲ್ಲಿ ವ್ಯತ್ಯಯವಾಗುವ ಆತಂಕ ಎದುರಾಗಿದ್ದು, ಗೊಬ್ಬರ ಮಾರಾಟ ಮತ್ತು ಸಾಗಣೆ ಮೇಲೆ ನಿಗಾ ಇರಿಸಲು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಸೂಚಿಸಿದ್ದಾರೆ.

ಏಪ್ರಿಲ್ 1ರ ಅಂತ್ಯಕ್ಕೆ ರಾಜ್ಯದಲ್ಲಿ 11.42 ಲಕ್ಷ ಟನ್ ರಸಗೊಬ್ಬರ ದಾಸ್ತಾನು ಇದ್ದು, ಕೃಷಿಯೇತರ ಬಳಕೆ ಮತ್ತು ಹೊರರಾಜ್ಯಕ್ಕೆ ಅಕ್ರಮ ಸಾಗಣೆ ಆಗುವುದನ್ನು ತಡೆಗಟ್ಟಲು ಕೃಷಿ ಇಲಾಖೆ ಅಧಿಕಾರಿ ಗಳ ಜತೆ ನಡೆದ ಸಭೆಯಲ್ಲಿ ಸಚಿವರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಭಾರತಕ್ಕೆ ಯುಎಇ, ಸೌದಿ ಅರೇಬಿಯಾ, ಬಹ್ರೇನ್ ಮತ್ತು ರಷ್ಯಾದಿಂದ ರಸಗೊಬ್ಬರದ ಕಚ್ಚಾ ವಸ್ತು ಆಮದು ಮಾಡಿಕೊಳ್ಳಲಾಗುತ್ತದೆ. ಅಮೆರಿಕ– ಇಸ್ರೇಲ್ ಮತ್ತು ಇರಾನ್ ನಡುವಣ ಯುದ್ಧದ ಕಾರಣದಿಂದಾಗಿ ರಷ್ಯಾ ಹೊರತುಪಡಿಸಿ ಉಳಿದ ದೇಶಗಳಿಂದ ಕಚ್ಚಾವಸ್ತು ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಕೇಂದ್ರ ಸರ್ಕಾರವು ಮುಂಗಾರು ಹಂಗಾಮಿಗೆ ರಾಜ್ಯಕ್ಕೆ 30.05 ಲಕ್ಷ ಟನ್ ಗೊಬ್ಬರ ಹಂಚಿಕೆ ಮಾಡಿದೆ. ಆದರೆ, ಸಂಘರ್ಷದ ಕಾರಣದಿಂದ ಉತ್ಪಾದನೆ ಕುಸಿದರೆ. ಕೊರತೆಯಾಗುವ ಸಾಧ್ಯತೆ ಇದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ (ಕೆಎಸ್‌ಸಿಎಂಎಫ್) ಮತ್ತು ಕರ್ನಾಟಕ ಬೀಜ ನಿಗಮ (ಕೆಎಸ್‌ಎಸ್‌ಸಿ) ಮುಖಾಂತರ ಕಾಪು ದಾಸ್ತಾನು ವ್ಯವಸ್ಥೆಯನ್ನು ಬಲಪಡಿಸಿದೆ. ಕಾಪು ದಾಸ್ತಾನಿನಲ್ಲಿ ಈಗ 28,224 ಟನ್ ಗೊಬ್ಬರ ಲಭ್ಯವಿದೆ.




**11.42** ಲಕ್ಷ ಟನ್
ರಾಜ್ಯದಲ್ಲಿ ಈಗ ಇರುವ ರಸಗೊಬ್ಬರ ದಾಸ್ತಾನು

- ಮೂರು ವರ್ಷಗಳಲ್ಲಿ ಜಿಲ್ಲಾವಾರು ಗೊಬ್ಬರ ಬಳಕೆ ಪ್ರಮಾಣದ ಸರಾಸರಿಯನ್ನು ಆಧರಿಸಿ, ಪ್ರತಿ ಜಿಲ್ಲೆಗೆ ಗೊಬ್ಬರ ಹಂಚಿಕೆಯನ್ನು ಮರುನಿರ್ಧಾರ ಮಾಡಲಾಗಿದೆ. ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಪೂರೈಕೆಯಲ್ಲಿ ವ್ಯತ್ಯಯವಾಗದೆ ಇರುವ ರೀತಿಯಲ್ಲಿ ಕಿರು ಯೋಜನೆ ರೂಪಿಸಲಾಗಿದೆ
- ರಾಜ್ಯದಲ್ಲಿ ಯೂರಿಯಾ ಬಳಕೆ ನಿಯಂತ್ರಿಸಲು 'ಫ್ರೂಟ್ಸ್' ದತ್ತಾಂಶ ಆಧಾರದಲ್ಲಿ 'ಯೂರಿಯಾ ವಿತರಣಾ ಅಪ್ಲಿಕೇಷನ್' ಅನ್ನು ರೂಪಿಲಾಗಿದ್ದು, ಆಯ್ದ ಎಂಟು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿ
- ಪ್ರತಿ ವಾರ ವಿಡಿಯೊ ಸಂವಾದ ಮತ್ತು ಸಭೆಗಳ ಮೂಲಕ ಗೊಬ್ಬರ ಪೂರೈಕೆ, ಮಾರಾಟ ಮತ್ತು ಸಂಗ್ರಹ ಸ್ಥಿತಿಯ ಮೇಲ್ವಿಚಾರಣೆ
- ಸಾವಯವ ಕೃಷಿ ಮತ್ತು ನೈಸರ್ಗಿಕ ಕೃಷಿ ಪದ್ಧತಿ ಅಳವಡಿಕೆ, ಜೈವಿಕ ಗೊಬ್ಬರ ಮತ್ತು ನೈಸರ್ಗಿಕ ಗೊಬ್ಬರ ಬಳಕೆ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲು ಕಾರ್ಯಕ್ರಮ
- 'ವಸುಧಾಮೃತ' ಯೋಜನೆಯಡಿ ರೈತರಿಗೆ ರಿಯಾಯಿತಿ ದರದಲ್ಲಿ ಸಾವಯವ ಹಾಗೂ ಜೈವಿಕ ಗೊಬ್ಬರಗಳನ್ನು ಒದಗಿಸಲು ಕ್ರಮ

# 'ಬಾಬೂ ಜಗಜೀವನ್ ರಾಮ್' ಪ್ರಶಸ್ತಿಗೆ ಐವರು ಆಯ್ಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಸರ್ಕಾರ ನೀಡುವ 2026ನೇ ಸಾಲಿನ ಬಾಬೂ ಜಗಜೀವನ್ ರಾಮ್ ಪ್ರಶಸ್ತಿಗೆ ಸಾಮಾಜಿಕ ಕಾರ್ಯಕರ್ತೆ ಬೆಂಗಳೂರಿನ ಚಂದ್ರಮ್ಮ ಸೇರಿದಂತೆ ಐವರು ಭಾಜನರಾಗಿದ್ದಾರೆ.

ರಾಯಚೂರು ಜಿಲ್ಲೆ ಆಶಾಪುರದ ಜಾನಪದ ಕಲಾವಿದ ಡಿಂಗ್ರಿ ನರಸಪ್ಪ, ಬೆಳಗಾವಿಯ ಪತ್ರಕರ್ತ ಸರಜೂ ಕಾಟ್ಕರ್, ಮೈಸೂರಿನ ಮಾಜಿ ಮೇಯರ್ ನಾರಾಯಣ, ತುಮಕೂರಿನ ನಗರಸಭೆ ಮಾಜಿ ಸದಸ್ಯ ನರಸೀಯಪ್ಪ ಪ್ರಶಸ್ತಿಗೆ ಆಯ್ಕೆಯಾಗಿದ್ದು, ಸಮಾಜ ಕಲ್ಯಾಣ ಇಲಾಖೆ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಪ್ರಶಸ್ತಿಯು ತಲಾ ₹5 ಲಕ್ಷ ನಗದು, 20 ಗ್ರಾಂ ಚಿನ್ನದ ಪದಕವನ್ನು ಒಳಗೊಂಡಿದೆ. ಬಾಬೂ ಜಗಜೀವನ್ ರಾಮ್ ಅವರ ಜನ್ಮದಿನವಾದ ಏ.5ರಂದು ವಿಧಾನಸೌಧದ ಆವರಣದಲ್ಲಿ ಆಯೋಜಿಸಲಾಗುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆ ಅಯುಕ್ತ ರಾಕೇಶ್‌ಕುಮಾರ್ ಮಾಹಿತಿ ನೀಡಿದ್ದಾರೆ.

## ಪ್ರಶಸ್ತಿ ಪುರಸ್ಕೃತರ ವಿವರ



ಚಂದ್ರಮ್ಮ

**ಚಂದ್ರಮ್ಮ:** ಚಂದ್ರಮ್ಮ ಅವರು ಸಾವಿತ್ರಿಬಾಯಿ ಫುಲೆ ಸಂಘದ ಅಧ್ಯಕ್ಷರಾಗಿದ್ದು, ಬೆಂಗಳೂರಿನ ಹಕ್ಕಿ– ಪಿಕ್ಕಿ ಜನಾಂಗದ ಕೊಳೆಗೇರಿಗಳಲ್ಲಿ ವಾಸಿಸುವ ದಲಿತ ಮಹಿಳೆಯರಿಗೆ ಭೂಮಿ, ಮನೆಗಳನ್ನು ಮಂಜೂರು ಮಾಡಿಸುವುದು, ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದು. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಮೂಲಕ ದಲಿತ ಕುಟುಂಬಗಳಿಗೆ ಸೇವೆ ಮಾಡುತ್ತಾ ಬಂದಿದ್ದಾರೆ.



ಡಿಂಗ್ರಿ ನರಸಪ್ಪ

**ಡಿಂಗ್ರಿ ನರಸಪ್ಪ:** ಡಿಂಗ್ರಿ ನರಸಪ್ಪ ಅವರು 18ನೇ ವಯಸ್ಸಿಗೇ ದಲಿತ ಚಳವಳಿಗೆ ಧುಮುಕಿದವರು. ತಮಟೆ ವಾದ್ಯದಲ್ಲಿ ರಾಜ್ಯದಲ್ಲೇ ಪ್ರಸಿದ್ಧಿ ಪಡೆದಿರುವ ಅವರು ಶ್ರುತಿ ಸಂಸ್ಕೃತಿ ಸಂಸ್ಥೆ ಕಟ್ಟಿ ಕಿಶೋರಿಯರಿಗೆ ತಮಟೆ, ಹಾಡುಗಾರಿಕೆ ಹಾಗೂ ಬೀದಿನಾಟಕ ಕಲಿಕಾ ತರಬೇತಿ ಕಾರ್ಯಗಾರಗಳನ್ನು 40 ವರ್ಷಗಳಿಂದ ನಿರ್ವಹಿಸುತ್ತಿದ್ದಾರೆ.



ಸರಜೂ ಕಾಟ್ಕರ್

**ಸರಜೂ ಕಾಟ್ಕರ್:** ಸರಜೂ ಕಾಟ್ಕರ್ ಅವರು ದಲಿತ ಬಂಡಾಯ ಸಾಹಿತ್ಯ ಸಂಘಟನೆ ಹಾಗೂ ಚಳವಳಿಗಳಲ್ಲಿ ತೊಡಗಿಸಿಕೊಂಡು ಸಾಮಾಜಿಕ ನ್ಯಾಯಕ್ಕಾಗಿ ದುಡಿದಿದ್ದಾರೆ. ಪತ್ರಕರ್ತರಾಗಿ ಅಂಬೇಡ್ಕರ್ ಚಿಂತನೆಗಳನ್ನು ಪ್ರಸಾರ ಮಾಡಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೇ ಶೋಷಿತರ ಪರ ಧ್ವನಿ ಎತ್ತಿದ್ದಾರೆ.



ನಾರಾಯಣ

**ನಾರಾಯಣ:** ನಾರಾಯಣ ಅವರು ಪೌರಕಾರ್ಮಿಕ ಸಮುದಾಯ ಅನುಭವಿಸುತ್ತಿದ್ದ ಕಷ್ಟ ಕಾರ್ಪಣ್ಯಗಳನ್ನು ಕಣ್ಣಾರೆ ಕಂಡವರು. ಪೌರ ಕಾರ್ಮಿಕರಾಗಿ ವೃತ್ತಿಜೀವನ ಆರಂಭಿಸಿದ್ದ ಅವರು ದೌರ್ಜನ್ಯ ಮತ್ತು ದಬ್ಬಾಳಿಕೆಯ ವಿರುದ್ಧ ನ್ಯಾಯಯುತ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಾ ಬಂದಿದ್ದಾರೆ. ವಸತಿರಹಿತರಿಗೆ ಸೂರು ಕಲ್ಪಿಸಲು ಶ್ರಮಿಸಿದ್ದಾರೆ. ಮೈಸೂರು ಮಹಾನಗರ ಪಾಲಿಕೆಯ ಸದಸ್ಯ, ಮೇಯರ್ ಆಗಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ.



ನರಸೀಯಪ್ಪ

**ನರಸೀಯಪ್ಪ:** ನರಸೀಯಪ್ಪ ಅವರು ಬಡತನ ಮತ್ತು ಅಸ್ಪೃಶ್ಯತೆ ಕಾರಣಕ್ಕೆ ವಿದ್ಯಾಭ್ಯಾಸವನ್ನು ಅರ್ಧದಲ್ಲಿಯೇ ತೊರೆದಿದ್ದರು. ಮೂಟೆ ಹೊರುವ ಹಮಾಲಿಯಾಗಿ ದುಡಿಮೆ ಆರಂಭಿಸಿದ್ದ ಅವರು ಅನುಭವಿಸಿದ ಅವಮಾನ, ಸಂಕಟ ಮತ್ತು ನೋವುಗಳನ್ನೇ ಸಾಧನಗಳನ್ನಾಗಿ ಮಾಡಿಕೊಂಡು ನಾಯಕತ್ವದ ಗುಣ ಬೆಳೆಸಿಕೊಂಡಿದ್ದರು. ಹಮಾಲಿಗಳ ಬದುಕನ್ನು ಹಸನುಗೊಳಿಸಲು ಹಮಾಲಿಗಳ ಸಂಘ ಸ್ಥಾಪಿಸಿ ಹೋರಾಟ ಮಾಡಿದ್ದರು. ಕರ್ನಾಟಕದ ಸಾಮಾಜಿಕ ಚಳವಳಿ, ದಲಿತ ಸಂಘರ್ಷ ಸಮಿತಿಯ ಬೆಳವಣಿಗೆಗೆ ಶ್ರಮಿಸಿದ್ದಾರೆ.

## ❖ ಬಸವರಾಜ ಆಚಾರ್‌ಗೆ 'ಪ್ರಿಂಟ್ ಬಿನಾಲೆ ಇಂಡಿಯಾ' ಪ್ರಶಸ್ತಿ

**ಸಂದರ್ಭ: ಹಾಸನ ಜಿಲ್ಲೆಯ ಕಲಾವಿದ ಕೆ.ಆರ್.ಬಸವರಾಜ ಆಚಾರ್ ಅವರಿಗೆ ಕೇಂದ್ರ ಲಲಿತಕಲಾ ಅಕಾಡೆಮಿ ಕೊಡುವ ಅಂತರರಾಷ್ಟ್ರೀಯ ಮಟ್ಟದ 'ಪ್ರಿಂಟ್ ಬಿನಾಲೆ ಇಂಡಿಯಾ' ಪ್ರಶಸ್ತಿ ಲಭಿಸಿದೆ. ಪ್ರಶಸ್ತಿ ಮೊತ್ತ 12 ಲಕ್ಷ ನಗದು, ಪಾರಿತೋಷಕ ಹಾಗೂ ಪ್ರಮಾಣಪತ್ರ ಒಳಗೊಂಡಿದೆ.**



ಬಸವರಾಜ ಆಚಾರ್

- ಮುದ್ರಣ ಮಾಧ್ಯಮದ ಕಲೆ ಉತ್ತೇಜಿಸುವ ದೃಷ್ಟಿಯಿಂದ ಪ್ರಪಂಚದಾದ್ಯಂತ ಇರುವ ವೃತ್ತಿಪರ ಐವರು ಕಲಾವಿದರನ್ನು ಗುರುತಿಸಿ ಪ್ರಶಸ್ತಿ ಕೊಡಲಾಗುತ್ತದೆ. ಇದರಲ್ಲಿ ಭಾರತಕ್ಕೆ ಎರಡು ಪ್ರಶಸ್ತಿ ಬಂದಿದೆ. ಬಸವರಾಜ ಆಚಾರ್ ಜೊತೆಗೆ, ಮಧ್ಯಪ್ರದೇಶದ ಭೋಪಾಲ್‌ನ ರವೀಂದ್ರ ರಾಯ್ ಅವರಿಗೆ ಪ್ರಶಸ್ತಿ ಲಭಿಸಿದೆ.
- ಜೊತೆಗೆ ಫ್ರಾನ್ಸ್, ಪೋಲೆಂಡ್, ಕೊರಿಯಾ ದೇಶದ ತಲಾ ಒಬ್ಬೊಬ್ಬರು ಕಲಾವಿದರು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ ಭಾರತ ಹಾಗೂ ಇತರೆ 34 ದೇಶಗಳಿಂದ ಸುಮಾರು 1449 ಪ್ರವೇಶಗಳು ಬಂದಿದ್ದವು.

## ❖ ಪೋಕ್ಸ್ ಪ್ರಕರಣ: ಖಾಸಗಿ ಆಸ್ಪತ್ರೆಗಳಿಗೂ ವರದಿ ಕಡ್ಡಾಯ

**ಸಂದರ್ಭ: ಬಾಲ ಗರ್ಭಿಣಿ ಪ್ರಕರಣಗಳ ವಿವರವನ್ನು ಖಾಸಗಿ ಆಸ್ಪತ್ರೆಗಳೂ ಕಡ್ಡಾಯವಾಗಿ ಪೋಟೊ ಕಾಯ್ದೆಯಡಿ ವರದಿ ಮಾಡಬೇಕು ಎಂದು ಸೂಚಿಸಿರುವ ಆರೋಗ್ಯ ಇಲಾಖೆ, ಒಂದು ವೇಳೆ ವರದಿ ಮಾಡಲು ವಿಫಲವಾದಲ್ಲಿ ವೈದ್ಯರು ಮತ್ತು ಆಸ್ಪತ್ರೆಗಳ ವಿರುದ್ಧ ಕಾನೂನಿನಡಿ ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಸಿದೆ.**

- ಪೋಕ್ಸೊ ಕಾಯ್ದೆ ಅನ್ವಯ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ, ಬಾಲ ಗರ್ಭಿಣಿ ಪ್ರಕರಣಗಳ ವಿವರವನ್ನು ಕಾನೂನುಬದ್ಧವಾಗಿ ವರದಿ ಮಾಡಬೇಕಿದೆ. ಯಾವುದೇ ಬಾಲ ಗರ್ಭಿಣಿ ಖಾಸಗಿ ಆಸ್ಪತ್ರೆಗೆ ದಾಖಲಾದಲ್ಲಿ ಸಂಬಂಧಿತ ವೈದ್ಯರು ತಕ್ಷಣ ಸಮೀಪದ ವಿಶೇಷ ಬಾಲ ನ್ಯಾಯ ಪೊಲೀಸ್ ಘಟಕ ಅಥವಾ ಪೊಲೀಸ್ ಠಾಣೆಗೆ ಕಡ್ಡಾಯವಾಗಿ ಮಾಹಿತಿ ನೀಡಬೇಕು ಎಂದು ತಿಳಿಸಿದೆ.
- ಇಂತಹ ಪ್ರಕರಣಗಳು ದಾಖಲಾದ ಸಂದರ್ಭದಲ್ಲಿ ತಕ್ಷಣವೇ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಕ್ಕೆ ಕರೆ ಮಾಡಿ, ಮಾಹಿತಿ ನೀಡಬೇಕು. ಇದರಿಂದ ರಕ್ಷಣಾತ್ಮಕ ಮತ್ತು ಪುನರ್ವಸತಿ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದೆ.
- ಖಾಸಗಿ ಆಸ್ಪತ್ರೆಗಳು ಪೋಕ್ಸ್ ಪ್ರಕರಣದ ವಿವರಗಳನ್ನು ಸೂಕ್ತವಾಗಿ ದಾಖಲಿಸಬೇಕು. ವೈದ್ಯಕೀಯ ದಾಖಲೆಗಳನ್ನು ಕಾನೂನುಬದ್ಧವಾಗಿ ಸಂಗ್ರಹಿಸಬೇಕು ರೋಗಿಯ ಗೋಪ್ಯತೆಯನ್ನು ಕಾಪಾಡಬೇಕು ತನಿಖಾ ಅಧಿಕಾರಿಗೆ ಅಗತ್ಯ ಸಹಕಾರ ನೀಡಬೇಕು. ಎಲ್ಲ ಖಾಸಗಿ ಆಸ್ಪತ್ರೆಗಳು ತಮ್ಮ ವೈದ್ಯರು ಹಾಗೂ ಸಿಬ್ಬಂದಿಗೆ ಪೋಟೊ ಕಾಯ್ದೆಯ ವಿಧಿನಿಯಮಗಳ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಸೂಚಿಸಲಾಗಿದೆ.

## ❖ ವಿಶ್ವಸಂಸ್ಥೆ: ಹೊರ್ಮುಜ್ ತೆರೆಸುವ ಪ್ರಸ್ತಾವ ಮತಕ್ಕೆ

**ಸಂದರ್ಭ: ಸೇನಾ ಶಕ್ತಿ ಬಳಸಿ ಹೊರ್ಮುಜ್ ಜಲಸಂಧಿಯನ್ನು ಜಾಗತಿಕ ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸುವ ಪ್ರಸ್ತಾವವನ್ನು ರಷ್ಯಾ ಮತ್ತು ಚೀನಾ ವಿರೋಧದ ಮಧ್ಯೆಯೂ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಮತಕ್ಕೆ ಹಾಕಲು ನಿರ್ಧರಿಸಲಾಗಿದೆ.**

- ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಸೃಷ್ಟಿಯಾದ ನಂತರ ಹೊರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿದೆ. ವಿಶ್ವದ ಐದನೇ ಒಂದರಷ್ಟು ತೈಲ ಈ ಮಾರ್ಗದಿಂದ ಸಾಗಣೆಯಾಗುತ್ತದೆ. ಹಡಗು ಸಂಚಾರಕ್ಕೆ ಆದ ಅಡ್ಡಿಯು ಜಾಗತಿಕವಾಗಿ ತೈಲ ಬೆಲೆಯ ಭಾರಿ ಏರಿಕೆ ಮತ್ತು ಆರ್ಥಿಕತೆಯ ಕುಸಿತಕ್ಕೆ ಕಾರಣವಾಗಿದೆ.

- ಹೊರ್ಮುಜ್ ಜಲಸಂಧಿಯನ್ನು ಸೇನಾ ಪಡೆ ಬಳಸಿ ಮುಕ್ತಗೊಳಿಸುವ ಪ್ರಸ್ತಾವ ಇದಾಗಿದೆ. ಆದರೆ ಭದ್ರತಾ ಮಂಡಳಿಯಲ್ಲಿ ವೀಟೊ ಅಧಿಕಾರ ಹೊಂದಿರುವ 5 ಸದಸ್ಯ ರಾಷ್ಟ್ರಗಳ ಪೈಕಿ ಚೀನಾ ಮತ್ತು ರಷ್ಯಾ ಸೇನಾ ಬಲ ಬಳಕೆಗೆ ವಿರೋಧ ವ್ಯಕ್ತಪಡಿಸಿವೆ. ಇದರ ಮಧ್ಯೆಯೂ 'ಬಹರೇನ್ ಪ್ರಸ್ತಾವ'ದ ಕರಡು ಅಂತಿಮಗೊಂಡಿದೆ.
- ಯಾವುದೇ ಹಾನಿ ಮಾಡದೇ ರಕ್ಷಣಾತ್ಮಕವಾಗಿ ಪಡೆಗಳನ್ನು ಬಳಸಬೇಕು ಎಂಬ ಅಂಶ ಪ್ರಸ್ತಾವದಲ್ಲಿದೆ. ಬಹುರಾಷ್ಟ್ರೀಯ ನೌಕಾ ಪಾಲುದಾರಿಕೆ ಹೊಂದಿರುವ ದೇಶಗಳು 'ಹೊರ್ಮುಜ್ ಜಲಸಂಧಿ, ಕೊಲ್ಲಿ ಮತ್ತು ಗಲ್ಸ್ ಆಫ್ ಒಮನ್'ನಲ್ಲಿ ಹಡಗುಗಳ ಮುಕ್ತ ಸಂಚಾರಕ್ಕೆ 'ಎಲ್ಲ ಅಗತ್ಯ ವಿಧಾನ ಅನುಸರಿಸಲು ಅವಕಾಶ ಕಲ್ಪಿಸುತ್ತದೆ' ವಿಶ್ವಸಂಸ್ಥೆ ಪ್ರಕಾರ ಸೇನಾ ಕಾರ್ಯಾಚರಣೆಯ ಸಾಧ್ಯತೆಯೂ ಇದರಲ್ಲಿದೆ.
- ಕನಿಷ್ಠ ಆರು ತಿಂಗಳವರೆಗಾದರೂ ಈ ಮಾರ್ಗವನ್ನು ಅಂತರರಾಷ್ಟ್ರೀಯ ಹಡಗು ಸಂಚಾರಕ್ಕೆ ಸುರಕ್ಷಿತಗೊಳಿಸಲು ಹೊಣೆ ಹೊತ್ತ ರಾಷ್ಟ್ರಗಳು ಎಲ್ಲ ರೀತಿಯ ರಕ್ಷಣಾತ್ಮಕ ಕ್ರಮ ಕೈಗೊಳ್ಳಬಹುದು. ಈ ಬಗ್ಗೆ 'ಮುಂಚಿತವಾಗಿ ಭದ್ರತಾ ಮಂಡಳಿಯ ಗಮನಕ್ಕೆ ತರಬೇಕು' ಎಂಬ ಅಂಶ ಪ್ರಸ್ತಾವದಲ್ಲಿದೆ.

## ❖ 'ರಫ್ತು ಸದೃಢ ನಿರೀಕ್ಷೆ'

**ಸಂದರ್ಭ: ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಬಿಕ್ಕಟ್ಟಿನ ನಡುವೆಯೂ 2025-26ರ ಆರ್ಥಿಕ ವರ್ಷದಲ್ಲಿ ದೇಶದ ರಫ್ತು, ವಹಿವಾಟು ಏರಿಕೆ ಕಾಣುವ ನಿರೀಕ್ಷೆ ಇದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.**

- 2025-26ರ ಪೂರ್ಣ ಆರ್ಥಿಕ ವರ್ಷದ ರಫ್ತು, ಮತ್ತು ಆಮದು ದತ್ತಾಂಶವನ್ನು ಏಪ್ರಿಲ್ 15ರಂದು ನಾಣಿಜ್ಯ ಸಚಿವಾಲಯ ಬಿಡುಗಡೆ ಮಾಡಲಿದೆ.
- ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಅಮೆರಿಕದ ಸುಂಕಗಳು, ಉಕ್ರೇನ್ ಯುದ್ಧ, ಇರಾನ್ ಸಂಘರ್ಷ ಸೇರಿದಂತೆ ಹಲವಾರು ಅಡಚಣೆಗಳು ಉಂಟಾಗಿವೆ. ಆದರೂ, ದೇಶದ ರಫ್ತು, ವಹಿವಾಟು ಸಕಾರಾತ್ಮಕವಾಗಿರಬಹುದು ಎಂದು ಹೇಳಿದ್ದಾರೆ.
- ಫೆಬ್ರುವರಿಯಲ್ಲಿ ದೇಶದ ಸರಕುಗಳ ರಫ್ತು, ಶೇ 0.81ರಷ್ಟು ಇಳಿಕೆಯಾಗಿ, ₹3.39 ಲಕ್ಷ ಕೋಟಿಯಷ್ಟಾಗಿತ್ತು. ವ್ಯಾಪಾರ ಕೊರತೆಯು ₹2.50 ಲಕ್ಷ ಕೋಟಿಯಾಗಿದೆ.
- 2025-26ರ ಎಪ್ರಿಲ್‌ನಿಂದ ಫೆಬ್ರುವರಿ ತಿಂಗಳವರೆಗೆ ದೇಶದ ಸರಕುಗಳ ಒಟ್ಟು ರಫ್ತು ಪ್ರಮಾಣದಲ್ಲಿ ಶೇ 1.84ರಷ್ಟು ಹೆಚ್ಚಳವಾಗಿದ್ದು, ₹37.31 ಲಕ್ಷ ಕೋಟಿಯಾಗಿದೆ. ಆಮದು ಶೇ8.53ರಷ್ಟು ಏರಿಕೆಯಾಗಿದ್ದು, ₹66 ಲಕ್ಷ ಕೋಟಿಯಷ್ಟಾಗಿದೆ. ವ್ಯಾಪಾರ ಕೊರತೆ ₹28.76 ಲಕ್ಷ ಕೋಟಿಯಷ್ಟಾಗಿದೆ.

## ❖ 50 ವರ್ಷಗಳ ಬಳಿಕ ನಾಸಾ ಕೈಗೊಂಡ ಯೋಜನೆ: ಚಂದ್ರನತ್ತ ಹೊರಟ 'ಅರ್ಟೆಮಿಸ್-2'

**ಸಂದರ್ಭ: ಐದು ದಶಕಗಳ ಬಳಿಕ ಚಂದ್ರನ ಕಕ್ಷೆಗೆ ಗಗನಯಾನಿಗಳನ್ನು ಕಳುಹಿಸಲು ಮುಂದಾಗಿರುವ ನಾಸಾ, ತನ್ನ ಮಹತ್ವಾಕಾಂಕ್ಷೆಯ ಬಾಹ್ಯಾಕಾಶ ಕಾರ್ಯಕ್ರಮ 'ಆರ್ಟೆಮಿಸ್-2'ರ ರಾಕೆಟ್ ಅನ್ನು ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಯಶಸ್ವಿಯಾಗಿ ಉಡಾವಣೆ ಮಾಡಿದೆ.**

- ಗಗನನೌಕೆ ಹೊತ್ತ ರಾಕೆಟ್ ವರ್ಷದ ಆರಂಭದಲ್ಲಿಯೇ ಅಂತರಿಕ್ಷಯಾನ ಆರಂಭಿಸಬೇಕಿತ್ತು. ಆದರೆ, ಉಡ್ಡ ಯನಕ್ಕೂ ಕೆಲ ಗಂಟೆಗಳ ಮುನ್ನ ರಾಕೆಟ್‌ನಲ್ಲಿನ ಇಂಧನ ಜಲಜನಕ ಸೋರಲು ಆರಂಭಿಸಿದ್ದರಿಂದ ಉಡ್ಡಯನ ವನ್ನು ಮುಂದೂಡಲಾಗಿತ್ತು.
- 32 ಮಹಡಿಯ ಈ ರಾಕೆಟ್ ಗೆ 26 ಲಕ್ಷ ಲೀಟರ್ ಇಂಧನ ತುಂಬಬೇಕಿತ್ತು. ಈ ಕಾರ್ಯ ಪೂರ್ಣಗೊಂಡ ಬಳಿಕ ರಾಕೆಟ್ ನಭಕ್ಕೆ ಚಿಮ್ಮಿದೆ.
- 10 ದಿನಗಳ ಕಾಲ ಯೋಜನೆಯು ನಡೆಯಲಿದ್ದು, ಅಮೆರಿಕದ ರೀಡ್ ವೈಸ್‌ಮನ್, ವಿಕ್ಟರ್ ಗೋವರ್, ಕ್ರಿಸ್ಟಿನಾ ಕೋಚ್ ಹಾಗೂ ಕೆನಡಾದ ಜೆರೆಮಿ ಹ್ಯಾನ್ಸನ್ ತಂಡದಲ್ಲಿದ್ದಾರೆ.

Dr. Rajkumar IAS/KAS Academy

- ಉಡಾವಣೆಗೊಂಡ 25 ಗಂಟೆಗಳ ನಂತರ ನಾಲ್ವರೂ ಭೂಮಿಯ ಕಕ್ಷೆಯಿಂದ ಹೊರಗೆ ಇದ್ದರೂ, ಭೂಮಿಗೆ ಹತ್ತಿರವೇ ಇರಲಿದ್ದಾರೆ. ಕೋಶವನ್ನು (ಕ್ಯಾಪ್ಸುಲ್) ಭೂಮಿಯ ಹತ್ತಿರ ಪರೀಕ್ಷಿಸಲಿದ್ದಾರೆ. ನಂತರ ಚಂದ್ರನ ಸಮೀಪದಲ್ಲಿ ಪ್ರಯಾಣಿ ಸಲಿದ್ದಾರೆ ನಿಗದಿತ ಅವಧಿವರೆಗೆ ಪರಿಭ್ರಮಣೆ ಮಾಡಿದ ಬಳಿಕ ಅವರು ಭೂಮಿಗೆ ಮರಳಲಿದ್ದು, ಅವರನ್ನು ಹೊತ್ತ ಬಾಹ್ಯಾಕಾಶ ಕೋಶವು ಪೆಸಿಫಿಕ್ ಸಾಗರದಲ್ಲಿ ಇಳಿಯಲಿದೆ.
- 'ಎಲ್ಲ ನನ್ನ ಮಿತ್ರರೇ, 1972ರ ಅಪೋಲೊ-17ರ ನಂತರ ಮಾನವರು ಭೂಮಿಯ ಕಕ್ಷೆಯನ್ನು ದಾಟಿ ಮುಂದೆ ಸಾಗಿದ್ದಾರೆ' ಎಂದು ನಾಸಾದ ಹಿರಿಯ ವಿಜ್ಞಾನಿ ಲೊರೊ ಗೋಜ್ ತಿಳಿಸಿದ್ದಾರೆ.
- 'ರಾಕೆಟ್ ಇಂಧನ ತುಂಬಿಸುವ ಪ್ರಕ್ರಿಯೆಯಲ್ಲಿ ಯಾವುದೇ ಲೋಪವಾಗಲಿಲ್ಲ' ಎಂದು ಹೇಳಿದ್ದಾರೆ.
- 'ಮಾನವೀಯ ಸಾಮರ್ಥ್ಯ ಏನೆಂಬುದನ್ನು ಮತ್ತೊಮ್ಮೆ ತೋರಿಸಿದೆ. ನಿಮ್ಮ ಭವಿಷ್ಯದ ಭರವಸೆಗಳೇ ನಮ್ಮನ್ನು ಚಂದ್ರನ ಸುತ್ತ ಈ ಪ್ರಯಾಣದಲ್ಲಿ ಕರೆದೊಯ್ದಿದೆ' ಎಂದು ಗಗನಯಾನಿ ಜೆರೆಮಿ ಹ್ಯಾನ್ಸನ್ ತಿಳಿಸಿದ್ದಾರೆ.
- 1972ರಲ್ಲಿ ಅಪೋಲೊ-17 ಕಾರ್ಯಕ್ರಮದಡಿ ಗಗನಯಾನಿಗಳು ಕೊನೆಯದಾಗಿ ಚಂದ್ರನ ಅಂಗಳದಲ್ಲಿ ಇಳಿದಿದ್ದರು.

## ❖ ಎನ್‌ಸಿಇಆರ್‌ಟಿಗೆ ಡೀಮ್ಡ್ ವಿಶ್ವವಿದ್ಯಾಲಯ ಸ್ಥಾನಮಾನ

**ಸಂದರ್ಭ: ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್ ಸಿಇಆರ್‌ಟಿ) ಮತ್ತು ಅದರ ಆರು ಘಟಕಗಳಿಗೆ ಶಿಕ್ಷಣ ಸಚಿವಾಲಯವು ವಿಶಿಷ್ಟ ವರ್ಗದಡಿ ಡೀಮ್ಡ್ ವಿಶ್ವವಿದ್ಯಾಲಯ ಸ್ಥಾನಮಾನವನ್ನು ನೀಡಿದೆ.**

- ಆ ಮೂಲಕ ಎನ್‌ಸಿಇಆರ್‌ಟಿಯ ಅಧಿಕಾರವನ್ನು ವಿಸ್ತರಿಸಲಾಗಿದೆ ಮತ್ತು ಅದನ್ನು ಯುಜಿಸಿ ವ್ಯಾಪ್ತಿಗೆ ತರಲಾಗಿದೆ. ಜೊತೆಗೆ ಎನ್‌ಸಿಇಆರ್‌ಟಿ ತನ್ನದೇ ಆದ ಕೋರ್ಸ್‌ಗಳನ್ನು ವಿನ್ಯಾಸಗೊಳಿಸಲು, ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ನೀಡಲು ಸಾಧ್ಯವಾಗುತ್ತದೆ.
- ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಸಲಹೆಯ ಮೇರೆಗೆ ಶಿಕ್ಷಣ ಸಚಿವಾಲಯವು ಈ ಸ್ಥಾನಮಾನ ನೀಡಿದೆ ಎಂದು ಪ್ರಕಟಣೆ ತಿಳಿಸಿದೆ.

-----------------------------------------ಶುಭವಂದನೆಗಳು---------------------------------------

Dr. Rajkumar IAS Academy